
ಕೊಡಗು ಸಂಗಾತಿ

ಸೆಪ್ಟಂಬರ್ 1 ರಿಂದ 30, 2003 ಪಾಕ್ಷಿಕ ಪತ್ರಿಕೆ (ಸೋಣ್ಣಂಗ 15-31, ನಿರ್ಕಾಲ 1-13)

12058, ಸಂಗಾತಿ ನಿಲಯ, ವಿಜಯನಗರ 4ನೇ ಹಂತ, 2ನೇ ಘಟಕ, ಹಿನ್‌ಕಲ್ ಅಂಚೆ, ಮೈಸೂರು - ೫೭೦ ೦೧೭

ಸಂಪಾದಕಿ : ಪಟ್ಟಡ ಶೀಲಾಮಣಿ Registered : 10-01-96 TCI Kar. 09592 ಕನ್ನಡ ಮತ್ತು ಅರೆಗನ್ನಡ ಭಾಷೆಲಿ ಪ್ರಕಟಿತ

RNo. : KA/SK/MYS-88/2003 ಸಂಪುಟ : 7 ಸಂಚಿಕೆ : 11-12 ಪುಟಗಳು : 24 ಬೆಲೆ ರೂ. : 12-00







ಅಜ್ಜೇಟಿರ ಬಿದ್ದಪ್ಪ



ಪಿ.ಡಿ. ವರ್ಗೀಸ್

: ಲೇಖನ ಒಳಪುಟದಲ್ಲಿ

ಅಗಸ್ಟ್ ತಿಂಗಳಲ್ಲಿ ಕೊಡಗಿನ ಇಬ್ಬರು ಯೋಧರ ದುರ್ಮರಣ.

ಕಾರುಗುಂದದ ಅಜ್ಜೇಟೀರ ಬಿದ್ದಪ್ಪ ಮತ್ತು ಸುಂಟಿಕೊಪ್ಪದ ಪಿ.ಡಿ.ವರ್ಗೀಸ್.


ಹಾರ್ದಿಕ ಅಭಿನಂದನೆಗಳು



ಡಾ|| ಜಿ.ಜಿ. ವಿಜಯಾನಂದ

ಮೂಲತ ಕೊಡಗಿನ ಬಲಮುರಿ ಗ್ರಾಮದ ಹಾಲಿ ಮೈಸೂರು ನಿವಾಸಿ ಗುಡ್ಡೆಮನೆ ಕುಮಾರಪ್ಪ ಮತ್ತು ಸುಶೀಲಾ ದಂಪತಿಗಳ ಪ್ರಥಮ ಪುತ್ರ ಡಾ|| ವಿಜಯಾನಂದ ಇವರು ದಕ್ಷಿಣಾ ಆಫ್ರಿಕಾದ ಡರ್ಬಾನ್‌ನ "ಡರ್ಬಾನ್ ವೆಸ್ಟ್‌ವಿಲ್ಲೆ" ವಿಶ್ವವಿದ್ಯಾಲಯದಿಂದ ಉನ್ನತ ಶಿಕ್ಷಣ ಪಡೆದು ಡಾಕ್ಟರೇಟ್ ಪದವಿಗಳಿಸಿ ಇತ್ತೀಚೆಗೆ ತಾಯ್ನಾಡಿಗೆ ಮರಳಿದ ಈ ಶುಭ ಸಂದರ್ಭದಲ್ಲಿ ಶುಭ ಕೋರುವ.

ಯಿಂದ : ಪಟ್ಟಡ ದೀಪಕ್ ಪ್ರಭಾಕರ್ ಮತ್ತು
ಪಟ್ಟಡ ನೀಶಾ ಪ್ರಭಾಕರ್ - 0821/2404290



ಜೈಹಿಂದ್ ಕ್ರಿಕೆಟ್ ಕ್ಲಬ್

ಚಿಕ್ಕಮ್ಮ ಶಾಲೆ, ಹಿನಕಲ್, ಮೈಸೂರು - 17



ಹಿನಕಲ್, ವಿಜಯನಗರ, ಹೆಬ್ಬಾಳು, ಹೂಟಗಳ್ಳಿ ಮತ್ತು ಸುತ್ತಮುತ್ತಲಿನ ಕ್ರಿಕೆಟ್ ಪ್ರೇಮಿಗಳಿಗೆ ಸಂತೋಷದ ಸುದ್ದಿ

ಹಿನಕಲ್ ಮತ್ತು ವಿಜಯನಗರದ ಮತ್ತು ಸುತ್ತಮುತ್ತಲಿನ ಕ್ರಿಕೆಟ್ ಆಟಗಾರರಿಗೆ ಉತ್ತಮ ಅವಕಾಶ. ಜೈ ಹಿಂದ್ ಕ್ಲಬ್ ತನ್ನ ತರಬೇತಿಯನ್ನು ವಿಸ್ತಾರಗೊಳಿಸಿದೆ. ಕಿರಿಯ ಕ್ರಿಕೆಟ್ ಆಟಗಾರರಿಗೆ ಉತ್ತಮ ಮಟ್ಟದ ತರಬೇತಿಯನ್ನು ಹಾಗೂ ಪ್ರತಿಭಾವಂತರಿಗೆ ಮೇಲ್ದರ್ಜೆಯಲ್ಲಿ ಆಡಲು ಅವಕಾಶವನ್ನು ಒದಗಿಸಿ ಕೊಡಲಾಗುವುದು.

ಒಮ್ಮೆ ಸಂಪರ್ಕಿಸಿ ನೋಡಿ :

ಈ ಸುವರ್ಣಾವಕಾಶವನ್ನು ಸದುಪಯೋಗಪಡಿಸಿಕೊಳ್ಳಿ

ಪ್ರಯತ್ನ ನಮ್ಮದು ಫಲ ನಿಮ್ಮದು

ಹೆಚ್ಚಿನ ವಿಷಯಗಳಿಗೆ ಸಂಪರ್ಕಿಸಿ

ದೀಪಕ್ : 2404290

ಸ್ಥಳ : ಚಿಕ್ಕಮ್ಮ ಶಾಲಾ ಮೈದಾನ, ಹಿನಕಲ್, ಮೈಸೂರು -17

ವಿಜಯನಗರ, 2ನೇ ಹಂತ, ಸೆಂಟ್ ಜೋಸೆಫ್ ಸೆಂಟ್ರಲ್ ಸ್ಕೂಲ್ ಹತ್ತಿರ, ಮೈಸೂರು.

ತರಬೇತಿ ಸಮಯ ಬೆಳಿಗ್ಗೆ : 6-00 ರಿಂದ 9-00 ರವರೆಗೆ,
ಸಮಯ ಸಂಜೆ : 4-30 ರಿಂದ 7-00 ರವರೆಗೆ.

2003, ಸೆಪ್ಟಂಬರ್ 1 ರಿಂದ 30ರ ತನಕ

ಒಳನೋಟ

ಚಂದಾ ಕಳುಹಿಸುವ ಮತ್ತು ಜಾಹೀರಾತು ಪ್ರಸಾರ ಕಛೇರಿ ಮತ್ತು ಕೋರಿಯರ್ ಸರ್ವಿಸ್ ಇತ್ಯಾದಿ	**ಕೊಡಗು ಸಂಗಾತಿ,** 12058, ಸಂಗಾತಿ ನಿಲಯ, ವಿಜಯನಗರ 4ನೇ ಹಂತ, 2ನೇ ಘಟಕ, ಹಿನಕಲ್ ಅಂಚೆ, ಮೈಸೂರು - 17. **ಫೋನ್:0821/2404290**
	ಕುಂಟುಪುಣಿ ರಾಮಕೃಷ್ಣ, ಕಾವೇರಿ ಆಟೋಮೊಬೈಲ್, ರಿಂಗ್ ರೋಡ್ ಸರ್ಕಲ್, ಹಿನಕಲ್ ಅಂಚೆ, ಮೈಸೂರು - 17 **Mobile : 94480-87790**
ಮಡಿಕೇರಿಯಲ್ಲಿ ಸಂಗಾತಿ ಕಛೇರಿ ಚಿಹ್ನೆ, ಹಸೆಮಣೆ ಪುಸ್ತಕ / ಶುಭಾಶಯ ಕಾರ್ಡ್ಸ್ / ಕ್ಯಾಸೆಟ್ಸ್ ಇತ್ಯಾದಿಗಳು	**ಕೊಡಗು ಸಂಗಾತಿ** C/o ಪಾಂಡನ ಕಾಂಪೌಂಡ್, 21/4, (1), ಅಪ್ಪಯ್ಯ ಗೌಡ ರಸ್ತೆ, ಜೂನಿಯರ್ ಕಾಲೇಜು ಹತ್ತಿರ, ಮಡಿಕೇರಿ - 571 201 ಪಾಂಡನ ರತಿ ಚಂದ್ರಶೇಖರ್/ **ಫೋನ್ : 228380** ಬೈತಡ್ಕ ಜಾನಕಿ ಬೆಳ್ಯಪ್ಪ **ಫೋನ್ : 228047**
ವಿರಾಜಪೇಟೆ	ಬಾರಿಕೆ ಮನೋಜ್‌ಕುಮಾರ್, ಇಗ್ಗುತ್ತಪ್ಪ ಕೋಲ್ಡ್ ಸ್ಟೋರ್, ಖಾಸಗಿ ಬಸ್ ನಿಲ್ದಾಣ, ವೀರಾಜಪೇಟೆ **ಫೋನ್ :** 08274/456591
ಕುಶಾಲ ನಗರ	ಕುಂಭಗೌಡನ ಸೋಮಣ್ಣ, ಮಯೂರ ಕೋಲ್ಡ್ ಸ್ಟೋರೆಜ್, ಮುಖ್ಯ ರಸ್ತೆ, ಕುಶಾಲನಗರ - 571 234 **ಫೋನ್ :** 08276/673370
ಬೆಂಗಳೂರು ಮಹಾನಗರ	ನಂಗಾರು ಮೋದನ ಪ್ರಿಯ, ನಂ. 11, ಮೊದಲನೆ ಅಡ್ಡ ರಸ್ತೆ, ಪೆಮ್ಮಯ್ಯ ಬ್ಲಾಕ್, ಜೇಸಿನಗರ, ಬೆಂಗಳೂರು -560 006 Mobile : 94482 25160

ಚಂದಾ ವಿವರ : ಜೀವಾವಧಿ ಸದಸ್ಯತನ - **2000** ರೂ., ಬಿಡಿ ಪ್ರತಿ - **12**ರೂ.

ವಾರ್ಷಿಕ ಚಂದಾ - **150** ರೂ. (ಅಂಚೆ ವೆಚ್ಚ ಸೇರಿ), ಒಲೆಗೊಂದರಂತೆ ಸದಸ್ಯರಾಗಿ ಕೊಂಡು ಓದಿ.

ಸಂಪಾದಕೀಯ : ಹಟ್ಟಿ ಗೊಬ್ಬರ

ಮಳೆಗಾಲದಲ್ಲಿ ಕೊಡಗಿನ ಮಲೆನಾಡು ಪ್ರದೇಶದ ಕೃಷಿ ಕಾರ್ಯಗಳು ವಿಭಿನ್ನವಾಗಿರುತ್ತದೆ. ಭೋರೆಂದು ಸುರಿಯುವ ಜಡಿ ಮಳೆಯನ್ನು ಲೆಕ್ಕಿಸದೆ ಭೂಮಿಯಲ್ಲಿ ದುಡಿಯುವ ರೈತರ ಶ್ರಮ ಅಷ್ಟಿಷ್ಟಲ್ಲ. ತಲೆಗೆ ಪ್ಲಾಸ್ಟಿಕ್ ಚೀಲವನ್ನೋ, ಗೋಣಿ ಚೀಲವನ್ನೋ ಅಥವಾ ಕೂಗಲೆಯಿಂದ ಮಾಡಿದ "ಗೊರ್ಗ"ಗಳನ್ನು ಹಾಕಿಕೊಂಡು ಕೃಷಿಗಾರರು ಹುಲ್ಲು ಹಸಿಸೊಪ್ಪುಗಳನ್ನು ನೆಲದ ಮೇಲಿರಲಿ, ಮರಗಳ ಮೇಲಿರುವ ಹಸಿ ಸೊಪ್ಪುಗಳನ್ನಾಗಲಿ ಕೊಚ್ಚಿ ತಂದು ತಮಗಳ ದನದ ಕೊಟ್ಟಿಗೆಯಲ್ಲಿ ಹಾಕುವುದು ಸಾಮಾನ್ಯ ದೃಶ್ಯ. ಮಳೆಗಾಲ ಕಳೆದ ಬಳಿಕ ಸೆಪ್ಟಂಬರ್ ತಿಂಗಳಿಂದ ಡಿಸಂಬರ್ ತಿಂಗಳ ತನಕ ಹಟ್ಟಿಗೆ ತಂದು ಹಾಕಿ ಗೊಬ್ಬರ ಮಾಡುವುದು ರೂಢಿ.

ಈ ಹಸಿ ಎಲೆಗಳನ್ನು ಮತ್ತುಹಸಿ ಹುಲ್ಲನ್ನು ಹಟ್ಟಿಯೊಳಗೆ ಹಾಕಿ ತಮ್ಮ ದನಕರುಗಳನ್ನು ಕಟ್ಟುತ್ತಾರೆ. ಹೀಗೆ ಪ್ರತಿದಿನವು ಹಸಿ ಎಲೆಗಳನ್ನು, ಹುಲ್ಲನ್ನು ಅದು ಹಸಿಯಾಗಿರಲಿ ಒಣಗಿದ "ಬುಳುಗಲ್ಲು" ಆಗಲಿ ತಂದು ಹಾಕುತ್ತಾರೆ. ಹೀಗೆ ಹದಿನೈದು ದಿನಕೊಮ್ಮೆಯೋ 20 ದಿವಸಗಳಿಗೊಮ್ಮೆಯೊ ಹಟ್ಟಿಯಿಂದ ತೆಗೆದು ಸ್ವಚ್ಛ ಮಾಡುತ್ತಾರೆ. ಈ ದಿನಗಳಲ್ಲಿ ಸೊಪ್ಪು ಮತ್ತುಹುಲ್ಲು ದನಕರುಗಳ ಸೆಗಣಿ ಮತ್ತು ಉಚ್ಚೆಯಿಂದ ಕೆಳಗಿನ ಪದರದಲ್ಲಿ ಕೊಳೆತು ಗೊಬ್ಬರ ಹದವಾಗಿರುತ್ತದೆ. ಈ ರೀತಿಯ ಗೊಬ್ಬರವನ್ನು ಹಟ್ಟಿಯ ಪಕ್ಕದಲ್ಲೆ ಸಾಕಷ್ಟು ದೊಡ್ಡದಾದ ಗುಂಡಿಯಲ್ಲಿ ರಾಶಿ ಹಾಕುತ್ತಾರೆ. ಇದಕ್ಕೆ "ಗೊಬ್ಬರದ ಗುಂಡಿ" ಎನ್ನುತ್ತಾರೆ. ಹೀಗೆ ಮೂರ್‍ನಾಲ್ಕು ತಿಂಗಳಲ್ಲಿ ಸಂಗ್ರಹಿಸಿದ ಗೊಬ್ಬರವು ರೈತನ ಮುಂಗಾರಿನ ಕೃಷಿಗೆ ಯೋಗ್ಯವಾಗಿರುತ್ತದೆ. ಈ ಗೊಬ್ಬರ ಗುಂಡಿಯಲ್ಲಿ ಹಾಕಿದ ಗೊಬ್ಬರವನ್ನು "ಗೊಬ್ಬರದ ಹುಳುಗಳು" ತಿಂದು ಉತ್ತಮವಾದ ಕಪ್ಪುಬಣ್ಣದ ಗೊಬ್ಬರವನ್ನಾಗಿ ಪರಿವರ್ತಿಸಿ ಶ್ರೇಷ್ಠ ಮಟ್ಟದ ಸಾವಯವ ಪದಾರ್ಥವನ್ನಾಗಿ ಮಾಡುತ್ತದೆ. ಎರೆಹುಳಗಳ ಗೊಬ್ಬರದಂತೆ ಇದು ಸಹ ಬಹು ಉತ್ತಮವಾದುದು.

ಈಗೀಗ ಕೊಡಗಿನಲ್ಲಿ ಬ್ರಿಟಿಷ್ ಸಂಸ್ಕೃತಿಯ ವಿದ್ಯೆಯ ವ್ಯಾಮೋಹಕ್ಕೆ ಒಳಪಟ್ಟವರಿಂದ ಈ ರೀತಿಯ ಗೊಬ್ಬರ ಮಾಡುವುದೇ ಕಡಿಮೆಯಾಗಿದೆ. ಹಾಲಿನ ಅವಶ್ಯಕತೆ ಮತ್ತು ಉಳುವ ಎತ್ತುಗಳನ್ನು ಹೊರತು ಪಡಿಸಿ, ದನಗಳ ಸಾಕಣೆಯೇ ಕೊಡಗಿನಲ್ಲಿ ಕಮ್ಮಿಯಾಗಿದೆ. ಜಾಗಗಳೆಲ್ಲವು ಕೃಷಿಗಳಾಗಿ ಪರಿವರ್ತಿತವಾಗಿಯು ಈ ದಿನಗಳಲ್ಲಿ ದನಕರುಗಳನ್ನು ಸಾಕುವುದೇ ದುಸ್ತರವಾಗಿದೆ. ಹಿಂದೆ ಪ್ರತಿ ಮನೆಯಲ್ಲಿ 15-20 ದನಕರುಗಳಿರುತ್ತಿದ್ದವು. ಆಗ ಬೆಟ್ಟಕ್ಕೆ ಇವುಗಳನ್ನು ಹೊಡೆದುಕೊಂಡು ಹೋಗಿ, ಏಳೆಂಟು ಜನ ದನ ಕಾಯುವ ಹುಡುಗರಿರುತ್ತಿದ್ದು, ಬೆಟ್ಟಗುಡ್ಡಗಳ ಮೇಲಿಂದ ಸಂಜೆ ನಾಲ್ಕು ಗಂಟೆಗೆ ಮನೆ ಕಡೆ ವಾಪಸಾಗುವ ಘಣಿ ಘಣಿ ಘಂಟೆಗಳ ಸದ್ದುಗಳು ಹಾಗೆಯೆ ದನಗಾಹಿಗಳ ಕೊಳಲಿನ ನೀನಾದವು, ರಾಗವೆಳೆದು ಹಾಡುವ ಹಾಡುಗಳು ಈಗೆಲ್ಲಾ ಕನಸಿನಂತೆ ಬಾಸವಾಗುತ್ತಿವೆ.

ಹಿಂದೆ ದನಕರುಗಳನ್ನು ಗೊಬ್ಬರಕ್ಕಾಗಿಯೇ ಸಾಕುತ್ತಿದ್ದರು. ಈಗೀಗ ಹಾಲಿಗಾಗಿಯಾದರು ಸಾಕುತ್ತಿರುವುದು ಅಷ್ಟಕಷ್ಟೆ. ಮತ್ತೆ ಇನ್ನೆಲ್ಲಿಂದ ಹಸಿಗೊಬ್ಬರಗಳು? ಕಂಪೆನಿ ಗೊಬ್ಬರ ಬಂದ ಲಗಾಯ್ತು ಹಸಿ ಗೊಬ್ಬರ ಕಣ್ಮರೆಯಾಗುತ್ತಿರುವುದು ದುರಾದೃಷ್ಟಕರ.

ಕೊಡಗಿನ ಕಾಡುಗಳಲ್ಲಿ ಈಗಲೂ ಗೊಬ್ಬರವಾಗಿ ಉಪಯೋಗಿಸಲ್ಪಡುವ ವಸ್ತುಗಳು ಹೇರಳವಾಗಿ ಸಿಕ್ಕುತ್ತದೆ. ಇವುಗಳನ್ನೆಲ್ಲಾ, ಚಿಕ್ಕ ಚಿಕ್ಕ ತುಂಡುಗಳಾಗಿ ಪರಿವರ್ತಿಸಿ ಉತ್ತಮವಾದ ಗೊಬ್ಬರವನ್ನು ತಯಾರು ಮಾಡ ಬಹುದು. ಈ ರೀತಿಯಲ್ಲಿ ಉತ್ತಮ ಗೊಬ್ಬರ ಕೃಷಿ ಮಾಡುವ ಪದ್ಧತಿ ಮಂಡ್ಯ ಜಿಲ್ಲೆಯ ಶ್ರೀರಂಗ ಪಟ್ಟಣದ ಹತ್ತಿರದ ಮಹದೇವಪುರ ಗ್ರಾಮದಲ್ಲಿ "ಇಸ್ಕಾನ್" ಕಂಪೆನಿಯವರ ಸುಮಾರು 125 ಎಕ್ರೆ ವಿಸ್ತೀರ್ಣವುಳ್ಳ ತೋಟವೊಂದಿದ್ದು, ಅಲ್ಲಿ ಪೂರ್ತಿ ಈ ತರಹದ ಹಸಿ ಗೊಬ್ಬರವನ್ನೆ (ಜೈವಿಕ) ತಯಾರು ಮಾಡಿ ಹಾಕುವುದು ರೂಢಿಯಲ್ಲಿದೆ. ಇಲ್ಲಿ ಪ್ರತಿ ಜಾತಿಯ ಸಸ್ಯಗಳಿದ್ದು, ಇವುಗಳಲ್ಲಿ ವೆನಿಲ್ಲಾ ಕೃಷಿ ಪ್ರಧಾನವಾಗಿದೆ. ಇಲ್ಲಿ ನೂರಾರು ಕೃಷಿಕರು ದಿನಗೂಲಿಗಳಾಗಿ ದುಡಿತ್ತಿದ್ದು ಅವರಿಗೆಲ್ಲಾ ನೆಮ್ಮದಿಯ ಬೀಡಾಗಿದೆ. ಒಮ್ಮೆ ಇತ್ತ ಬಂದಾಗ ಖಂಡಿತ ಸಂದರ್ಶಿಸಿ. ಕೊಡಗಿನ ರೈತರಿಗೆ ಇದರ ಸದುಪಯೋಗವಾದರೆ ಅದೇ ಸಂತಸ ಸಂಗಾತಿಗೆ.

ಭಾರತಾಂಬೆಯ ವೀರ ಯೋಧರ ಮಡಿಲಿಗೆ ಕೊಡಗಿನ ಅಜ್ಜೇಟಿರ ಉತ್ತಪ್ಪ ಬಿದ್ದಪ್ಪ ಸೇರ್ಪಡೆ.



ಭಾರತೀಯ ಗಡಿ ರಕ್ಷಣೆಯಲ್ಲಿ ತೊಡಗಿದ ಸಂದರ್ಭ ದಲ್ಲಿ ಪ್ರಕೃತಿ ವಿಕೋಪಕ್ಕೆ ಬಲಿಯಾಗಿ, ಜಮ್ಮು ಕಾಶ್ಮೀರದ ಸಿಯಾಚಿನ್ ಗ್ಲೇಸಿಯರ್‌ನಲ್ಲಿ ಕೊನೆಯುಸಿರೆಳೆದ ಕೊಡಗಿನ ಯೋಧ ಅಜ್ಜೇಟಿರ ಬಿದ್ದಪ್ಪ (ಪ್ರಕಾಶ್) ಅವರ ಅಂತ್ಯ ಕ್ರಿಯೆಯು ಅವರ ಸ್ವಗೃಹವಾದ ಕಾರುಗುಂದದಲ್ಲಿ ಸಕಲ ಸರ್ಕಾರಿ ಗೌರವ ರಕ್ಷೆಯೊಂದಿಗೆ ಇತ್ತೀಚೆಗೆ ನೆರವೇರಿತು.

ಅಗಸ್ಟ್ 7 ರಂದು ಮಧ್ಯಾಹ್ನ ಪಾರ್ಥಿವ ಶರೀರವನ್ನು ಗೌರವಾರ್ಪಣೆಯೊಂದಿಗೆ ಜಿಲ್ಲೆಯ ಜನತೆ ಬರಮಾಡಿಕೊಂಡಿತು. ದಾರಿಗಳಲ್ಲಿ ಪಾರ್ಥಿವ ಶರೀರಕ್ಕೆ ಹೂಗುಚ್ಛವಿರಿಸಿ ಶೃದ್ಧಾಂಜಲಿ ಅರ್ಪಿಸಿದರು. ತಿತಿಮತಿ, ಗೋಣಿಕೊಪ್ಪ, ವಿರಾಜಪೇಟೆ, ಮಡಿಕೇರಿ, ಬೆಟ್ಟಗೇರಿ ಹಾಗೂ ಇತರೆ ಕಡೆಗಳಲ್ಲಿ ಜನರು ಕಿಕ್ಕಿರಿದು ಸೇರಿದ್ದು ಬಾವುಕ ಮಂದಿ ಕಣ್ಮರೆಯಾದ ಯೋಧನ ಅಂತಿಮ ದರ್ಶನ ಪಡೆದರು. ವಿರಾಜಪೇಟೆ ಮತ್ತು ಬೆಟ್ಟಗೇರಿಗಳಲ್ಲಿ ವಾಣಿಜ್ಯ ಮಳಿಗೆಗಳನ್ನು ಮುಚ್ಚಿ ಗೌರವ ಸೂಚಿಸಲಾಯಿತು.

ಮೃತನ ಪಾರ್ಥಿವ ಶರೀರ ಮನೆ ಸೇರುತ್ತಿದ್ದಂತೆ ಪತ್ನಿ ಲೀನಾ ಇಹದ ಪರಿವೆಯಿಲ್ಲದೆ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದರೆ ತಂದೆ ಕುರ್ಚಿಯೊಂದರಲ್ಲಿ ಕುಳಿತು ಮೂಕರಾಗಿ ರೋಧಿಸುತ್ತಿದ್ದರು. ತಾಯಿಯ ದುಃಖವಂತೂ ಹೇಳತೀರದು. ಎಂಟು ತಿಂಗಳ ಮಗು ರೋಷನಿ ಮಾತ್ರ ಅವರಿವರ ಕೈಯಿಂದ ಕೈಗೆ ತಬ್ಬಲಿಯಂತೆ ಅಳುತ್ತಾ, ಏನೊಂದು ತಿಳಿಯದ ಮಗುವಿನ ದೃಶ್ಯ ಮನಕರಗುವಂತಿತ್ತು.

ಮೃತನ ಸಹೋದರ ನಂಜಪ್ಪ ಮಲೆ ಮಹದೇಶ್ವರ ಬೆಟ್ಟದಲ್ಲಿ ರಾಜ್ಯ ಮೀಸಲು ಪಡೆಯಲ್ಲಿ ಸೇವೆ ಸಲ್ಲಿಸುತ್ತಿರುವ ಕಾರಣ, ಶವ ಸಂಸ್ಕಾರಕ್ಕೆ ಬರಲು ತಡವಾದ್ದರಿಂದ ಬೆಂಗಳೂರಿನಿಂದ ಬಂದ ಸೇನಾ ತುಕಡಿ ಮೊದಲೆ ಹಿಂತಿರುಗಿತ್ತು. ನಂಜಪ್ಪ ಆಗಮಿಸಿದ ಬಳಿಕ ಸಂಜೆ 5-45 ಕ್ಕೆ ಡಿವೈಎಸ್‌ಪಿ ಎಲ್ಲಪ್ಪ ಅವರ ನೇತೃತ್ವದಲ್ಲಿ ಆಗಸಕ್ಕೆ ತೋಪು ಹಾರಿಸಿ ಮೃತ ಬಿದ್ದಪ್ಪ ಅವರಿಗೆ ಪೊಲೀಸ್ ಗೌರವ ಸೂಚಿಸಲಾಯಿತು. ಸರಕಾರದ ಪರ ತಹಸೀಲ್ದಾರ್ ವಿ. ಎಲ್. ಹೆಗ್ಗಡೆ ಶರೀರಕ್ಕೆ ಅಂತಿಮ ಗೌರವ ಸಲ್ಲಿಸಿದರು.

ಮಡಿಕೇರಿಯಲ್ಲಿ ಜಿಲ್ಲಾಧಿಕಾರಿ ಶ್ರೀಕಾಂತ್ ವಾಲಗದ್ ಹಾಗೂ ಪೊಲೀಸ್ ವರಿಷ್ಠಾಧಿಕಾರಿ ದೇವ ಜ್ಯೋತಿರೇಯವರನ್ನು ಬರಮಾಡಿ ಶೃದ್ಧಾಂಜಲಿಯನ್ನು ಕೊಡಗಿನ ಜನತೆ ಪರವಾಗಿ ಅರ್ಪಿಸಿದರು. ಪುರಸಭಾ ಸಭಾಂಗಣದಲ್ಲಿ 15 ನಿಮಿಷಗಳ ಕಾಲ ಸಾರ್ವಜನಿಕರ ದರ್ಶನಕ್ಕೆ ಇಡಲಾಯಿತು. ಈ ಸಂದರ್ಭ ಪುರಸಭಾಧ್ಯಕ್ಷೆ ಕೂಡಕಂಡಿ ಸೋಮಣ್ಣನವರು, ಮಾಜಿ ಸೈನಿಕರ ಕಲ್ಯಾಣನಿಧಿ ಉಪನಿರ್ದೇಶಕ ಕರ್ನಲ್ ಉತ್ತಯ್ಯ, ಜಿಲ್ಲಾ ಪಂಚಾಯಿತಿ ಅಧ್ಯಕ್ಷ ಪಾಪು ಸಣ್ಣಯ್ಯ, ಬಿಜೆಪಿ ಜಿಲ್ಲಾಧ್ಯಕ್ಷ ಕೊಂಬಾರನ ಬೋಪಯ್ಯ, ಗೌಡ ವಿದ್ಯಾ ಸಂಘದ ಅಧ್ಯಕ್ಷರಾದ ಹೊಸೂರು ರಮೇಶ್, ಗೌಡ ಸಾಂಸ್ಕೃತಿಕ ಅಕಾಡೆಮಿ ಅಧ್ಯಕ್ಷ ತುಂತಜೆ ಗಣೇಶ್ ಹಾಗೂ ಪದಾಧಿಕಾರಿಗಳು ಕೊಡವ ಸಮಾಜದ ಅಧ್ಯಕ್ಷರುಗಳು ಮತ್ತಿತರರು ಗೌರವ ನೀಡಿ ನಂತರ ಕಾರುಗುಂದಕ್ಕೆ ಕಳುಹಿಸಿಕೊಡಲಾಯಿತು.

ಗೋಣಿ ಕೊಪ್ಪಲುವಿನಲ್ಲಿ ಅಂತಿಮ ದರ್ಶನಕ್ಕೆ ಬಾರೀ ಜನಸ್ತೋಮ ನೆರೆದಿತ್ತು. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕೆ. ಎಂ. ಕಾವೇರಪ್ಪ, ಗ್ರಾಮ ಪಂಚಾಯಿತಿ ಅಧ್ಯಕ್ಷ ಬಿ. ಡಿ. ಮುಕುಂದ, ಉಪಾಧ್ಯಕ್ಷ ಥೋಮಸ್, ವಾಹನ ಚಾಲಕರ ಸಂಘದ ಪದಾಧಿಕಾರಿಗಳು ಅಂತಿಮ ದರ್ಶನ ಪಡೆದರು. ಗೋಣಿಕೊಪ್ಪಲು ಕಾಲೇಜು ಎದುರು ಸ್ವಲ್ಪ ಸಮಯ ನಿಲ್ಲಿಸಲಾಯಿತು. ಹಾಗೆಯೇ ವಿರಾಜಪೇಟೆಗೆ ಬಂದಾಗ ಕೊಡಗು ಮಾಜಿ ಸೈನಿಕರ ಸಂಘದ ಅಧ್ಯಕ್ಷರಾದ ಕೆ. ಎಂ. ಮುತ್ತಣ್ಣ, ಕಾವೇರಿ ಮಹಿಳಾ ಕಾಲೇಜಿನ ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ವರ್ಗ, ತಾಲ್ಲೋಕು ಕಛೇರಿ ಬಳಿ, 50 ನಿಮಿಷಗಳ ಕಾಲ ನೂಕು ನುಗ್ಗಲಿನ ಮಧ್ಯೆ ಸಾವಿರಾರು ಮಂದಿ ದರ್ಶನ ಪಡೆದರು.ಕೊಡವ ಸಮಾಜದ ಅಧ್ಯಕ್ಷ ನಾಯಡ ವಾಸು ನಂಜಪ್ಪ, ಅಖಿಲ ಕೊಡವ ಸಮಾಜದ ಅಧ್ಯಕ್ಷ ಮಾತಂಡ ಮೊಣ್ಣಪ್ಪ, ಕರ್ನಾಟಕ ಸಂಘದ ಅಧ್ಯಕ್ಷ ಚಿಲ್ಲಪಂಡ ಕಾವೇರಪ್ಪ, ಕಾರ್ಯದರ್ಶಿ ಎಂ.ಬಿ. ಅಪ್ಪಣ್ಣ, ಪ್ರಭಾ ನಾಣಯ್ಯ, ಪಟ್ಟಣ ಪಂಚಾಯಿತಿ ಅಧ್ಯಕ್ಷರಾದ ಬಿ. ಆರ್. ವಿಜಯಚಂದ್ರ, ಮಾಜಿ ಸೈನಿಕರ ಸಂಘದ ಅಧ್ಯಕ್ಷ ಕೆ. ಎಂ. ಮುತ್ತಣ, ಚೇಂಬರ್ ಅಫ್ ಕಾಮರ್ಸ್‌ನ ಕಾಶಿ ಕಾವೇರಪ್ಪ ಹಾಗೂ ಸಾವಿರಾರು ಸಾರ್ವಜನಿಕರು ಅಂತಿಮ ದರ್ಶನ ಪಡೆದು ಕಳುಹಿಸಿಕೊಟ್ಟರು.

ಮಡಿಕೇರಿ ಸಮೀಪ ಕಾರುಗುಂದದ ಕೃಷಿಕ ನೆಲೆಯಲ್ಲಿ ಬಿದ್ದಪ್ಪನವರು 28-2-1972 ರಲ್ಲಿ ಹುಟ್ಟಿದರು. ತಂದೆ ಅಜ್ಜೇಟಿರ ಉತ್ತಪ್ಪ ಅವರ ಕುಟುಂಬವು ತೀರಾ ಬಡತನವಾಗಿದ್ದು, ಇಬ್ಬರು ಪುತ್ರರು. ಓರ್ವ ಪುತ್ರಿ ವಿವಾಹವಾಗಿದ್ದು, ಪ್ರಥಮ ಪುತ್ರ KSRPಯಲ್ಲಿದ್ದು, ದ್ವಿತೀಯ ಪುತ್ರ ಬಿದ್ದಪ್ಪ 8 ವರ್ಷಗಳ ಹಿಂದೆ ಭಾರತೀಯ ಸೇನೆಗೆ ಸೇರಿ 10 ನೇ ತರಗತಿವರೆಗೆ ಬೆಟ್ಟಗೇರಿ ಶಾಲೆಯಲ್ಲಿ ಓದಿ ಬಳಿಕ ಚೇರಂಬಾಣೆ ಕಾಲೇಜಿನಲ್ಲಿ PUC ಮುಗಿಸಿ ಸೇನೆಗೆ ಸೇರಿದ್ದರು. ನಂತರ ಹಲವು ಕಡೆ ಸೇನೆಯಲ್ಲಿ ಸೇವೆ ಸಲ್ಲಿಸಿ, ಸೀಯಾಚಿನ್ ಗ್ಲೇಸಿಯರ್‌ನಲ್ಲಿ ಸೇವೆ ಸಲ್ಲಿಸುತ್ತಿದ್ದರು. ಮೃತರು 2 ವರ್ಷದ ಹಿಂದೆ ವಿವಾಹವಾಗಿದ್ದು, ಪತ್ನಿ ಲೀನಾ ಮಡಿಕೇರಿಯಲ್ಲಿ ಜೆ.ಡಿ. ಆಸ್ಪತ್ರೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. 8 ತಿಂಗಳ ಮಗು ರೋಷನಿ ಏನು ಅರಿಯದ ಮುಗ್ಧೆ.

ಜಮ್ಮು ಕಾಶ್ಮೀರದ ಸಮೀಪ ಸಿಯಾಚಿನ್ ಗ್ಲೇಸಿಯರ್ ತಪ್ಪಲಿನಲ್ಲಿ ಅಗಸ್ಟ್ 4 ರಲ್ಲಿ ನಡುರಾತ್ರಿ ತಾಪಮಾನ 0°C ಗೆ ಇಳಿಯಿತು. ಕಾರ್ಗತ್ತಲ ನಡುವೆ ಸಹಿಸಲಸಾಧ್ಯ ಚಳಿಯ ಕೊರೆತ ಆರಂಭವಾಯಿತು. ಇವರಿದ್ದ ಟೆಂಟ್‌ನಲ್ಲಿ 12ಮಂದಿ ಜವಾನರಿದ್ದರು. ಬಿದ್ದಪ್ಪ ಹಾಗೂ ಊಟಿಯ ಸುಂದರ್‌ರಾಜ್ ಕೊನೆಯದಾಗಿ ಕುಡಿಯಲು ನೀರು ಬೇಕು ಎಂದು ನಡು ರಾತ್ರಿಯಲ್ಲಿ ಕೀರಲು ಧ್ವನಿಯಲ್ಲಿ ಗೋಗೆರೆದಾಗ ಜೊತೆಗಿದ್ದ ಬಿದ್ದಂಡ ನಾಣಯ್ಯನವರು ಅವರಿಗೆ ನೀರಿತ್ತರು. ಕಾರ್ಗತ್ತಲೆಯ ನೀರವತೆಯ ಭೀಕರ ಹವಾಮಾನದ ಚಳಿಯಲ್ಲಿ ಮಲಗಿದ್ದ ಇಬ್ಬರು ರವಿಮೂಡುವ ಹೊತ್ತಿಗೆ ಇಲ್ಲವಾಗಿದ್ದು, ತಮ್ಮ ತಾಯ್ನಾಡಿನ ಸೇವೆಯಲ್ಲಿ ಭಾರತಾಂಭೆಯ ಮಡಿಲಿನಲ್ಲಿ ಲೀನವಾದರು.

ಜೈಹಿಂದ್. ವರದಿ- ಸಂಗಾತಿ.

ಕ್ಷಮಿಸಿಬಿಡು ಮುಂದೆ ನೀನೂ ಕ್ಷಮಿಸಲ್ಪಡುತ್ತೀಯ.

ನಿಸ್ವಾರ್ಥ ಸೇವೆ ದಿವ್ಯತ್ವಕ್ಕೆ ದಾರಿ

ಮಾನವ ಹೃದಯ ತುಂಬ ಪವಿತ್ರತೆ, ಅನುಕಂಪ (ದಯೆ) ದಿಂದ ಕೂಡಿದೆ. ಮನಸ್ಸು ತುಂಬಾ ಮಧುರವಾಗಿದೆ. ಇದು ಪ್ರತೀ ಮಾನವನಿಗೂ ಭಗವಂತನು ಕರುಣಿಸಿದ್ದಾನೆ. ಹಾಗಾದರೆ ನಮ್ಮ ಜೀವನದ ಕರ್ತವ್ಯ ಏನು? ಮಾನವ ಜೀವನ ಸಮತೆ (Equality) ಸಮ್ಮೈಕ್ಯತ (Unity)ಶುಭ್ರತ್ವಂ (Fraternity) ಮತ್ತು ಸೌಜನ್ಯ (Nobility)ಗಳ ಆಧಾರದಲ್ಲಿ ನಿಂತಿದೆ. ಇದೆಲ್ಲವನ್ನೂ ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಂಡಿರಬೇಕು. ಇದರಲ್ಲಿ ಯಾವುದಾದರೊಂದನ್ನು ನಾವು ಬಿಟ್ಟರೂ ಜೀವನದಲ್ಲಿ ಸ್ವಾರಸ್ಯ ಸಿಗದು.

ನಮಗೆ ಶಾಂತಿ ಮತ್ತು ಜೀವನದಲ್ಲಿ ತೃಪ್ತಿ ಬೇಕು. ಕಷ್ಟ, ಸಂಕಟಗಳನ್ನು ಯಾರೂ ಆಶಿಸರು. ಆದರೆ ಕಷ್ಟ ಸಂಕಟಗಳು ಸಂತೋಷಕ್ಕೆ ಹಾದಿ. ಇನ್ನೊಬ್ಬರನ್ನು ಪರಿವರ್ತಿಸುವುದು ಹೆಗ್ಗಳಿಕೆ ಅಲ್ಲ. ತನ್ನನ್ನು ತಾನು ಪರಿವರ್ತಿಸಿಕೊಳ್ಳುವುದು ಹೆಗ್ಗಳಿಕೆಯಲ್ಲ. ಹೆಗ್ಗಳಿಕೆ ತನ್ನ ನಡೆ, ನುಡಿ,ಕಾಯಕಗಳಲ್ಲಿ ಒಮ್ಮತವಿರಬೇಕು. ಭೋಧನೆ ಮುಖ್ಯವಲ್ಲ. ಒಳ್ಳೆ ಆಚರಣೆ ಮುಖ್ಯ. ಮಾನವನಾಗಬೇಕಿದ್ದರೆ ಮಾನವ ತತ್ವ ಮುಖ್ಯ. ಧರ್ಮಾಚರಣೆಯ ಪರಿಣಿತರು ಸತ್ಯ (Truth)ವೇ ನೀತಿ (Morality) ಧರ್ಮವೇ (righteousness)ಖ್ಯಾತಿ (Reputation) ಮತ್ತು ತ್ಯಾಗವೇ (Sacrifice) ಜ್ಯೋತಿ (Light) ಮಾನವರಲ್ಲಿ ಸತ್ಯ, ಧರ್ಮ, ತ್ಯಾಗ ತುಂಬಿ ತುಳುಕಾಡಿದರೆ ಅದೇ ಮಾನವ ಜಾತಿ. ಆದರೆ ಇಂದು ಕಲಿಯುಗವೋ, ಕಲಹಯುಗವೋ ಮಾನವನು ಸತ್ಯ, ಧರ್ಮ, ತ್ಯಾಗವನ್ನುಬದಿಗಿಟ್ಟು, ಅಸತ್ಯ, ಅಧರ್ಮ ಮತ್ತು ಸ್ವಾರ್ಥವನ್ನು ಮೈಗೂಡಿಸಿಕೊಂಡಿದ್ದಾರೆ. ಇದೇ ಸರ್ವನಾಶಕ್ಕೆ ಕಾರಣ. ಆತ್ಮ ವಿಶ್ವಾಸವೇ ಜೀವನದ ಮೂಲಾಧಾರ.

ಮೊಟ್ಟ ಮೊದಲು ನಮ್ಮಲಿ ಏಕತ್ವ (Unity) ಇರಬೇಕು. ಏಕತ್ವವೇ ಸಮತ್ವಕ್ಕೆ (Equality) ನಾಂದಿ. ನಾವು ಏನೆಲ್ಲ ಸೇವಾ ಕಾರ್ಯದಲ್ಲಿ ತೊಡಗುತ್ತೇವೋ ಅದೆಲ್ಲಾ ನಮ್ಮ ಸಮಾಜವನ್ನು ಉದ್ಧರಿಸುವಂತಾಗಬೇಕು. ನಾವು ಸಾರ್ವಜನಿಕ ಸೇವೆ ಮಾಡುತ್ತೇವೆ ಎಂಬವರ ಮಾತು ಅಹಂಕಾರದ ಮಾತು. ನನ್ನ ಸೇವೆ ಸಮಾಜಕ್ಕೆ ಅವಶ್ಯವಿಲ್ಲ. ಆದರೆ ಸಮಾಜದ ಸೇವೆ ಇಲ್ಲದೆ ನಾವು ಜೀವನ ಸಾಗಿಸಲಾರೆವು. ಇಂದು ನಾವು ಮಾಡುವ ಸೇವೆ ಸಮಾಜದ ಹೆಸರಿನಲ್ಲಿ ನಮಗೆ ನಾವೇ ಮಾಡಿಕೊಳ್ಳುವ ನಮಗಾಗಿಯೇ ಮಾಡಿಸಿಕೊಳ್ಳುವ ಸ್ವಾರ್ಥ ಸೇವೆ. ಇದೇ ರಾಜಕಾರಿಣಿಗಳ ಸೇವೆ. ನಾವು ಅವರನ್ನು ವೈಭವೀಕರಿಸಿ, ಅನುಕರಿಸುತ್ತೇವೆ. ದೇಶವನ್ನು ನಾಶದೆಡೆಗೆ ನಿತ್ಯವು ತಳ್ಳುತ್ತಿರುತ್ತೇವೆ. ನಾವು ನಮ್ಮನ್ನು ಕನ್ನಡಿಯಲ್ಲಿ ನೋಡಿಕೊಳ್ಳುತ್ತೇವೆ. ಕನ್ನಡಿ ಎಂಬುದು ಒಂದು ಪ್ರಕೃತಿ ಅದರಲ್ಲಿ ನಮ್ಮನ್ನು ನಾವೇ ನೋಡಿಕೊಳ್ಳುತ್ತೇವೆ. ಕನ್ನಡಿಯಿಂದ ನಮ್ಮ ಪ್ರತಿಬಿಂಬ ವಾಗುತ್ತದೆ. ತಾನು ಸ್ವಾರ್ಥಿಯಾಗಿ ಕಾರ್ಯನಿರ್ವಹಿಸಿದರೆ, ಇತರರ ಕಾರ್ಯಗಳೂ ನನಗೆ ಸ್ವಾರ್ಥಕಾರ್ಯಗಳಾಗುತ್ತದೆ. ಹಾಗಾಗಿ ಪ್ರತೀ ಒಬ್ಬನೂ ದೇಹಾಭಿಮಾನವನ್ನು ಬೆಳೆಸಿಕೊಂಡು ದೇಶಾಭಿಮಾನವನ್ನು ಕಡೆಗಣಿಸುತ್ತಿದ್ದೇವೆ. ಇದೇ ನಮ್ಮ ರಾಷ್ಟ್ರದ ದುರಂತ. ಇನ್ನು ದೈವಾಭಿಮಾನ ಹೇಗೆ ಬರುವುದು? ಮಾನವ ದೇಹದ ಆಯುಷ್ಯ ಕ್ಷಣಿಕ. ನೂರು ವರುಷ ಆಯಸ್ಸು ಎಂದೆನ್ನುತ್ತೇವೆ ಆದರೆ ಎಲ್ಲಿ ಏನಾಗುತ್ತದೆಂದು ಯಾರಿಗೂ ಹೇಳಲು, ನಿರೀಕ್ಷಿಸಲು ಸಾಧ್ಯವೇ ಇಲ್ಲ.

ಇಂದಿನ ಯುವ ಜನಾಂಗ ಮಾಡಬೇಕಾದದ್ದು ಏನು? ಕಲಿಯಬೇಕಾದ್ದು ಏನು? ಮತ್ತು ಯಾಕೆ? ಹಿರಿಯರು ಕಿರಿಯರಿಗೆ ಮಾರ್ಗದರ್ಶನ ನೀಡಲಿಲ್ಲ. ಹಿರಿಯರ ಕಾಲ ಮುಗಿಯುತ್ತಾ ಬಂದಿದೆ. ವಿಜ್ಞಾನ ಮುಂದುವರಿಯುತ್ತಿದೆ. ಯುವ ಜನಾಂಗವೂ ಅದರೊಟ್ಟಿಗೆ ಮುಂದುವರಿಯಬೇಕು. ಯುವ ಜನಾಂಗವು ಮೊಟ್ಟ ಮೊದಲು ಜೀವನದಲ್ಲಿ ಸಾಮಾನ್ಯವಾದ ಜೀವನ ಜ್ಯೋತಿ ಎಲ್ಲರಲ್ಲೂ ಒಂದೇ. ನಮ್ಮಂತೆ ಅವರು ಎಲ್ಲರಲ್ಲಿಯೂ ದೈವಾಂಶವಿದೆ ಎಂಬ ಜ್ಞಾನವನ್ನು ತನ್ನ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಸಮತ್ವ (Equality) ವನ್ನು ಮೈಗೂಡಿಸಿಕೊಳ್ಳಬೇಕು. ಏಕತ್ವ (Unity) ತತ್ವವನ್ನು ಪಾಲಿಸಬೇಕು. ನಾವು ಸಮಾಜಕ್ಕಾಗಿ ಏನನ್ನು ಮಾಡಿದರೂ ಅದು ಸಮಾಜದಲ್ಲಿ ಒಗ್ಗಟ್ಟನ್ನು ಹೆಜ್ಜೆ ಹೆಜ್ಜೆಗೆ ಬಲಪಡಿಸಬೇಕು. ನಮಗೆ ಮರಣ ಯಾವ ವಯಸ್ಸಿನಲ್ಲಿ, ಯಾವ ಸಮಯದಲ್ಲಿ, ಯಾವ ಸ್ಥಳದಲ್ಲಿ, ಯಾವ ರೀತಿಯಲ್ಲಿ ಬರುತ್ತದೆಂದು ನುಡಿಯುವವರು ಇಲ್ಲ. ಆದ್ದರಿಂದ ಸದಾ ಸಾವನ್ನು ಸ್ವಾಗತಿಸಲು ಸಿದ್ಧರಿರಬೇಕು.ಕಾರಣ ಸಾವು ಯಾರನ್ನೂ ಬಿಡುವುದಿಲ್ಲ.

ನಮ್ಮ ಯುವ ಜನಾಂಗವು ಎಂದರೆ ಯುವಕರು, ಯುವತಿಯರು ತಾವು ಕಲಿತ ವಿದ್ಯೆ, ಪಡೆದ ಅನುಭವದಿಂದ, ತಮ್ಮ ಉದ್ಧಾರಕ್ಕೆ ಮತ್ತು ಸಮಾಜ ಉದ್ಧಾರಕ್ಕಾಗಿ ತಮ್ಮ ದೇಹಾಭಿಮಾನವನ್ನುಬಿಟ್ಟು ದೇಶಾಭಿಮಾನವನ್ನು ಬೆಳೆಸಿಕೊಂಡು, ತಮ್ಮ ಸಂಪಾದನೆಯ ಕಿಂಚಿತ್ ಭಾಗವನ್ನು ನಿಸ್ವಾರ್ಥ ಸೇವೆಯಾಗಿ ಸಮಾಜಕ್ಕೆ ನೀಡಿ ಸಮಾಜ ಉದ್ಧಾರಕ್ಕಾಗಿ ಶ್ರಮಿಸಬೇಕು. ನಮ್ಮ ಸ್ವಧರ್ಮ, ಸತ್ಯ, ಶಾಂತಿಯನ್ನು ಕಾಪಾಡಿಕೊಂಡು ತಮ್ಮ ಅವ್ವಭಾಷೆ, ಅವ್ವ ನಾಡು, ತಮ್ಮ ಉಡಿಗೆ, ತೊಡಿಗೆ, ಆಹಾರ ಅಭ್ಯಾಸಗಳಿಗೆ ಕುಂದುಂಟಾಗದಂತೆ ಎಚ್ಚರ ವಹಿಸಿ ತನ್ನಂತೆ ನನ್ನ ಸಮಾಜವೆಂಬ ನಿಸ್ವಾರ್ಥ ಮನೋಭಾವದಿಂದ ತಪ್ಪದೆ ಸಮಾಜ ಉದ್ಧಾರ ಕಾರ್ಯಗಳನ್ನು ಹಮ್ಮಿಕೊಳ್ಳಬೇಕು.

ಮೊಟ್ಟ ಮೊದಲು ನಮ್ಮ ಯುವಕ ಯುವತಿಯರು ತಮ್ಮನ್ನುಹೊತ್ತು, ಹೆತ್ತು, ಆಹಾರವಿತ್ತು, ತಿದ್ದಿ ಬೆಳೆಸಿದ ತಾಯಿ ತಂದೆಯರಿಗೆ ಕೃತಜ್ಞತೆಯನ್ನು ನಿತ್ಯ ಸಲ್ಲಿಸುತ್ತಿರಬೇಕು. ನಂತರ ವಿದ್ಯೆ ಕಲಿಸಿ ನಮ್ಮನ್ನು ಮನುಷ್ಯರಂತೆ ಮಾಡಿದ ಭೋದಕರನ್ನು ಸ್ಮರಿಸಬೇಕು. ತನ್ನ ತಾಯಿ, ತನ್ನ ತಾಯಿ ನಾಡು ಮತ್ತು ತಾಯಿ ಭಾಷೆಯನ್ನು ಮರೆಯದೆ, ತಪ್ಪದೆ,ಕಲಿತು, ಕಲಿಸಿ, ಪೋಷಿಸಬೇಕು.ಇಂಗ್ಲೀಷ್ ವಿದ್ಯೆ ಕಲಿತ ಗರ್ವದಿಂದ ತಾಯಿ ಭಾಷೆ ಮರೆತರೆ ಜನಾಂಗವೇ ನಿಮ್ಮನ್ನು ಮರೆಯುತ್ತದೆ. ದಿವ್ಯತ್ವದ ಸೇವೆಯೆ ದಿವ್ಯತ್ವಕ್ಕೆ ದಾರಿ. ಮೊಟ್ಟ ಮೊದಲು ನಾವು ಮಾನವರಾಗೋಣ. ನಂತರ ಸಮಾಜವನ್ನು ಸುಧಾರಿಸುವ, ನಮ್ಮ ನಮ್ಮಲ್ಲಿಯೇ ನಾವು ಸುಧಾರಣೆ ಕಂಡುಕೊಂಡರೆ, ಸಮಾಜ ತಾನಾಗಿಯೇ ಸುಧಾರಣೆಗೊಳ್ಳುವುದು.

- ಚೇಂದ್ರಿಮಾಡ ಗ. ಮುತ್ತಪ್ಪ, ಕುಶಾಲನಗರ.

ಕಲ್ಪನೆಗೆ ನಿಲುಕದಷ್ಟು ಮಹಾ ಮಹಿಮೆಯುಳ್ಳದೇ ದೇವರು

ಸ್ವಾತಂತ್ರ್ಯದ ಸದುಪಯೋಗಕ್ಕೆ ಹೊಸೂರು ರಮೇಶ್ ಜೋಯಪ್ಪ ಕರೆ. ಕೊಡಗು ಗೌಡ ವಿದ್ಯಾಸಂಘದಿಂದ ಪ್ರತಿಭೆಗಳ ಅನ್ವೇಷಣೆ



ಭಾರತ ಸ್ವಾತಂತ್ರ್ಯಗೊಳ್ಳಲು ಹಲವು ಮಹಾತ್ಮರು ಆತ್ಮತ್ಯಾಗ ಮಾಡಿದ್ದಾರೆ. ಸ್ವಾತಂತ್ರ್ಯಾನಂತರವೂ ಹಲವು ಯೋಧರು ರಾಷ್ಟ್ರಕ್ಕಾಗಿ ತಮ್ಮ ಪ್ರಾಣ ಅರ್ಪಿಸಿದ್ದಾರೆ. ಇವರೆಲ್ಲರ ಆತ್ಮಕ್ಕೆ ಶಾಂತಿ ಸಿಗಬೇಕಾದರೆ, ಪ್ರತಿಯೊಬ್ಬರೂ ಅವರವರ ಕರ್ತವ್ಯಗಳನ್ನೂ ಶ್ರದ್ಧೆಯಿಂದ ನಿರ್ವಹಿಸಬೇಕು ಎಂದು ಕೊಡಗು ಗೌಡ ವಿದ್ಯಾಸಂಘದ ಅಧ್ಯಕ್ಷ ಹೊಸೂರು ರಮೇಶ್ ಜೋಯಪ್ಪ ಕರೆ ನೀಡಿದ್ದಾರೆ.

ಆಗಸ್ಟ್ 17 ರಂದು ಸ್ವಾತಂತ್ರ್ಯೋತ್ಸವದ ಪ್ರಯುಕ್ತ, ಕೊಡಗು ಗೌಡ ವಿದ್ಯಾರ್ಥಿಗಳಿಗೆ, ವಿದ್ಯಾಸಂಘದ ವತಿಯಿಂದ ಹಮ್ಮಿಕೊಂಡಿದ್ದ ಹಲವು ಸ್ಪರ್ಧಾ ಕಾರ್ಯಕ್ರಮದಲ್ಲಿ ಪ್ರಸ್ತಾವಿಕವಾಗಿ ಮಾತನಾಡಿದ ಅವರು, ಜನಾಂಗದ ಪ್ರತಿಭೆಗಳನ್ನು ಪ್ರೋತ್ಸಾಹಿಸಲು ಈ ಸ್ಪರ್ಧೆಗಳನ್ನು ಏರ್ಪಡಿಸಲಾಗಿದ್ದು, ಆಯ್ಕೆಯಾದ ಪ್ರತಿಭೆಗಳಿಗೆ 'ಪ್ರತಿಭಾ ಪುರಸ್ಕಾರ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುವುದು ಎಂದು ತಿಳಿಸಿದರು.

ಸ್ಪರ್ಧಾ ಕಾರ್ಯಕ್ರಮದ ಅಂಗವಾಗಿ ಪ್ರಾಥಮಿಕ ಶಾಲಾ ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆಯನ್ನು, ಮಾಧ್ಯಮಿಕ ಶಾಲಾ ಮಕ್ಕಳಿಗೆ ಒಂದು ಪದದ ಉತ್ತರ ಬರೆಯುವ ಸ್ಪರ್ಧೆ, ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಸ್ಪರ್ಧೆ, ಕಾಲೇಜು ವಿದ್ಯಾರ್ಥಿಗಳಿಗೆ ಪ್ರಬಂಧ ಸ್ಪರ್ಧೆಗಳನ್ನೂ ಏರ್ಪಡಿಸಲಾಗಿತ್ತು. ಚಿತ್ರಕಲಾ ಸ್ಪರ್ಧೆಯಲ್ಲಿ 26 ಮಕ್ಕಳು ಭಾಗವಹಿಸಿದ್ದು, ದೇವಜನ ನವಾನಿ ಪ್ರಥಮ, ದಂಬೆಕೋಡಿ ಮೌಲ್ಯ ದ್ವಿತೀಯ ಮತ್ತು ಮುಕ್ಕಾಟಿ ರಾಧಿಕಾ ತೃತೀಯ ಸ್ಥಾನ ಪಡೆದುಕೊಂಡರು. ಒಂದು ಪದದ ಉತ್ತರ ಬರೆಯುವ ಸ್ಪರ್ಧೆಯಲ್ಲಿ 29 ವಿದ್ಯಾರ್ಥಿಗಳು ಭಾಗವಹಿಸಿದ್ದು, ಕುಯಿಮುಡಿ ಹರ್ಷಿತಾ ಪ್ರಥಮ, ಕುದುಕುಳಿ ಭರತ್ ಹೆಲನ್ ದ್ವಿತೀಯ, ಹೊಸೂರು ದೀನ ಮತ್ತು ಕುದುಕುಳಿ ನಂದಿತಾ ತೃತೀಯ ಸ್ಥಾನ ಪಡೆದರು. ರಸಪ್ರಶ್ನೆ ಸ್ಪರ್ಧೆಯಲ್ಲಿ 18 ತಂಡಗಳು ಭಾಗವಹಿಸಿದ್ದು, ಮೇಡತನ ಮೋನಿಕಾ, ಪೂಜಾರಿರ ಪುಷ್ಪಾಂಜಲಿ, ಪೂಜಾರಿರ ಚಂದ್ರಜಿತ್ ತಂಡ ಪ್ರಥಮ, ಪರ್ಲಕೋಟಿ ಕಾತ್ಯಾಯಿನಿ, ಬಾರಿಕೆ ಹರ್ಷಿತಾ, ಮೇರ್ಕಜೆ ಮಾನಸ ತಂಡ ದ್ವಿತೀಯ, ಮೊಟ್ರಮೀನ, ದೇವಾಯಿರ ಯೋಗಿತಾ, ಮೊಟ್ರವಾಣಿ ತಂಡ ತೃತೀಯ ಸ್ಥಾನಗಳನ್ನು ಪಡೆದುಕೊಂಡರು.

ಮುಖ್ಯ ತೀರ್ಪುಗಾರರಾಗಿ ಚೀಯಂಡಿ ಯಾದವ, ಬಾರಿಯಂಡ ಜೋಯಪ್ಪ, ಪಟ್ಟಡ ಶಿವಕುಮಾರ್, ಕೊಳುಂಬೆ ಭಾನು ಪ್ರಕಾಶ್ ಕಾರ್ಯ ನಿರ್ವಹಿಸಿದರು. ಕಾರ್ಯಕ್ರಮದ ಮೊದಲಿಗೆ ಕುದುಪಜೆ ಕಂಪನ, ಕಡ್ಯದ ನೇಹ, ಮುಕ್ಕಾಟಿ ಲೈಲಾ ಪ್ರಾರ್ಥಿಸಿದರು. ಉಪಾಧ್ಯಕ್ಷ ಸೂರ್ತಲೆ ಸೋಮಣ್ಣನವರು ಕಾರ್ಯಕ್ರಮ ನಿರೂಪಿಸಿದರೆ, ಕಾರ್ಯದರ್ಶಿ ವಿದ್ಯಾಧರರವರು ವಂದಿಸಿದರು. ಪದಾಧಿಕಾರಿಗಳಾದ ಖಜಾಂಚಿ ಪೊನ್ನಚ್ಚನ ಸೋಮಣ್ಣ, ಅಮೆ ಕಮಲಾ ಗಣಪತಿ, ಸೂದನ ಈರಪ್ಪ, ಕೋಡಿ ಚಂದ್ರಶೇಖರ್, ಪರ್ಲಕೋಟಿ ಕಾವೇರಪ್ಪ, ಬೆಪ್ಪುರನ ಮೇದಪ್ಪ ಯಾಲದಾಳು ಸಾವಿತ್ರಿ, ಚೆಟ್ಟಿಮಾಡ ರಘುಪತಿ, ಮೊದಲಾದವರು ಸಮಾರಂಭದಲ್ಲಿ ಭಾಗವಹಿಸಿದ್ದರು.

ಕೊಡಗು ಗೌಡ ವಿದ್ಯಾಸಂಘ ಈಗ ಎತ್ತ ಸಾಗುತ್ತಿದೆ?

ಕೊಡಗು ಗೌಡ ವಿದ್ಯಾಸಂಘದ ನೇತೃವವನ್ನು ಯುವ ಪಡೆ ತನ್ನ ಹೆಗಲ ಮೇಲೆ ಹೊತ್ತುಕೊಂಡ ಮೇಲೆ, ಸಂಘಕ್ಕೆ ನವ ಚೇತನ ಬಂದಿದೆಯೇ? ಹೌದು ಎನ್ನುತ್ತದೆ ಕೊಡಗಿನ ಗೌಡ ಜನವಲಯ. ವಿದ್ಯಾಸಂಘದಲ್ಲಿ ಈಗ ಉತ್ಸಾಹಿ ಯುವಕರು ಇದ್ದಾರೆ, ಅಪಾರ ಅನುಭವಿಗಳೂ ಇದ್ದಾರೆ, ಪ್ರಾಜ್ಞರು ಇದ್ದಾರೆ, ಸಂಘಟನಾ ಚತುರರೂ ಇದ್ದಾರೆ, ಕ್ರಿಯಾಶೀಲರೂ ಇದ್ದಾರೆ. ಆದುದರಿಂದ ಹತ್ತು ಹಲವು ಯಶಸ್ವೀ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.

ಗ್ರಾಮೀಣ ವಿದ್ಯಾರ್ಥಿಗಳಿಗೆ, ನಗರ ಪ್ರದೇಶಗಳ ವಿದ್ಯಾರ್ಥಿಗಳೊಂದಿಗೆ ಸ್ಪರ್ಧೆ ನಡೆಸಲು ಸಾಧ್ಯವಿಲ್ಲವೆಂದು ಮನಗಂಡ ವಿದ್ಯಾಸಂಘ ಪುರಸ್ಕಾರ ನೀಡುವಾಗ ಗ್ರಾಮೀಣ ಪ್ರದೇಶವನ್ನೂ ಪ್ರತ್ಯೇಕವಾಗಿ ಪರಿಗಣಿಸಿದೆ. ಸ್ಪರ್ಧಾ ಕಾರ್ಯಕ್ರಮಗಳಿಗೆ ಗ್ರಾಮೀಣ ವಿದ್ಯಾರ್ಥಿಗಳನ್ನೂ ಸೆಳೆಯುವುದಕ್ಕಾಗಿ, ಅವರಿಗೆ ಪ್ರಯಾಣ ದರವನ್ನೂ ವಿದ್ಯಾಸಂಘವೇ ಭರಿಸುತ್ತಿದೆ. ಕೆಲವು ಗ್ರಾಮೀಣ ಶಾಲೆಗಳನ್ನೂ ಆರಿಸಿಕೊಂಡು ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಧನ ನೀಡುವ ಕಾರ್ಯಕ್ರಮವನ್ನೂ ಹಮ್ಮಿಕೊಂಡಿದೆ. ಬರಹಗಾರರನ್ನೂ ಪ್ರೋತ್ಸಾಹಿಸಲು ಪುಸ್ತಕ ಬಿಡುಗಡೆಯಂತಹ ಕಾರ್ಯಕ್ರಮಗಳನ್ನೂ ಹಮ್ಮಿಕೊಳ್ಳುತ್ತಿದೆ.

ವಿದ್ಯಾಸಂಘದ ಕಟ್ಟಡವೂ ಈಗ ದುರಸ್ಥಿಗೊಂಡಿದ್ದು, ಸಾಕಷ್ಟು ಶೃಂಗಾರದೊಂದಿಗೆ ಜನಮನ ಸೆಳೆಯುತ್ತಿದೆ. ಅಂಗಳವು ಡಾಂಬರೀಕರಣ ಗೊಂಡ ಮೇಲಂತೂ, ಸಂಘದ ಘನತೆ ಮತ್ತಷ್ಟು ಹೆಚ್ಚಿದೆ. ಹಾಗೆಂದು ಈ ಹಿಂದಿನ ಪದಾಧಿಕಾರಿ ಮಂಡಲಿಗಳನ್ನೂ ಟೀಕಿಸುವಂತಿಲ್ಲ. 1908ರಿಂದಲೂ ವಿದ್ಯಾಸಂಘ ವಿದ್ಯಾಭಿವೃದ್ಧಿಗಾಗಿ ಹಲವು ಕಾರ್ಯಕ್ರಮಗಳನ್ನೂ ಹಮ್ಮಿಕೊಂಡು ಬರುತ್ತಿದೆಯಾದರೂ, ಈಗಿರುವ ಪದಾಧಿಕಾರಿ ಮಂಡಲಿ ಜನಾಂಗದ ಅಭಿವೃದ್ಧಿಯಲ್ಲಿ ಮಿಂಚಿನ ಸಂಚಲ ನವನ್ನುಂಟು ಮಾಡುತ್ತಿದೆ ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ವಿದ್ಯಾಸಂಘದಲ್ಲಿ ಹಣವಿದೆ, ಯುವಶಕ್ತಿಯ ಬಲವಿದೆ. ಜನಾಂಗದ ಮುಂದೆ ಹಲವು ಸವಾಲುಗಳಿವೆ. ವಿದ್ಯಾಸಂಘ ಮುನ್ನಡೆಯಲಿ ಜನಾಂಗವನ್ನು ಮುನ್ನಡೆಸಲಿ ಎಂಬುದು ನಮ್ಮ ಹಾರೈಕೆ.

- ಪಟ್ಟಡ ಶಿವಕುಮಾರ್

ನಾ ಕಂಡ ದೇವಿ ಪ್ರಸಾದ್



ಸ್ಪದಯರೂ ಸೇವಾ ಧುರೀಣರೂ ಆದ ನಂಜಯ್ಯನ ಮನೆ ಸಂಣಯ್ಯ ದೇವಿಪ್ರಸಾದ್ ಅವರು ಅರವತ್ತು ವರ್ಷ ತುಂಬು ಜೀವನ ನಡೆಸಿರುವ ಪ್ರಯುಕ್ತ ಷಷ್ಠ್ಯಬ್ದಿ ಪೂರ್ತಿ ಸಮಾರಂಭ ನಡೆಯುತ್ತಿರುವುದು ಗೌಡ ಜನಾಂಗ ಹೆಮ್ಮೆ ಪಡುವಂಥ ಸಂಗತಿಯಾಗಿದೆ.

ದೇವಿ ಪ್ರಸಾದ್‌ರವರ ತಂದೆ ಸಣ್ಣಯ್ಯ ಪಟೇಲರು ಗೌಡ ಜನಾಂಗದ ಸರ್ವಾಂಗೀಣ ಅಭಿವೃದ್ಧಿಗಾಗಿ ದುಡಿದವರು. 20ನೇ ಶತಮಾನದ ಆದಿಭಾಗದಲ್ಲಿ ನಿಡ್ಯಮಲೆ ರಾಮಪ್ಪಗೌಡರು ಮತ್ತು ಕುಂಭಗೌಡನ ಕುಶಾಲಪ್ಪನವರು ಉನ್ನತ ವಿದ್ಯಾಭ್ಯಾಸ ಪಡೆದವರಾಗಿದ್ದರು. ಆ ಕಾಲದಲ್ಲಿ ಹತ್ತು ಕುಟುಂಬ ಹದಿನೆಂಟು ಗೋತ್ರದ ಗೌಡ ಬಾಂಧವರಲ್ಲಿ ಕೇವಲ ಕೈ ಬೆರಳೆಣಿಕೆಯಷ್ಟು ಮಂದಿ ಮಾತ್ರ ವಿದ್ಯಾವಂತರಾಗಿದ್ದರು. ಆ ಸಂದರ್ಭದಲ್ಲಿ ಸಂಪಾಜೆ ಸಣ್ಣಯ್ಯ ಪಟೇಲರು ಇನ್ನಿತರ ಗೌಡ ಮುಂದಾಳುಗಳ ಜೊತೆ ಸೇರಿ ತಮ್ಮ ಜನಾಂಗದ ಮಕ್ಕಳು ವಿದ್ಯಾಭ್ಯಾಸ ಮಾಡಿ ಎಲ್ಲಾ ರಂಗಗಳಲ್ಲಿ ಮುಂದೆ ಬರಬೇಕು ಎನ್ನುವ ಉದ್ದೇಶದಿಂದ ಅಹರ್ನಿಶಿ ದುಡಿದರು.

1960ರ ದಶಕದಲ್ಲಿ ನನ್ನ ತಂದೆ ಪಟ್ಟಡ ಮುತ್ತಣ್ಣನವರು ಹೇಳಿದಂತೆ ಸಣ್ಣಯ್ಯ ಪಟೇಲರು ಯಾವಾಗಲೂ ಜೇಬಿನಲ್ಲಿ ಒಂದು ಚೀಟಿ ಇಟ್ಟುಕೊಂಡಿರುತ್ತಿದ್ದರಂತೆ. ಅದರಲ್ಲಿ ಯಾರ‍್ಯಾರ ಮನೆಯಲ್ಲಿ ಎಷ್ಟು ಮಕ್ಕಳಿದ್ದಾರೆ ಎನ್ನುವ ವಿವರ ಇರುತ್ತಿತ್ತಂತೆ. ಅವರು ಬೇರೆ ಊರುಗಳಿಗೆ ಹೋದಾಗ ನಿಮಗೆ ಎಷ್ಟು ಮಕ್ಕಳು? ಏನು ಮಾಡುತ್ತಿದ್ದಾರೆ? ಇತ್ಯಾದಿ ವಿವರಗಳನ್ನು ಕೇಳಿ ತಿಳಿದುಕೊಂಡು ಆ ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸುವಂತೆ ಪೋಷಕರಿಗೆ ಸಲಹೆ ನೀಡುತ್ತಿದ್ದರಂತೆ. ಯಾವುದಾದರೂ ಕುಟುಂಬದಲ್ಲಿ ಹುಷಾರಿಲ್ಲದ ಮಕ್ಕಳಿದ್ದರೆ ಅಂತಹ ಮಕ್ಕಳ ಪಾಲನೆ, ಪೋಷಣೆ, ವಿದ್ಯಾಭ್ಯಾಸ ಕೊಡಿಸುವ ಜವಾಬ್ದಾರಿಯನ್ನು ತಾವೇ ಹೊತ್ತುಕೊಳ್ಳುತ್ತಿದ್ದರಂತೆ. ಆಗರ್ಭ ಶ್ರೀಮಂತರೂ, ಊರ ಪಟೇಲರು ಹಾಗೂ ನಾಡ ಪಟೇಲರೂ ಸಹ ಆಗಿದ್ದ ಸಣ್ಣಯ್ಯಗೌಡರು ತಮ್ಮ ಜನಾಂಗದ ಮಕ್ಕಳು ಮುಂದೆ ಬರಲಿ ಎನ್ನುವ ಉದ್ದೇಶದಿಂದ ಈ ರೀತಿ ನಿಸ್ವಾರ್ಥ ಸೇವೆ ಮಾಡುತ್ತಿದ್ದರೆಂದು ತಿಳಿದು ನನಗೆ ಅವರ ಬಗ್ಗೆ ಆಗಲೇ ಅಪಾರ ಗೌರವ ಮೂಡಿತ್ತು.

ಸಣ್ಣಯ್ಯ ಪಟೇಲರ ಮನೆಯಲ್ಲಿ ಕಡಾಯಿಯಿದ್ದು, ಅದರಲ್ಲಿ ನಿಧಿ ಇದೆ ಎಂದು ಹೇಳುತ್ತಿದ್ದ ಮಾತು ದಂತಕತೆಯಂತೆ ತೋರುತ್ತಿತ್ತು. ಆದರೆ ಅದು ಸತ್ಯಕತೆ ಎಂದು ನನ್ನ ತಂದೆ ಹೇಳುತ್ತಿದ್ದರು. ನನಗೆ ಅವರ ಮನೆ ನೋಡಬೇಕೆಂದು ಆಸೆಯಿತ್ತು. ಕಳೆದ ವರ್ಷ ದೇವಿ ಪ್ರಸಾದ್ ಅವರ ಷಷ್ಠ್ಯಬ್ದಿ ಪೂರ್ವಾರ್ಧದಲ್ಲಿ ಅವರ ಮನೆಗೆ ಹೋಗಲು ಅವಕಾಶವಾಯಿತು. ನಿಧಿ ಇರುವ ಜಾಗವನ್ನು ನೋಡಿ ತುಂಬಾ ಸಂತೋಷವಾಯಿತು.

ಎಸ್. ಎಸ್. ದೇವಿಪ್ರಸಾದ್ ಅವರು ಒಳ್ಳೆಯ ರಾಜಕಾರಣಿ, ಶಿಕ್ಷಣ ಪ್ರೇಮಿ, ಸಾಹಿತಿ, ಚಿಂತಕ, ಕಲಾವಿದ, ನಿರ್ದೇಶಕ, ರಂಗಕರ್ಮಿ, ಸಹಕಾರಿ ಧುರೀಣ, ಉತ್ತಮ ಸಂಘಟಕ, ಮಾದರಿ ಕೃಷಿಕ, ಬುದ್ಧಿ ಜೀವಿ, ಎಲ್ಲಕ್ಕಿಂತ ಹೆಚ್ಚಾಗಿ ಸ್ನೇಹಜೀವಿಯಾಗಿದ್ದಾರೆ. ವೃತ್ತಿ ಬಡವನಾಗಿರಲಿ, ಶ್ರೀಮಂತನೇ ಆಗಿರಲಿ ಆತನ ಬೆನ್ನು ತಟ್ಟಿ ಪ್ರೀತಿಯಿಂದ ಮಾತನಾಡಿಸುತ್ತಾರೆ.

ದೇವಿ ಪ್ರಸಾದ್ ಅವರಿಗೆ ನಾವೆಲ್ಲಾ 'ನಮಸ್ಕಾರ ಅಣ್ಣಾ' ಎಂತಲೇ ಮಾತನಾಡಿಸುತ್ತೇವೆ. ಅವರು ಅಣ್ಣಾ ನೀವು ಹೇಗೆ ಒಳಿರಿ ಲಾಯಕ್ಕಾಗಿ ಒಳರಿಯಾ? ಎಂದು ಹೃತ್ಪೂರ್ವಕವಾಗಿ ನಮ್ಮ ಕ್ಷೇಮ ಸಮಾಚಾರ ವಿಚಾರಿಸುತ್ತಾರೆ. ಅವರ ಪ್ರೀತಿ, ವಿಶ್ವಾಸ, ಅಂತಃಕರಣದ ಮಾತಿನಿಂದ ನಮ್ಮ ಹೃದಯ ತುಂಬಿ ಬಂದು ಅವರ ಬಗ್ಗೆ ಗೌರವ ಭಾವನೆ ಇಮ್ಮಡಿಗೊಳ್ಳುತ್ತದೆ.

ದೇವಿ ಪ್ರಸಾದ್ ಅವರಿಗೆ ಗೌಡ ಜನಾಂಗದ ಬಗ್ಗೆ ಆದರ, ಅಭಿಮಾನ ಅವರ ತಂದೆಯಿಂದ ಬಳುವಳಿಯಾಗಿ ಬಂದಿದೆ. ತಮ್ಮ ತಂದೆ ಹಾಕಿಕೊಟ್ಟ ಮಾರ್ಗದಲ್ಲೇ ಮುನ್ನಡೆಯುತ್ತಿರುವ ದೇವಿ ಪ್ರಸಾದ್ ಅವರದು ಅಭೂತಪೂರ್ವ ಸಾಧನೆ. ಅವರ ಸಾಧನೆಯ ಮುಂದೆ ಯಾರೂ ಸಾಟಿಯಿಲ್ಲ ಎಂದರೆ ಅತಿಶಯೋಕ್ತಿಯಲ್ಲ.

ಗೌಡ ಜನಾಂಗದವರಲ್ಲಿ ಕೀಳರಿಮೆಯಿದ್ದ ಕಾಲದಲ್ಲಿ ಕೊಡಗು ಬ್ರಿಟಿಷರ ವಶವಾಯಿತು. ಗೌಡ ಜನಾಂಗಕ್ಕೆ ಆದ ಅನ್ಯಾಯದ ವಿರುದ್ಧ ಸಿಡಿದೆದ್ದ ಜನಾಂಗದ ಏಕೈಕ ಸಿಡಿಲು ಮರಿ ದೇವಿಪ್ರಸಾದ್ ಎಂದು ಹೇಳಲು ನಾನು ಹೆಮ್ಮೆ ಪಡುತ್ತೇನೆ. ಅವರು ಕೊಡಗಿನ ಗೌಡ ಜನಾಂಗಕ್ಕೆ ಅತ್ಯವಶ್ಯಕವಾಗಿ ಬೇಕಾದ ರಾಜಕೀಯ ಶಕ್ತಿಯನ್ನು ತುಂಬಿದ ಮೇರು ವ್ಯಕ್ತಿ. ಜನಾಂಗದ ಅಭಿವೃದ್ಧಿಗೆ ಶಕ್ತ ರಾಜಕಾರಣ ಎಷ್ಟು ಮಹತ್ವಪೂರ್ಣವಾದುದು ಎಂಬುದನ್ನು ಸಾಧನೆಯ ಮುಖಾಂತರ ತೋರಿಸಿ, ಅರಿವು ಮೂಡಿಸಿದ ಮಹಾನ್ ವ್ಯಕ್ತಿ. ದೇವಿ ಪ್ರಸಾದ್ ಅವರು ತಮ್ಮ ಹುಟ್ಟೂರು ಸಂಪಾಜೆ ನಾಡಿನ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುವುದರಲ್ಲಿ ಈಗಲೂ ಮುಂದಿದ್ದಾರೆ.

1992 ರಲ್ಲಿ ಕೊಡಗಿನಲ್ಲಿ ಪ್ರತ್ಯೇಕತೆಯ ಕೂಗು ಮುಗಿಲು ಮುಟ್ಟಿದ ಕಾಲದಲ್ಲಿ ನಾವೆಲ್ಲಾ ಕನ್ನಡಿಗರು, ಭಾರತೀಯರು, ಅನೇಕತೆಯಲ್ಲಿ ಏಕತೆಯಿದೆ ಎಂದು ಗಾಢವಾಗಿ ನಂಬಿರುವ ದೇವಿ ಪ್ರಸಾದ್‌ರವರು 'ಪ್ರಜಾ ವೇದಿಕೆ' ಎಂಬ ವೇದಿಕೆಯನ್ನು ಮುಂದಾಲೋಚನೆ, ಸ್ವಸಾಮರ್ಥ್ಯದಿಂದ ಹುಟ್ಟುಹಾಕಿ, ಅದರ ಸಂಚಾಲಕರಾಗಿ ಪ್ರೇರಕ ಶಕ್ತಿಯಾಗಿ ಕೆಲಸಮಾಡಿ ಪ್ರತ್ಯೇಕತೆಯ ಹುಟ್ಟಡಗಿಸಿದ ಗಂಡುಗಲಿ, ಕೆಚ್ಚೆದೆಯ ವೀರ. ಇವರ ನಿಚ್ಚಳ ನಿಲುವು ಆದರ್ಶ,

ಹೋರಾಟವನ್ನು ಸಹಿಸದ ಕೆಲವು ದುಷ್ಟ ಶಕ್ತಿಗಳು ಹೊಂಚು ಹಾಕಿ ಇವರನ್ನು ಮುಗಿಸಲು ಹೂಡಿದ್ದ ಸಂಚು ವಿಫಲವಾಗಿದ್ದು, ದುಷ್ಟ ಶಕ್ತಿಯನ್ನು ಮೆಟ್ಟಿ ನಿಂತು ದೈವೀಶಕ್ತಿ ಮೆರೆಯಿತಿಲ್ಲಿ. ಒಂದು ತರದ ಭೀತಿಯ ವಾತಾವರಣ ಉಂಟಾಗಿ ಪಟ್ಟಬದ್ಧ ಹಿತಾಶಕ್ತಿಯವರ ಸವಾರ್ಥಿಕಾರದ ಕೆಟ್ಟ ನಿಲುವಿನ ಕಠಿಣ ಪರಿಸ್ಥಿತಿಯಲ್ಲಿ ದೇವಿ ಪ್ರಸಾದ್‌ರವರು ಪ್ರಜಾವೇದಿಕೆಯನ್ನು ಕೊಡಗಿನ ಹಲವಾರು ಜನಾಂಗದವರನ್ನು ಸೇರಿಸಿಕೊಂಡು ಹುಟ್ಟಿ ಹಾಕದಿದ್ದ ಪಕ್ಷದಲ್ಲಿ ಕೊಡಗು ಕೈ ಜಾರುವ ಸಮೀಪ ಬಂದಿತ್ತೆಂಬುದು ನಿರ್ವಿವಾದ. ಇಂತಹ ಸಂದರ್ಭದಲ್ಲಿ ದೇವಿ ಪ್ರಸಾದ್‌ರವರ ಧೀರ್ಘದೃಷ್ಠಿಯ ಮುಂದಾಲೋಚನೆಯ ಅನೇಕತೆಗಳಲ್ಲಿ ಏಕತೆಯನ್ನು ಪ್ರತಿಬಿಂಬಿಸಿ ನೀಡಿದ ಕೊಡುಗೆಯೇ "ಪ್ರಜಾವೇದಿಕೆ". ಸುಭದ್ರ ದೇಶ ಕಟ್ಟಲು ಬೇಕು ಭದ್ರ ಬುನಾದಿ.

ಉತ್ತಮ ಶಾರೀರಿಕ ಲಕ್ಷಣ, ನಿಲುವು ತೇಜಸ್ಸಿನಿಂದ ದೇವಿಪ್ರಸಾದ್ ದೈವಾಂಶ ಸಂಬೂತರಂತೆ ಕಾಣುತ್ತಾರೆ. ಧರ್ಮಸ್ಥಳದ ಧರ್ಮಾಧಿಕಾರಿ ವೀರೇಂದ್ರ ಹೆಗ್ಗಡೆಯವರ ಹೆಚ್ಚು ಕಮ್ಮಿ ಮುಖಚರ್ಯೆ ಹಾಗೂ ಆಕಾರಹೊಂದಿರುವ ದೇವಿ ಪ್ರಸಾದರನ್ನು ನೋಡಲು ತುಂಬಾ ಖುಷಿಯಾಗುತ್ತದೆ. ಇವರ ಧರ್ಮಪತ್ನಿ ಇಂದಿರಾ ಸತ್ಕುಲ ಪ್ರಸೂತೆ. ಅವರ ದೈವೀಕಳೆ, ದೈವೀವರ್ಚಸ್ಸನ್ನು ನೋಡಿದಾಗ ಭಕ್ತಿಭಾವದಿಂದ ನನ್ನ ಶಿರಬಾಗುತ್ತದೆ.

ದೇವಿ ಪ್ರಸಾದ್‌ರವರು ಕೆಲವು ಕಾಲ ರಾಜಕೀಯ ರಂಗದಲ್ಲಿ ಸಕ್ರೀಯವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಹಲವಾರು ಜಂಜಾಟಗಳ ನಡುವೆ ಸಿಲುಕಿ ಅವರು ರಾಜಕೀಯ ರಂಗದಲ್ಲಿ ಮುಂದುವರಿಯುವ ಆಸಕ್ತಿ ವಹಿಸಲಿಲ್ಲ. ಒಂದು ವೇಳೆ ರಾಜಕೀಯ ರಂಗದಲ್ಲಿ ಹುರುಪು ಹುಮ್ಮಸ್ಸಿನಿಂದ ಸಕ್ರೀಯರಾಗಿದ್ದರೆ ಇಂದು ಅವರು ರಾಜ್ಯ, ರಾಷ್ಟ್ರ ರಾಜಕಾರಣದಲ್ಲಿಯೂ ಧ್ರುವತಾರೆಯಂತೆ ಮಿನುಗುತ್ತಿದ್ದರೇನೋ!

ಗೌಡ ಜನಾಂಗದ ಸರ್ವತೋಮುಖ ಅಭಿವೃದ್ಧಿಗಾಗಿ ನಾನು 1-4-1997 ರಿಂದ 'ಕೊಡಗು ಸಂಗಾತಿ' ಪಾಕ್ಷಿಕ ಪತ್ರಿಕೆ ಹೊರತಂದೆ. ಪತ್ರಿಕೆಯ ಮುಖಾಂತರ ಜನಾಂಗದ ಸೇವೆ ಮಾಡುತ್ತಾ ಪತ್ರಿಕೆಯೇ ಜನಾಂಗದ ಬೆನ್ನೆಲುಬು ಎಂಬ ನಿಲುವು ನನ್ನದು. ದೇವಿ ಪ್ರಸಾದ್ ಅವರು ತಮ್ಮ ಅನುಭವ ಸಾರವನ್ನು ತಮ್ಮ ಲೇಖನಗಳ ಮುಖಾಂತರ 'ಸಂಗಾತಿ'ಯಲ್ಲಿ ಬರೆದು ಜನಾಂಗಕ್ಕೆ ಮಾರ್ಗದರ್ಶನ ನೀಡುತ್ತಿರುವುದು ನನಗೆ ಹೆಚ್ಚಿನ ಸಂತೋಷವನ್ನು ನೀಡಿದೆ. ಅವರದು ಪ್ರಬುದ್ಧ ಚಿಂತನೆ. ಅವರ ಒಂದೊಂದು ಲೇಖನವೂ ಆಕರ ಬರಹ. ಅಧ್ಯಯನದಿಂದ ಸಂಪದ್ಭರಿತವಾದ ಅವರ ಲೇಖನಗಳು ಅನುಭವ, ಚರ್ಚೆ, ವಿಮರ್ಶೆ, ಮೂಲ ತಿರುಳಿನ ಸಾರ ಸಂಗ್ರವಾಗಿವೆ. ಅವರು ಲೇಖನಿ ಕೈಗೆತ್ತಿಕೊಳ್ಳುವುದಕ್ಕಿಂತ ಮುನ್ನವೇ ನೂರಕ್ಕೆ ನೂರರಷ್ಟು ಸತ್ಯಾಂಶ ತಿಳಿದು ಬರಹ ರೂಪಕ್ಕಿಳಿಸುವ ಪರಿ ಅನನ್ಯವಾದುದು. ಕೊಡಗಿನಲ್ಲಿ ಗೌಡ ಜನಾಂಗಕ್ಕೆ ಆಗುತ್ತಿರುವ, ಆಗಿ ಹೋಗಿರುವ ಅನ್ಯಾಯದ ವಿರುದ್ಧ ಧ್ವನಿ ಎತ್ತಿದ್ದಾರೆ. ಬ್ರಿಟಿಷರು ಸ್ಥಳೀಯರೊಡಗೂಡಿ ನಿರ್ಮಿಸಿದ ಚರಿತ್ರೆಯ ಅಂಶಗಳ ಬಗ್ಗೆ ಒಡೆದು ಆಳಿದ ನೀತಿಯ ಬಗ್ಗೆ ದೇವಿ ಪ್ರಸಾದರವರಿಗೆ ಬಹಳಷ್ಟು ಅಸಮಾಧಾನವಿದೆ. ಕೊಡಗಿನ ಚರಿತ್ರೆಯನ್ನೆಲ್ಲಾ ಕೂಲಂಕುಷವಾಗಿ ಅಧ್ಯಯನ ಮಾಡಿ, ತಪ್ಪು ಒಪ್ಪುಗಳನ್ನು ವಿವೇಚನೆಯಿಂದ ಪರಿಶೀಲಿಸಿ ಅದರ ಬಗ್ಗೆ ಅಧಿಕೃತವಾಗಿ ಮಾತನಾಡುವಷ್ಟು, ಬರೆಯುವಷ್ಟು ಶಕ್ತಿಶಾಲಿಯಾಗಿದ್ದಾರೆ. ಇತಿಹಾಸಕಾರರು ಕೊಡಗಿನ ಇತಿಹಾಸವನ್ನು ಕಟ್ಟುಕತೆಗಳಂತೆ ತಿರುಚಿ ಮುರುಚಿ ಬರೆದಿದ್ದಾರೆ ಎನ್ನುವ ಅಸಮಾಧಾನ ಅವರಲ್ಲಿದ್ದು, ಸೂಕ್ತ ವೇದಿಕೆಗಳಲ್ಲಿ ಅದನ್ನು ಪ್ರತಿಭಟಿಸಿಯೂ ಇದ್ದಾರೆ.

ಕೊಡಗಿನಲ್ಲಿ ಪ್ರತ್ಯೇಕತೆಯ ಕೂಗು ಮುಗಿಲು ಮುಟ್ಟಿದ ಕಾಲದಲ್ಲಿ ದೇವಿ ಪ್ರಸಾದ್‌ರವರು ಪ್ರಜಾವೇದಿಕೆಯ ಸಂಚಾಲಕರಾಗಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ ಗೌಡ ಜನಾಂಗದವರೇ ಆದ ಕೆಲವರು ಅವರ ಬಗ್ಗೆ ಕೀಳು ಭಾವನೆಯಿಂದ ಟೀಕಿಸಿ ಅವರ ಉತ್ಸಾಹ, ವೈಚಾರಿಕ ನಿಲುವಿಗೆ ತಣ್ಣೀರೆರಚಿದ್ದು ನನ್ನ ದೃಷ್ಟಿಯಲ್ಲಿ ಅಕ್ಷಮ್ಯ ಅಪರಾಧ. ದೇವಿ ಪ್ರಸಾದ್‌ರವರು ಗೌಡ ಜನಾಂಗದ ಅಭಿವೃದ್ಧಿಯ ದೃಷ್ಟಿಯಿಂದ ಈಗ ತಳೆದಿರುವ ನಿಲುವಿನಲ್ಲಿಯೇ ಮುಂದುವರೆದಲ್ಲಿ ಇನ್ನೂ ಹೆಚ್ಚಿನ ಮೇಲ್ಪದರಲ್ಲಿ ನಿಲ್ಲಬಹುದು.

ಒಕ್ಕಲಿಗರು ಸಮುದ್ರವಿದ್ದ ಹಾಗೆ. ಆದರೆ ಅವರಲ್ಲಿಯೂ ಹಲವಾರು ಒಳಪಂಗಡಗಳಿವೆ. ದೇವಿಪ್ರಸಾದ್ ಅವರ ಕುಟುಂಬದಲ್ಲಿ ಅವರ ಅಕ್ಕನ ಮಗಳನ್ನು ಒಕ್ಕಲಿಗರ ಪೈಕಿಯ ಎಲ್.ಟಿ. ಕಾರ್ಲೆ ಅವರಿಗೆ ಕೊಟ್ಟು ಸಂಬಂಧ ಬೆಳೆಸಲಾಗಿದೆ. ಹೀಗೆ ಆಗಿರುವುದರಿಂದಲೋ ಏನೋ ಅವರ ಒಲವು ಸ್ವಲ್ಪ ಒಕ್ಕಲಿಗರ ಕಡೆಗಿರುವುದು ಕಂಡುಬರುತ್ತದೆ. ಈ ನಡಾವಳಿ ಕೊಡಗಿನ ಗೌಡ ಜನಾಂಗದ ಮಧ್ಯಮ ವರ್ಗದವರಿಗೆ ಸ್ವಲ್ಪ ಆಪತ್ಕವೆನಿಸಿದೆ. ದೇವಿಪ್ರಸಾದ್‌ರವರಿಗೆ ಆ ಜನಾಂಗದೊಂದಿಗೆ ಬೆರೆಯುವ ಹುಮ್ಮಸ್ಸು ಇದೆಯೇನೋ? ಅಥವಾ ಮಿಂಚುವ ಆಸೆಯಿದೆಯೇನೋ ತಿಳಿಯದು?

ರಾಜಕೀಯವಾಗಿ ಒಕ್ಕಲಿಗರೊಂದಿಗೆ ಕೈ ಜೋಡಿಸುವುದು ಒಂದು ದೃಷ್ಟಿಕೋನದಿಂದ ಸಮಂಜಸವೆನಿಸಿದರೂ, ನಮಗೆ ನಮ್ಮದೇ ಆದ ಭಾಷೆ ಆಚಾರ-ವಿಚಾರ ಕಂದಾಚಾರ ಕಟ್ಟುಪಾಡುಗಳಿದ್ದು, ನಮ್ಮ ಗೌಡ ಜನಾಂಗದವರಿಗಾಗಿ ಕೆಲಸ ಮಾಡಿದರೆ ಈ ತನಕ ಅವರು ಮಾಡಿರುವಂಥ ಎಲ್ಲ ಚಟುವಟಿಕೆಗಳಿಗೆ ಮೌಲ್ಯ ಬರುವುದು ಖಂಡಿತ ಎನ್ನುವುದು ನನ್ನ ಖಚಿತ ಅಭಿಪ್ರಾಯ. ಈ ವಿಚಾರದಲ್ಲಿ ಯಾವುದೇ ರಾಜಿಗೂ ನನ್ನ ಮನಸ್ಸು ಒಪ್ಪದು.

ದೇವಿ ಪ್ರಸಾದ್‌ರವರು ವಾಯುಮಾರ್ಗದಲ್ಲಿ ತೇಲಿದಂತೆ

ನನಗೆ ಭಾಸವಾಗುವುದು. ಆದರೆ ಅವರಿಗೆ ಕೆಳವರ್ಗದ ಜನತೆಯೊಂದಿಗೆ ಸ್ಪಂದನ ಸ್ವಲ್ಪ ಕಡಿಮೆಯೆನ್ನಬೇಕು. ಮೂಲೆಮೂಲೆ ಊರು ಕುಗ್ರಾಮಗಳಿಗೆ ಭೇಟಿ ಕಮ್ಮಿಯೇ. ಅವರು ಗೌಡ ಜನಾಂಗದ ಎಲ್ಲಾ ವರ್ಗದವರೊಡನೆ ತಳ ಮಟ್ಟದಲ್ಲಿ ಸ್ಪಂದಿಸಿದ್ದಿದ್ದರೆ ಇನ್ನೂ ಸಾಕಷ್ಟು ಉತ್ತುಂಗಕ್ಕೆ ಏರಬಹುದಿತ್ತು ಎನ್ನುವುದು ನನ್ನ ಅಭಿಪ್ರಾಯ.

1837ರ ಕೆನರಾ ಬಂಡಾಯದ ಹರಿಕಾರ, ಅಧ್ವರ್ಯು, ಸ್ವಾತಂತ್ರ ಸೇನಾನಿ ಅಪ್ಪಯ್ಯಗೌಡರ ಸಾಧನೆಯನ್ನು ಕುರಿತು ದೇವಿ ಪ್ರಸಾದ್ ಅವರು ಒಂದು ಬೀದಿ ನಾಟಕ ಮಾಡಿಸಿ, ಸುಳ್ಯದಿಂದ ಮಂಗಳೂರು ತನಕ ದಂಗೆಯ ಮುಖಂಡರು ಹೋದ ಹಾದಿಯಲ್ಲೇ ಸಾಗಿ ಬಾವುಟ ಗುಡ್ಡದಲ್ಲಿ ಎಂದಿನಂತೆಯೇ ಬಾವುಟ ಹಾರಿಸಿದರು. ಯುವ ಜನಾಂಗಕ್ಕೆ ಆದರ್ಶಪ್ರಾಯವಾದ ದೇವಿ ಪ್ರಸಾದ್‌ರವರ ಈ ಸಾಧನೆಗೆ ನಾವೆಲ್ಲಾ ಖುಷಿ ಪಡಬೇಕು.

ಕೊಡಗಿನ ಗೌಡ ಜನರ ಮಟ್ಟಿಗೆ ಹೇಳುವುದಾದರೆ ಇಲ್ಲಿ ಲೇಖಕ, ಬರಹಗಾರರಿದ್ದಾರೆ. ಆದರೆ ಸಾಹಿತಿಗಳಿಲ್ಲ. ದಕ್ಷಿಣ ಕನ್ನಡದಲ್ಲಿ ಅನೇಕ ಮಂದಿ ಸಾಹಿತಿಗಳಿದ್ದಾರೆ. ಜನಾಂಗದ ಯುವ ಪೀಳಿಗೆಗೆ ಜನಾಂಗದ ಅರಿವು, ತಿಳಿವು ಮೂಡಿಸುತ್ತಿರುವ ಏಕೈಕ ವ್ಯಕ್ತಿ ದೇವಿ ಪ್ರಸಾದ್ ಎಂಬುದು ಶ್ಲಾಘನೀಯ.

ದೇವಿ ಪ್ರಸಾದ್ ಅವರ ಬಳಿ ಅಮೂಲ್ಯ ಪುಸ್ತಕ ಭಂಡಾರವಿದೆ. ಗೌಡ ಜನಾಂಗದ ಇತಿಹಾಸ ಮತ್ತಿತರ ವಿವರಗಳನ್ನು ಕುರಿತು ಅಪಾರ ಮಾಹಿತಿಯಿದೆ. ಯುವ ಜನಾಂಗ ಈ ಪುಸ್ತಕ ಭಂಡಾರದ ಸದುಪಯೋಗ ಪಡೆದುಕೊಳ್ಳಬೇಕು. ದೇವಿ ಪ್ರಸಾದ್‌ರವರ ಬಗ್ಗೆ ಹೇಳುವುದಾದರೆ ಕೊಡಗಿನ ಗೌಡ ಜನಾಂಗದ ಮಟ್ಟಿಗೆ ಇನ್ನೊಬ್ಬ ದೇವಿ ಪ್ರಸಾದ್ ಹುಟ್ಟಿ ಬರಲು ಶತಮಾನವೇ ಬೇಕಾಗಬಹುದೇನೋ! ಇದು ಅತಿಶಯೋಕ್ತಿಯಲ್ಲ. ಸತ್ಯವೂ ಕೂಡ ಹೌದು. ಗೌಡ ಜನಾಂಗದ ಹಲವಾರು ವಿಷಯ ವಿಚಾರಗಳಲ್ಲಿ ಪಾರಂಗತರಾದ ದೇವಿ ಪ್ರಸಾದ್ ಅವರು ಮಹಾ ಅನುಭವಿ ವ್ಯಕ್ತಿ ,ಮಾರ್ಗದರ್ಶಕರು. ಅವರ ಸೇವೆಯನ್ನು ಪಡೆದುಕೊಳ್ಳುವಲ್ಲಿ ಗೌಡ ಜನಾಂಗ ಮುಂದಾಗಬೇಕು. ಅಸೂಯಾಪರತೆ, ಕಾಲೆಳೆಯುವ ಪ್ರವೃತ್ತಿ ಜನಾಂಗದ ಹಿನ್ನಡೆಗೆ ಕಾರಣ ಎಂಬುದನ್ನು ನಾವು ಮನಗಾಣಬೇಕು.

ದೇವಿ ಪ್ರಸಾದ್‌ರವರು ಸಂಪಾಜೆಯಲ್ಲಿದ್ದು ಒಂದು ಕಾಲು ಕೊಡಗು ಹಾಗೂ ಇನ್ನೊಂದು ಕಾಲು ದಕ್ಷಿಣ ಕನ್ನಡದಲ್ಲಿದ್ದು, ಪಶ್ಚಿಮ ಘಟ್ಟದ ಗೌಡರ ಬೀಡಿಗೆ ಸಾಕಷ್ಟು ಶ್ರಮಿಸಿದ ಮಹಾನ್ ವ್ಯಕ್ತಿ. ಅವರು ವಿದ್ಯೆ, ಬುದ್ಧಿ , ಐಶ್ವರ್ಯದ ಸಮ್ಮಿಳನವಾಗಿದ್ದಾರೆ. ಗಂಡೆದೆಯ ವೀರ ದೇವಿ ಪ್ರಸಾದ್ ಮತ್ತು ಅವರ ಕುಟುಂಬ ವರ್ಗಕ್ಕೆ ಕುಲಗುರು ವೆಂಕಟ್ರಮಣ ಸ್ವಾಮಿ ಮತ್ತು ಶೃಂಗೇರಿ ಶಾರದೆ ಆಯುರಾರೋಗ್ಯ ಐಶ್ವರ್ಯ, ಸುಖ ಸಮೃದ್ಧಿ ನೀಡಿ ಆಶೀರ್ವದಿಸಲಿ ಎಂದು ಈ ಸಂದರ್ಭದಲ್ಲಿ ಮನಪೂರ್ವಕವಾಗಿ ಹಾರೈಸುತ್ತೇನೆ.

- ಪಟ್ಟಡ ಪ್ರಭಾಕರ, ಗೌರವ ಸಂಪಾದಕರು, ಕೊಡಗು ಸಂಗಾತಿ.

ತಣ್ಣನೆಯ ವಿಷ

12 ತಂಪು ಪಾನೀಯಗಳಲ್ಲಿ ಕೀಟ ನಾಶಕ

ಬಾಟಲಿ ನೀರಿನಲ್ಲಿ ಆರೋಗ್ಯಕ್ಕೆ ಮಾರಕವಾದ ಕೀಟನಾಶಕಗಳು ಇರುವುದನ್ನು ಪತ್ತೆ ಮಾಡಿಯಾಯಿತು. ಈಗ ತಂಪು ಪಾನೀಯಗಳ ಸರದಿ. ಎರಡು ಪ್ರಮುಖ ಬಹುರಾಷ್ಟ್ರೀಯ ಕಂಪನಿಗಳು ತಯಾರಿಸುವ 12 ತಂಪು ಪಾನೀಯಗಳಲ್ಲಿ ಅತ್ಯಂತ ವಿಷಕಾರಿ ಕೀಟನಾಶಕಗಳು ಪತ್ತೆಯಾಗಿವೆ ಎಂದು ಸರಕಾರೇತರ ಸಂಸ್ಥೆಯಾದ ವಿಜ್ಞಾನ ಮತ್ತು ಪರಿಸರ ಕೇಂದ್ರ ಹೇಳಿದೆ. ದಿಲ್ಲಿ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ಮಾರಾಟವಾಗುವ 12 ಬಗೆಯ ತಂಪು ಪಾನೀಯಗಳ ತಲಾ ಮೂರು ಬಾಟಲಿಗಳನ್ನು ಪ್ರಯೋಗಾಲಯದಲ್ಲಿ ಪರೀಕ್ಷೆಗೆ ಒಳಪಡಿಸಿದಾಗ, ಐರೋಪ್ಯ ಮಾನದಂಡ ನಿಗದಿಪಡಿಸಿರುವುದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಿ ರಾಸಾಯನಿಕ ಅಂಶಗಳು ಕಂಡು ಬಂದಿವೆ ಎಂಬ ಅದರ ವರದಿ ಗಾಬರಿ ಮೂಡಿಸುವಂತಹುದು. ಅಮೆರಿಕ, ಯೂರೋಪ್‌ಗಳಲ್ಲಿ ನಿಷೇಧಿಸಲಾದ ಡಿಡಿಟಿ, ಲಿಂಡೇನ್‌ನಂಥ ಮಾರಕ ಕೀಟನಾಶಕದ ಅಂಶ ಈ ಎಲ್ಲ ಪಾನೀಯಗಳಲ್ಲಿಯೂ ಪತ್ತೆಯಾಗಿರುವುದು ಆತಂಕಕಾರಿ. ಇದೇ ಕಂಪನಿಗಳು ಅಮೆರಿಕದಲ್ಲಿ ಮಾರಾಟ ಮಾಡುತ್ತಿರುವ ಪಾನೀಯಗಳಲ್ಲಿ ವಿಷದ ಅಂಶವಿರಲಿಲ್ಲವೆಂಬುದು ಗಮನಾರ್ಹ.

ಈ ಕಂಪನಿಗಳ ತಂಪು ಪಾನೀಯ ಸೇವಿಸುವವರಲ್ಲಿ ಮಕ್ಕಳು ಮತ್ತು ಹದಿಹರೆಯದವರೇ ಹೆಚ್ಚು. ಪ್ರಮುಖ ಚಿತ್ರ ತಾರೆಯರು ಜಾಹೀರಾತಿನ ಮೂಲಕ ಇವರನ್ನು ಸೆಳೆಯುತ್ತಿರುವುದು ನಿಜ. 2001 ರ ಅಂಕಿ ಅಂಶಗಳ ಪ್ರಕಾರ 650 ಕೋಟಿ ಬಾಟಲಿಗಳ ತಂಪು ಪಾನೀಯವನ್ನು ಭಾರತೀಯರು ಸೇವಿಸಿದ್ದಾರೆ. ಈಗ ಅದು ಇನ್ನೂ ಹೆಚ್ಚಾಗಿರಬಹುದು. ವಾಸ್ತವವಾಗಿ ಇವರು ತಣ್ಣಗೆ ನೀಡುವ ವಿಷವನ್ನು ಸೇವಿಸುತ್ತಿದ್ದಾರೆಂದರೆ ತಪ್ಪಾಗದು. ಈ ಪಾನೀಯಗಳಲ್ಲಿನ ಕೀಟನಾಶಕಗಳ ಅಂಶ ದಿಢೀರ್ ಸಾವಿಗೆ ಕಾರಣವಾಗುವುದಿಲ್ಲ. ಅದು ದೇಹದ ಮೇಲೆ ನಿಧಾನವಾಗಿ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಈ ಪಾನೀಯಗಳಲ್ಲಿ ಲಿಂಡೇನ್, ಡಿಡಿಟಿಗಳಿರುವುದು ಪತ್ತೆಯಾಗಿದೆ. ಡಿಡಿಟಿ ಎಂತಹ ವಿಷಕಾರಿ ಎಂಬುದು ಎಲ್ಲರಿಗೂ ಗೊತ್ತು. ಜನರಿಗೆ ಇಷ್ಟೆಲ್ಲ ಸಂಕಷ್ಟ ಉಂಟುಮಾಡುವ ವಿಷಗಳನ್ನು ತಂಪು ಪಾನೀಯಗಳಲ್ಲಿ ಸೇರಿಸುವುದನ್ನು ತಡೆಯಲು ಶಕ್ತವಿರುವ ಕಾನೂನುಗಳಿಲ್ಲ ಎಂಬುದು ವಿಪರ್ಯಾಸ. ಈಗಿರುವ ಕಾನೂನು ದುರ್ಬಲವಾಗಿದೆ. ಜನರಿಗೆ ಮಾರಕವಾದ ವಿಷ ಅಂಶಗಳ ತಡೆಗೆ ಬಿಗಿ ಕಾನೂನು ಅಗತ್ಯ. ನಿರೀಕ್ಷೆಯಂತೆ ಈ ಕಂಪನಿಗಳು ಸಂಶೋಧನೆಯ ಅಂಶಗಳನ್ನು ನಿರಾಕರಿಸಿವೆ. ಯಾವುದೇ ಪರೀಕ್ಷೆಗೆ ಸಿದ್ಧವೆಂದು ಸವಾಲು ಎಸೆದಿವೆ. ಸರಕಾರ ಈ ಬಗ್ಗೆ ಗಂಭೀರ ಚಿಂತನೆ ಮಾಡಬೇಕು. ಮತ್ತೊಮ್ಮೆ ಈ ತಂಪು ಪಾನೀಯಗಳನ್ನು ಪರೀಕ್ಷೆಗೆ ಒಳಪಡಿಸಿ ನಿಜಾಂಶವನ್ನು ಜನರ ಮುಂದಿಡಬೇಕು.

-ಸಂಗಾತಿ

ಸಹಾಯ ಮಾಡುವ ಕೈಗಳು ಪ್ರಾರ್ಥನೆ ಮಾಡುವ ತುಟಿಗಳಿಗಿಂತ ಶ್ರೇಷ್ಠ

ರಾಷ್ಟ್ರದ ಗಡಿಯಲ್ಲಿ ಗುಂಡೇಟಿಗೆ ಬಲಿಯಾದ ಮತ್ತೋರ್ವ ವೀರ ಸುಂಟಿಕೊಪ್ಪದ ಪಿ.ಡಿ. ವರ್ಗೀಸ್



ರಾಷ್ಟ್ರ ರಕ್ಷಣೆ ಸಂದರ್ಭ ಅಂತರ ರಾಷ್ಟ್ರೀಯ ಗಡಿ ನಿಯಂತ್ರಣ ರೇಖೆಯ ಬಳಿ ಕರ್ತವ್ಯ ನಿರ್ವಹಿಸುತ್ತಿದ್ದು ಉಗ್ರಗಾಮಿಗಳ ಗುಂಡೇಟಿಗೆ ಬಲಿಯಾದ ಕೊಡಗಿನ ಮತ್ತೋರ್ವ ಯೋಧ ಪಿ.ಡಿ. ವರ್ಗೀಸ್ ಅವರ ಪಾರ್ಥಿವ ಶರೀರದ ಅಂತ್ಯಕ್ರಿಯೆಯನ್ನು ಸಾವಿರಾರು ಮಂದಿಯ ಅಶ್ರುತರ್ಪಣದೊಂದಿಗೆ ಕ್ರೈಸ್ತ ಧರ್ಮಧ ವಿಧಿ ವಿಧಾನಗಳೊಂದಿಗೆ ಸುಂಟಿಕೊಪ್ಪ ಸಮೀಪದ 7 ನೇ ಹೊಸಕೋಟೆಯಲ್ಲಿ ನೆರವೇರಿಸಲಾಯಿತು.

ಈಗ್ಗೆ 11 ವರ್ಷಗಳ ಹಿಂದೆ ಭಾರತೀಯ ಗಡಿ ಭದ್ರತಾ ಪಡೆ ಸೇರಿ ದೇಶ ರಕ್ಷಣೆಯಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದ ಕೊಡಗು ಜಿಲ್ಲೆಯ ನಾಕೂರು ಗ್ರಾಮದ ಬಡ ಕುಟುಂಬದ ಯುವಕ ಪಿ.ಡಿ. ವರ್ಗೀಸ್ ರಾಜಸ್ತಾನದ ಗಂಗಾರಾಮ್ ನಗರ ಪ್ರದೇಶದಲ್ಲಿ ಅಂತರಾಷ್ಟ್ರೀಯ ಗಡಿ ನಿಯಂತ್ರಣ ರೇಖೆ ಕಾವಲಿನ ಕರ್ತವ್ಯ ನಿರ್ವಹಿಸುತ್ತಿದ್ದರು. ಅಗಸ್ಟ್ 6 ರಂದು ಕರ್ತವ್ಯದಲ್ಲಿದ್ದ ಸಂದರ್ಭ ಯೋಧ ವರ್ಗೀಸ್ ರಾತ್ರಿ 9 ಗಂಟೆಯ ಸಮಯದಲ್ಲಿ ಗುಂಡೇಟಿಗೆ ಬಲಿಯಾಗಿದ್ದರು.

ರಾಜಸ್ತಾನದಿಂದ ಬೆಂಗಳೂರಿಗೆ ವಿಮಾನದಲ್ಲಿ ಪಿ.ಡಿ.ವರ್ಗೀಸ್ ಅವರ ಪಾರ್ಥಿವ ಶರೀರವನ್ನು ತರಲಾಯಿತು. ಬೆಂಗಳೂರಿನಿಂದ ಹೊರಟ 16 ಮಂದಿ ಬಿಎಸ್‌ಎಫ್ ಯೋಧರನ್ನೊಳಗೊಂಡ ಸೇನಾ ವಾಹನ ಕುಶಾಲನಗರದ ಕೊಪ್ಪ ಗೇಟ್ ಬಳಿ ಮುಂಜಾನೆ 3-15 ಕ್ಕೆ ಕೊಡಗನ್ನು ಪ್ರವೇಶಿಸುತ್ತಲೇ ಕೊಡಗು ಜಿಲ್ಲಾ ಕ್ರೈಸ್ತ ಸೇವಾ ಸಂಘದ ಅಧ್ಯಕ್ಷ ಕೆ.ಟಿ.ಬೇಬಿ ಮ್ಯಾಥ್ಯು, ಡಿವೈಎಸ್‌ಪಿ ಎಂ. ಎಂ. ಮುಕ್ತಾರ್ ಕುಶಾಲನಗರ ಠಾಣಾಧಿಕಾರಿ ಎ. ಬಿ. ದೇವಯ್ಯ ಮಡಿಕೇರಿ ಹಾಗೂ ಕುಶಾಲನಗರ ಕ್ರೈಸ್ತ ಸೇವಾ ಸಂಘದ ಸ್ಥಾನೀಯ ಅಧ್ಯಕ್ಷರುಗಳಾದ ಕೆ. ಜಿ. ಪೀಟರ್, ಎನ್.ಟಿ. ಜೋಸೆಫ್, ಲ್ಯಾನ್ಸಿ ಫರ್ನಾಂಡಿಸ್ ಅವರುಗಳು ಪುಷ್ಪಗುಚ್ಛವಿರಿಸಿ ಬರಮಾಡಿಕೊಂಡರು. ಬಳಿಕ ಅಲ್ಲಿಂದ ವಾಹನವು ನಾಕೂರಿಗೆ ಬೆಳಗಿನ ಜಾವ 3-45 ಕ್ಕೆ ತಲುಪಿತು.

ಹುಟ್ಟೂರಿನ ಯೋಧ ವರ್ಗೀಸ್ ಅವರ ಪಾರ್ಥಿವ ಶರೀರ ಗ್ರಾಮ ತಲುಪಿದ ಸುದ್ದಿ ಹರಡುತ್ತಿದ್ದಂತೆಯೇ ನೂರಾರು ಸಂಖ್ಯೆಯಲ್ಲಿ ಸುತ್ತ ಮುತ್ತಲಿನ ಗ್ರಾಮಗಳ ನಾಗರೀಕರು, ಬಂಧುಮಿತ್ರರು, ಸ್ನೇಹಿತರು ಹಾಗೂ ಯುವಕರ ತಂಡ ವರ್ಗೀಸ್ ಅವನ ಮನೆಗೆ ಬಂದು ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆಯಿತು. ವರ್ಗೀಸ್ ಅವರನ್ನು ಹೊತ್ತ ಸೇನಾ ವಾಹನ ಗ್ರಾಮ ಪ್ರವೇಶಿಸುತ್ತಲೇ ಕಳೆದ ಮೂರು ದಿನಗಳಿಂದ ಮಗನ ಸಾವಿನ ಸುದ್ದಿ ಕೇಳಿ ಶೋಕ ಸಾಗರದಲ್ಲಿ ಮುಳುಗಿದ ವೃದ್ಧ ತಂದೆ ಕಾರ್ಮಿಕ ದೇವಸಿಕುಟ್ಟಿ, ಹಾಗೂ ತಾಯಿ ಅನ್ನಮ್ಮ ಹಾಗೂ ಸಹೋದರಿ ಶೈನಿ ಅವರುಗಳ ರೋಧನ ಕಲ್ಲು ಹೃದಯವನ್ನು ಕರಗಿಸುವಂತಿತ್ತು. ಬೆಳಗಿನಿಂದಲೇ ಅಪಾರ ಸಂಖ್ಯೆಯಲ್ಲಿ ನಾಗರಿಕರು ವರ್ಗೀಸ್ ಅವರ ಪಾರ್ಥಿವ ಶರೀರದ ಅಂತಿಮ ದರ್ಶನ ಪಡೆದರು.

ಆ ಬಳಿಕ 10-45ಕ್ಕೆ ಪಾರ್ಥಿವ ಶರೀರವನ್ನು ಸೇನಾ ವಾಹನದಲ್ಲಿ ಸುಂಟಿಕೊಪ್ಪದತ್ತ ತರಲಾಯಿತು. ಸುಂಟಿಕೊಪ್ಪ ಪ್ರವೇಶಿಸುತ್ತಲೇ ಸ್ಥಳೀಯ ವಾಹನ ಚಾಲಕರ ಸಂಘ, ಆಟೋಚಾಲಕರ ಸಂಘದ ಪದಾಧಿಕಾರಿಗಳು, ಹೂಗುಚ್ಛ ಇರಿಸಿ ಅಂತಿಮ ನಮನ ಸಲ್ಲಿಸಿದರು. ಬಳಿಕ ಸ್ಥಳೀಯ ಚೇಂಬರ್ ಆಫ್ ಕಾಮರ್ಸ್ ಪರವಾಗಿ ಅಧ್ಯಕ್ಷ ಎ. ಆರ್. ಅಚ್ಚಮಯ್ಯ ಪುಷ್ಪಗುಚ್ಛವಿರಿಸಿ ಅಗಲಿದ ಯೋಧನಿಗೆ ಗೌರವ ಸೂಚಿಸಿದರು. ಅನಂತರ ಪಾರ್ಥಿವ ಶರೀರವನ್ನು ಸಾರ್ವಜನಿಕ ದರ್ಶನಕ್ಕಾಗಿ ಸುಂಟಿಕೊಪ್ಪದ ಸಂತ ಅಂತೋಣಿ ಚರ್ಚ್‌ನಲ್ಲಿ ಸುಮಾರು 35 ನಿಮಿಷಗಳ ಕಾಲ ಇರಿಸಲಾಗಿತ್ತು.

ಈ ಸಂದರ್ಭ ಜಿಲ್ಲಾಧಿಕಾರಿ ಶ್ರೀಕಾಂತ್ ವಾಲಗದ್, ಜಿಲ್ಲಾ ಪೊಲೀಸ್ ಉನ್ನತಾಧಿಕಾರಿ ದೇವಜ್ಯೋತಿರೇ, ಸೋಮವಾರಪೇಟೆ ಕ್ಷೇತ್ರದ ಶಾಸಕ ಎಂ.ಪಿ. ಅಪ್ಪಚ್ಚು ರಂಜನ್, ಮಾಜಿ ಸಚಿವ ಬಿ.ಎ. ಜೀವಿಜಯ, ಜಿ. ಪಂ. ಮಾಜಿ ಅಧ್ಯಕ್ಷ ಹೆಚ್.ಬಿ. ಜಯಮ್ಮ, ಸದಸ್ಯ ವಿ.ಪಿ. ಶಶಿಧರ್, ತಾ. ಪಂ. ಸದಸ್ಯ ಜೆರ್ಮಿ ಡಿಸೋಜ, ಕೊಡವ ಅಕಾಡೆಮಿ ಪರವಾಗಿ ಸದಸ್ಯ ಎಂ. ಎ. ವಸಂತ, ಸುಂಟಿಕೊಪ್ಪ ಗ್ರಾ. ಪಂ. ಅಧ್ಯಕ್ಷೆ ಮೀನಾಕ್ಷಿ, ಗೌಡ ಜನಾಂಗದ ಪರವಾಗಿ ಚೆಂದ್ರಗಳ್ ಈರಪ್ಪ ಮೊದಲಾದವರು ಪಾರ್ಥಿವ ಶರೀರಕ್ಕೆ ಪುಷ್ಪಗುಚ್ಛ ಇರಿಸಿ ಗೌರವ ಸಲ್ಲಿಸಿದರು. ಇದೇ ಸಂದರ್ಭ ಪಟ್ಟಣದ ನೂರಾರು ಮಂದಿ ನಾಗರಿಕರು ಅಗಲಿದ ಯೋಧನ ಅಂತಿಮ ದರ್ಶನ ಪಡೆದರು. ರಾಷ್ಟ್ರ ರಕ್ಷಣೆಗಾಗಿ ಪ್ರಾಣಾರ್ಪಣೆಗೈದ ಯೋಧನ ಪಾರ್ಥಿವ ಶರೀರದ ವೀಕ್ಷಣೆಗಾಗಿ ಸುಂಟಿಕೊಪ್ಪದ ಎಲ್ಲಾ ಶಾಲಾ ವಿದ್ಯಾರ್ಥಿಗಳು ಬಂದಿದ್ದರು.

ಅನಂತರ ಸಮೀಪದ 7 ನೇ ಹೊಸಕೋಟೆಗೆ ವರ್ಗೀಸ್ ಅವರ ಪಾರ್ಥಿವ ಶರೀರವನ್ನು ಹೊತ್ತ ವಾಹನ ಅಲ್ಲಿನ ಸಂತ ಸೆಬಾಸ್ಟಿನ್ ಚರ್ಚ್‌ನಲ್ಲಿ ಸುಮಾರು ಒಂದು ಗಂಟೆಗೂ ಅಧಿಕ ಸಮಯ ಪಾರ್ಥಿವ ಶರೀರವನ್ನು ಇರಿಸಿ ಧಾರ್ಮಿಕ ವಿಧಿ ವಿಧಾನಗಳನ್ನು ನೆರವೇರಿಸಲಾಯಿತು. ಇಲ್ಲಿಯೂ ಎಲ್ಲ ಧರ್ಮಗಳ ನೂರಾರು ಮಂದಿ ನಾಗರಿಕರು ಚರ್ಚ್‌ಗೆ ಆಗಮಿಸಿ ಅಗಲಿದ ಯೋಧನ ಅಂತಿಮ ದರ್ಶನ ಪಡೆದರು. ಈ ಸಂದರ್ಭ ಧರ್ಮಗುರುಗಳಾದ ಥಾಮಸ್ ಹಾಗೂ ಸೆಬಾಸ್ಟಿನ್‌ಅವರುಗಳು ಬೈಬಲ್ ವಾಚನದೊಂದಿಗೆ ಅಗಲಿದ ಯೋಧನಿಗೆ ಗೌರವ ಅರ್ಪಿಸಿದರು.

ಬಳಿಕ ಸಮೀಪದಲ್ಲಿಯೇ ಇರುವ ಸ್ಮಶಾನಕ್ಕೆ ಪಾರ್ಥಿವ ಶರೀರವನ್ನು ಸಹೋದ್ಯೋಗಿ ಬಿಎಸ್‌ಎಫ್ ಯೋಧರು ಹೊತ್ತು ಕೊಂಡೊಯ್ದರು. ಅನಂತರ ಗಡಿ ಭದ್ರತಾಪಡೆಯ ಹದಿನಾರು ಮಂದಿ ಯೋಧರು ಕುಶಲ ತೋಪು ಸಿಡಿಸುವ ಮೂಲಕ ಅಗಲಿದ

ಗಾದೆಗಳು : ಶಾಸ್ತ್ರ ಹೇಳೋಕೆ ಬದನೆ ಕಾಯಿ ತಿನ್ನೋಕೆ

ಯೋಧನಿಗೆ ಗೌರವ ಸಲ್ಲಿಸಿದರು. ಬಳಿಕ ಜಿಲ್ಲಾ ಸಶಸ್ತ್ರ ಪಡೆಯ 6 ಮಂದಿ ಪೋಲಿಸರು ಜಿಲ್ಲಾಡಳಿತದ ಪರವಾಗಿ ಕುಶಲ ತೋಪು ಸಿಡಿಸಿ ಅಂತಿಮ ಗೌರವ ಅರ್ಪಿಸಿದರು. ಈ ಸಂದರ್ಭ ಸೋಮವಾರಪೇಟೆ ತಹಶೀಲ್ದಾರ್ ಅನಿಲ್‌ವಾಸ್, ವೃತ್ತ ನಿರೀಕ್ಷಕ ರಾಂ ದಾಸ್, ತಾ. ಪಂ. ಸದಸ್ಯ ಜೆರ್ಮಿ ಡಿಸೋಜ, ಕ್ರೈಸ್ತ ಸೇವಾ ಸಂಘದ ಅಧ್ಯಕ್ಷ ಬೇಬಿ ಮ್ಯಾಥ್ಯು ಮೊದಲಾದವರು ಪಾರ್ಥಿವ ಶರೀರಕ್ಕೆ ಹೂಗುಚ್ಛವಿರಿಸಿ ಅಂತಿಮ ದರ್ಶನ ಪಡೆದರು. ಆ ಬಳಿಕ ಕ್ರೈಸ್ತ ಧಾರ್ಮಿಕ ಪದ್ಧತಿಯನ್ವಯ ಅಂತ್ಯಕ್ರಿಯೆ ಮಧ್ಯಾಹ್ನ 1.15ರ ಸುಮಾರಿಗೆ ನೆರವೇರಿತು. ಬೆಳಗಿನಿಂದಲೂ ಸೇನಾ ವಾಹನದೊಂದಿಗಿದ್ದ ಸುಂಟಿಕೊಪ್ಪ ಠಾಣಾಧಿಕಾರಿ ಟಿ.ಜೆ. ಗಣೇಶ್‌ಹಾಗೂ ಸಿಬ್ಬಂದಿ ಭದ್ರತಾ ಉಸ್ತುವಾರಿ ವಹಿಸಿದ್ದರು.

ಬೆನ್ನಿಗೆ ಗುಂಡು, ಎದೆ ಸೀಳಿದ ಪಾಕ್ ಬುಲ್ಲೆಟ್.

ಯೋಧ ಪಿ.ಡಿ. ವರ್ಗೀಸ್ ಅಗಸ್ಟ್ 6 ರ ರಾತ್ರಿ 9 ಗಂಟೆ ಹೊತ್ತಿನಲ್ಲಿ ರಾಜಾಸ್ತಾನದ ಗಂಗಾರಾಮ್ ಪ್ರದೇಶದಲ್ಲಿ ಅಂತರ ರಾಷ್ಟ್ರೀಯ ಗಡಿ ನಿಯಂತ್ರಣ ರೇಖೆಯ ಸಮೀಪ ಪಟ್ಟಾಂ ಹಾಕಿದ 105 ನೇ ಕ್ಯಾಂಪ್‌ನಲ್ಲಿ ಕರ್ತವ್ಯ ನಿರತರಾಗಿದ್ದ ಸಂದರ್ಭ ನಡೆದ ಗುಂಡಿನ ಚಕಮಕಿಯಲ್ಲಿ ಪಾಕ್‌ನವರು ಹಾರಿಸಿದ ಗುಂಡು ಬೆನ್ನಿಗೆ ತಗಲಿ ಎದೆ ಸೀಳಿ ಹೊರ ಬಂತು. ಪಿ.ಡಿ. ವರ್ಗೀಸ್ ರಾಷ್ಟ್ರದ ರಕ್ಷಣೆಯಲ್ಲಿ ತೊಡಗಿ ತನ್ನನ್ನುದೇಶಕ್ಕಾಗಿ ಅರ್ಪಿಸಿದ ಕೊಡಗಿನ ವೀರ ಕಲಿಗಳ ಜೊತೆ ಐಕ್ಯನಾಗಿ ಭಾರತಾಂಬೆಯ ಮಡಿಲಲ್ಲಿ ಕೀರ್ತಿ ಶೇಷನಾದನು.

ನಾಕೂರು ಗ್ರಾಮದ ದೇವಸಿ ಕುಟ್ಟಿ ಮತ್ತು ಅನ್ನಮ್ಮ ದಂಪತಿಗಳ ಏಕ ಮಾತ್ರ ಪುತ್ರ ವರ್ಗೀಸ್. ಸಹೋದರಿ ಶೈನಿ ಕಳೆದ ಆರು ತಿಂಗಳ ಹಿಂದೆಯಷ್ಟೆ ವಿವಾಹವಾಗಿದ್ದಳು. ಕಳೆದ 11 ವರ್ಷಗಳಿಂದ ಗಡಿರಕ್ಷಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವರ್ಗೀಸ್ 30 ವರ್ಷದ ಅವಿವಾಹಿತ. - ಜೈಹಿಂದ್

-ಸಂಗಾತಿ

ಬೀಳ್ಕೊಡುಗೆ ಸಮಾರಂಭ

ಸಂಪಾಜೆಯ ಪದವಿಪೂರ್ವ ವಿದ್ಯಾಲಯದಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ 32 ವರ್ಷಗಳ ಸೇವೆ ಸಲ್ಲಿಸಿದ್ದ ಗೋಪಾಲ ಕೇಪಡ್ಕ ಅವರನ್ನು ಎಸ್.ಡಿ.ಎಂ.ಸಿ. ವತಿಯಿಂದ ಇತ್ತೀಚೆಗೆ ಬೀಳ್ಕೊಡಲಾಯಿತು. ಸಭಾಧ್ಯಕ್ಷತೆಯನ್ನು ಆಡಳಿತ ಮಂಡಳಿ ಅಧ್ಯಕ್ಷ ಎನ್. ಎಸ್.ದೇವಿ ಪ್ರಸಾದ್ ವಹಿಸಿದ್ದರು.

ಸಭೆಯಲ್ಲಿಸಂಚಾಲಕರಾದ ಕೆ. ಎಂ. ಇಬ್ರಾಹಿಂ, ಸದಸ್ಯರುಗಳಾದ ಎ. ಸಿ. ಲಕ್ಷ್ಮಣ, ನಾರಾಯಣಭಟ್, ವೈ. ಕೆ.ಮಾಲತಿ, ಉಪನ್ಯಾಸಕರುಗಳಾದ ಕೆ. ಲಿಂಗಪ್ಪ ಗೌಡ, ಎಂ. ಶಂಕರನಾರಾಯಣಭಟ್, ವಿದ್ಯಾರ್ಥಿಗಳಾದ ಕಿರಣ್ ಹಾಗೂ ದಿವ್ಯ ಮಾತನಾಡಿದರು. ಅಧ್ಯಾಪಕ ಕೆ. ಆರ್. ವಿಠಲ್ ಸ್ವಾಗತಿಸಿದರೆ, ಎ. ಐತಪ್ಪ ಕಾರ್ಯಕ್ರಮ ನಿರೂಪಿಸಿದರು. ಬಿ. ಶಿವರಾಮ್‌ಭಟ್ ವಂದಿಸಿದರು.

-ಸಂಗಾತಿ.

ನೆಲ್ಲಿಕಾಯಿ

ಕಿರು ನೆಲ್ಲಿಕಾಯಿ ಉಪ್ಪು ಸಹಿತ ತಿನ್ನುವುದರಿಂದ ತಲೆ ಸುತ್ತುವಿಕೆ, ವಾಕರಿಕೆ ಅಜೀರ್ಣ ನಿವಾರಣೆ ಆಗುವುದು.

ಬೆಟ್ಟದ ನೆಲ್ಲಿಕಾಯಿಯ ರಸವನ್ನು ಜೇನು ತುಪ್ಪದೊಂದಿಗೆ ಪ್ರತಿದಿನ ಪ್ರಾತಃಕಾಲ ಸೇವಿಸುವುದರಿಂದ 'ಸಿ' ಅನ್ನಾಂಗದ ಕೊರತೆಯಿಂದ ಉಂಟಾಗುವ ಎಲ್ಲಾರೋಗಗಳು ನಿವಾರಣೆ ಯಾಗುವವು.

ನೆಲ್ಲಿಕಾಯಿ ಎಲೆಗಳ ಕಷಾಯ ತಯಾರಿಸಿ ಕೊಂಡು ಬಾಯಿ ಮುಕ್ಕಳಿಸುತ್ತಿದ್ದರೆ ಹೊಟ್ಟೆ ಹುಣ್ಣು ದೂರ ವಾಗುವುದು.

ನೆಲ್ಲಿಕಾಯಿ ಎಲೆಗಳ ಕಷಾಯ ತಯಾರಿಸಿಕೊಂಡು ಬಾಯಿ ಮುಕ್ಕಳಿಸುತ್ತಿದ್ದರೆ ಹೊಟ್ಟೆ ಹುಣ್ಣು ದೂರ ವಾಗುವುದು.

ನೆಲ್ಲಿಕಾಯಿ ರಸವನ್ನು ಸಕ್ಕರೆಯೊಂದಿಗೆ ಸೇವಿಸು ವುದರಿಂದ ಪಿತ್ತ ಹೊಟ್ಟೆನೋವು ಪರಿಹಾರವಾಗುವುದು.

ಒಂದು ಚಮಚ ಬೆಟ್ಟದ ನೆಲ್ಲಿಕಾಯಿ ಪುಡಿಯನ್ನು ಮಜ್ಜಿಗೆಯಲ್ಲಿ ಸೇವಿಸಿದರೆ ಅಂಗೈ ಅಂಗಾಲು ಉರಿ ಮತ್ತು ಆಸನಾಗ್ರದಲ್ಲಿ ಆಗುವ ಉರಿ ಸಂಪೂರ್ಣವಾಗಿ ನಿಂತು ಹೋಗುವದು.

ನೆಲ್ಲಿಕಾಯಿಯನ್ನು ನಿತ್ಯವೂ ಬಳಸುವುದರಿಂದ ಕೂದಲು ಉದುರುವಿಕೆ, ಕೂದಲು ನೆರೆಯುವಿಕೆ ಮತ್ತು ಕ್ಷಯ ಹಾಗೂ ಉಬ್ಬಸ ರೋಗಗಳಲ್ಲಿ ಗುಣ ಕಂಡುಬರುವುದು.

ನೆಲ್ಲಿಕಾಯಿ ರಸವನ್ನು ಅಂಗೈಗೆ ಹಚ್ಚಿಹಾಗೇ ಕೆಲವು ಘಂಟೆಗಳು ಬಿಟ್ಟರೆ ಅತಿಯಾಗಿ ಬೆವರುವಿಕೆಯು ಸ್ಥಗಿತ ಗೊಳ್ಳುವದು.

ನೆಲ್ಲಿಕಾಯಿ ರಸವನ್ನು ನೀರಿನಲ್ಲಿ ಕದಡಿ ಶೋಧಿಸಿ ಸಕ್ಕರೆ ಸೇರಿಸಿ ಪಾನಕ ಮಾಡಿಕೊಂಡು ಕುಡಿದರೆ ಮೂತ್ರದೊಂದಿಗೆ ರಕ್ತ ಹೋಗುತ್ತಿದ್ದರೆ ಬಹು ಬೇಗನೆ ಗುಣವಾಗುತ್ತದೆ.

ನೆಲ್ಲಿ ಚಟ್ಟನ್ನು ಹಲವು ಗಂಟೆಗಳ ಕಾಲ ಬಿಸಿ ನೀರಿನಲ್ಲಿ ನೆನೆಹಾಕಿ ನಂತರ ಚೆನ್ನಾಗಿ ಕಿವುಚಿ ಶೋಧಿಸಿ, ಅದಕ್ಕೆ ಸಕ್ಕರೆ ಬೆರೆಸಿ ಸೇವಿಸುವುದರಿಂದ ಆಮಶಂಕೆ ತಟ್ಟನೆ ನಿಲ್ಲುವುದು.

ಸಂಗ್ರಹ -ಸಂಗಾತಿ

ಚಾಂಪಿಯನ್ಸ್ ಟ್ರೋಫಿ ಹಾಕಿ ಪಂದ್ಯಾಟಕ್ಕೆ ಸುಬ್ಬಯ್ಯ, ಅರ್ಜುನ್, ವಿನಯ್ ಆಯ್ಕೆ

ಬಾರ್ಸಿಲೋನಾದಲ್ಲಿ ನಡೆಯಲಿರುವ ಪ್ರತಿಷ್ಠಿತ ಚಾಂಪಿಯನ್ಸ್‌ಟ್ರೋಫಿ ಹಾಕಿ ಪಂದ್ಯಾಟಕ್ಕೆ ಭಾರತ ತಂಡವನ್ನು ಪ್ರಕಟಿಸಲಾಗಿದ್ದು, ಕೊಡಗಿನ ಮೂವರು ಸ್ಥಾನ ಪಡೆದಿದ್ದಾರೆ. ಅಂತರಾಷ್ಟ್ರೀಯ ಗೋಲ್ ಕೀಪರ್ ಆಗಿದ್ದ ಜಿಲ್ಲೆಯ ಅಂಜಪರವಂಡ ಬಿ. ಸುಬ್ಬಯ್ಯ ಅವರು ತಂಡ ಗೋಲ್ ಕೀಪರ್ ತರಬೇತುದಾರರಾಗಿ ಆಯ್ಕೆಯಾಗಿದ್ದಾರೆ. ತಂಡದ 18 ಮಂದಿ ಆಟಗಾರರ ಪಟ್ಟಿಯಲ್ಲಿ ಮಡಿಕೇರಿಯ ವಿ.ಎಸ್. ವಿನಯ ಸ್ಥಾನ ಪಡೆದಿದ್ದರೆ, ಸ್ಟ್ಯಾಂಡ್‌ಬೈ ಆಟಗಾರನಾಗಿ ಏಕಲವ್ಯ ಪ್ರಶಸ್ತಿ ವಿಜೇತ ಸೋಮವಾರ ಪೇಟೆಯ ಅರ್ಜುನ್ ಹಾಲಪ್ಪ ಅವರುಗಳು ಆಯ್ಕೆಯಾಗಿದ್ದಾರೆ. ತಂಡದ ಸಂಭಾವ್ಯ ಆಟಗಾರರ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದ ಕರ್ನಾಟಕದ ಮತ್ತೋರ್ವ ಆಟಗಾರ ಸಂದೀಪ್ ಮೈಕೆಲ್ ಅನಾರೋಗ್ಯ ನಿಮಿತ್ತ ತಂಡದಿಂದ ಹೊರಗುಳಿದಿದ್ದಾರೆ.

ನಿದ್ದೆ ಮಾಡೋಕೆ ಲಂಚ ತಿನ್ನೋಕೆ

ಗೌಡ ಜನಾಂಗದ ಮೀಸಲಾತಿ

ಗೌಡ ಜನಾಂಗಕ್ಕೆ ಮೀಸಲಾತಿ ರಾಷ್ಟ್ರ ಮಟ್ಟದ ವಾರ್ತೆಗಳಲ್ಲಿ ಪ್ರಚುರ ಪಡೆದ ಹಿನ್ನಲೆಯಲ್ಲಿ ಅದನ್ನು ಅನೇಕರು ಅನೇಕ ರೀತಿಯಲ್ಲಿ ವಿಶ್ಲೇಷಿಸಿ, ಇದೀಗ ವಿವಾದಕ್ಕೆಡೆಯಾಗುವ ಸಾಧ್ಯತೆ ನಿಚ್ಚಳವಾಗಿದೆ. ವಾರ್ತೆಯು ದೆಹಲಿ ಮೂಲದಿಂದ ಪ್ರಕಟವಾಗುತ್ತಿದ್ದಂತೆ ದ.ಕ. ಜಿಲ್ಲೆಯ ಕೆಲವು ಗೌಡ ಸಂಘಟನೆಗಳು ಅರೆಭಾಷೆ ಮತ್ತು ತುಳು ಭಾಷಿಕರನ್ನು ಒಕ್ಕಲಿಗರ ಪಟ್ಟಿಯಿಂದ ಪ್ರತ್ಯೇಕಿಸಲಾಗಿದೆ. ಸಾಂಸ್ಕೃತಿಕ, ಆರ್ಥಿಕ ಮತ್ತು ರಾಜಕೀಯವಾಗಿ ಹೆಚ್ಚಿನ ಬಲ ಬರಲಿದೆ ಎಂಬರ್ಥದಲ್ಲಿ ಹೇಳಿಕೆ ನೀಡಿ ಸ್ವಾಗತಿಸಿದರು. ದ. ಕ. ಮತ್ತು ಕೊಡಗು ಗೌಡ ಸಮಾಜದ ಅಧ್ಯಕ್ಷರು ಇದನ್ನು ಸ್ವಾಗತಿಸಿ ಕೆಲವರನ್ನು ಅಭಿನಂದಿಸಿದರು. ಬೆಂಗಳೂರಿನಲ್ಲಿ ಕೇಂದ್ರ ಸಚಿವರಾಗಿದ್ದ ಸಂಸದರನ್ನು ಖಡ್ಗ ನೀಡಿ ಸನ್ಮಾನಿಸಲಾಯಿತು. ಇದೀಗ ಮಾಜಿ ಮುಖ್ಯ ಮಂತ್ರಿಗಳು ಗೌಡರನ್ನು ಹಿಂದುಳಿದ ಪಟ್ಟಿಗೆ ಸೇರಿಸಿದ್ದು, ತನ್ನ ಅವಧಿಯಲ್ಲಿ ಎಂದು ಹೇಳಿಕೊಂಡಿದ್ದಾರೆ. ಗೌಡ ಜನಾಂಗ ಅದರಲ್ಲೂ ದ. ಕ. ಮತ್ತು ಕೊಡಗಿನಲ್ಲಿರುವವರು, ಶಾಲೆ-ಕಾಲೇಜುಗಳ ಪ್ರವೇಶಾವಕಾಶ ಹಾಗೂ ಉದ್ಯೋಗಾವಕಾಶ, ರಾಜಕೀಯ ಮೀಸಲಾತಿಗಾಗಿ ಕನಸು ಕಂಗಳಿಂದ ನಿರೀಕ್ಷಿಸುವಂತಾಗಿತ್ತು. ಆದರೆ, ವಸ್ತುಷಃ ಇವೆಲ್ಲವೂ ಕಪೋಲ ಕಲ್ಪಿತ, ಅತಿ ರಂಜಿತ ಮತ್ತು ನಿರಾಧಾರವಾಗಿದ್ದು, ಜೂನ್ 20 ರಂದು ಪ್ರಕಟಗೊಂಡಿರುವ ಕೇಂದ್ರದ ಗಜೆಟ್‌ನಲ್ಲಿ ಇಂತಹ ಪ್ರಸ್ತಾಪವೇ ಇಲ್ಲವೆಂಬುದು ಸ್ಪಷ್ಟವಾಗಿದೆ.

ಹಾವನೂರು ವರದಿಯ ಬಳಿಕ ರಾಜ್ಯ ಉಚ್ಚ ನ್ಯಾಯಾಲಯದಿಂದ ತೀರ್ಪಿನ ಆಧಾರದಲ್ಲಿ ಮಾಡಿದ ಆದೇಶದಲ್ಲಿ (Go. No. SWL 123 BCAB-ದಿನಾಂಕ 1.5.79) ಸಂವಿಧಾನದ 15(4) ಪರಿಚ್ಛೇದದಲ್ಲಿ ಇತರ ಹಿಂದುಳಿದ ಜಾತಿಗಳ ಪಟ್ಟಿಯಲ್ಲಿ ಒಕ್ಕಲಿಗರ ಜಾತಿಯನ್ನು ಸೇರಿಸಿ (Gowda) ಗೌಡ ಜಾತಿಯನ್ನು ಉಪಜಾತಿಯೆಂದು ನಮೂದಿಸಲಾಗಿತ್ತು. ಆದರೆ, ಅದೇ ಆದೇಶದಲ್ಲಿ 16(4) ಪರಿಚ್ಛೇದದಲ್ಲಿ ಒಕ್ಕಲಿಗರ ಪಟ್ಟಿಯಲ್ಲಿ (Gouda) ಗೌಡ ಎಂದು ನಮೂದಿಸಲಾಗಿತ್ತು. ಇಂಗ್ಲೀಷ್‌ನಲ್ಲಿ ಕಾಗುಣಿತ ಬೇರೆ ಬೇರೆಯಾದರೂ ಕನ್ನಡದಲ್ಲಿ "ಗೌಡ" ಎಂಬ ಉಲ್ಲೇಖ ವಿದ್ದುದರಿಂದ ಸಮಸ್ಯೆ ಉದ್ಭವಿಸಲಿಲ್ಲ. ಮಾನ್ಯ ವೀರಪ್ಪ ಮೊಯಿಲಿಯವರ ಕಾಲದಲ್ಲಿ (1993) ಹಿಂದುಳಿದ ಪಟ್ಟಿಯನ್ನು ಪರಿಷ್ಕರಿಸಲಾಯಿತು ಮತ್ತು ವೃತ್ತಿ ಶಿಕ್ಷಣ ಪ್ರವೇಶಕ್ಕೆ ಮತ್ತು ನಾಗರಿಕ ಸೇವೆಯ ಉದ್ಯೋಗಕ್ಕೆ ಮತ್ತು ಆಯ್ಕೆಗೂ ವಿಸ್ತರಿಸಲ್ಪಟ್ಟಿತು. ಇದರಲ್ಲಿ Gowda-Gouda ಎರಡನ್ನೂ ಕೈ ಬಿಡಲಾಯಿತು. ಕನ್ನಡದ "ಗೌಡ" ಕಣ್ಮರೆಯಾಯಿತು. ಇದು ಸಮಸ್ಯೆಗೆ ಮೂಲವಾಯಿತು. ಪರಿಣಾಮವಾಗಿ ಈ ಕಾಗುಣಿತ (Gowda) ಬಳಸುವ ದ. ಕ. ಮತ್ತು ಕೊಡಗಿನ ಗೌಡರಿಗೆ ಜಾತಿ ದೃಢೀಕರಣ ಸಿಗದೆ ಸಮಸ್ಯೆಯಾಗತೊಡಗಿತು. ಅದಕ್ಕಾಗಿ ಪ್ರಾರಂಭವಾದ ಪ್ರಯತ್ನ ಒಂದು ದಶಕದ ಬಳಿಕ ಇದೀಗ ಯಶ ಕಂಡಿದೆ. ಈ ಹಿಂದೆ ಸರ್ವೋಚ್ಚ ನ್ಯಾಯಾಲಯದ ತೀರ್ಪಿನ ಮೇರೆಗೆ ಕೇಂದ್ರ ಸರಕಾರ ಕೈಗೊಂಡ ನಿರ್ಣಯದಲ್ಲಿ ಶೇ. 27 ರ ಮೀಸಲಾತಿಯನ್ನು ಇತರ ಹಿಂದುಳಿದ ಜಾತಿಗಳಿಗೆ ನೀಡಿತು. ಈ ಬಗ್ಗೆ ಆರ್. ಎನ್. ಪ್ರಸಾದ್ ಆಯೋಗದ 'ಕೆನೆ ಪದರ' (Ceamy Layer) ಎಂಬ ಒಂದು ಶರ್ತವನ್ನು ಸೇರಿಸಿತು. ಕೇಂದ್ರದ ಮಂಡಲ ಆಯೋಗ ಮತ್ತು ರಾಜ್ಯದ ಹಿಂದುಳಿದ ವರ್ಗಗಳ ಆಯೋಗದ ಎರಡೂ ಪಟ್ಟಿಗಳಲ್ಲಿರುವ ಜಾತಿ ವರ್ಗಗಳ ಸಾಮಾನ್ಯಹೆಸರನ್ನು ಇತರ ಹಿಂದುಳಿದ ಜಾತಿ ಪಟ್ಟಿಗೆ ಸೇರಿಸಲಾಯಿತು. ಕರ್ನಾಟಕದ 94 ರ ಪಟ್ಟಿಯನ್ವಯ ಕರ್ನಾಟಕಕ್ಕೆ ಸಂಬಂಧಿಸಿದಂತೆ 156 ಕ್ರಮ ಸಂಖ್ಯೆಯಲ್ಲಿ ಒಕ್ಕಲಿಗ-ವಕ್ಕಲಿಗ ಸೇರಿದಂತೆ 20 ಉಪಜಾತಿ ಹೆಸರುಗಳ ಪೈಕಿ ಒಕ್ಕಲಿಗ, ವಕ್ಕಲಿಗ, ಸರ್ಪ ಒಕ್ಕಲಿಗ ಮಾತ್ರ ಸೇರಿ ಉಳಿದವು ಬಿಟ್ಟು ಹೋದವು.

ಈ ಬಗ್ಗೆ ಕಾನೂನು ತಜ್ಞರಾದ ಕೆ. ಆರ್. ಚಾಮಯ್ಯ ನವರು ವಿಶೇಷವಾಗಿ ತಯಾರಿಸಿದ ಮನವಿ ಮತ್ತು ಅವರೊಂದಿಗೆ ಸಹಕರಿಸಿದ ಓಂಪ್ರಕಾಶ್ ಅಪಾರ ಶ್ರಮ ವಹಿಸಿ ರಾಜ್ಯದ ಹಿಂದುಳಿದ ಪಟ್ಟಿಯಲ್ಲಿ ಗೌಡ/ಗೌಡ(Gowda/Gouda) ಸೇರ್ಪಡೆಗೊಳಿಸಲು ಶಕ್ತರಾದರು. ಇದನ್ನು ಏಪ್ರಿಲ್ 2002 ರ ಗೆಜೆಟ್‌ನಲ್ಲಿ ಪ್ರಕಟಿಸಲಾಯಿತು. ಈ ಮನವಿಗೆ ಪುತ್ತೂರು ಶಾಸಕರಾದ ಡಿ.ವಿ. ಸದಾನಂದ ಗೌಡ, ದೇವಿ ಪ್ರಸಾದ್‌ಸಂಪಾಜೆ, ಪಡ್ಡಂಬೈಲು ಮುದ್ದಪ್ಪ ಗೌಡ ಮಂಗಳೂರಿನ ಲೋಕಯ್ಯ ಗೌಡ, ರಾಮಚಂದ್ರ ಗೌಡ ಮುಂತಾಗಿ ನಾವು ಸಹಭಾಗಿಗಳಾಗಿದ್ದೆವು. ಇದೇ ಪ್ರಯತ್ನವನ್ನು ಕೇಂದ್ರದ ಆಯೋಗದ ಮುಂದೆಯೂ ಮಂಡಿಸಿದಾಗ ರಾಜ್ಯದ ಪರಿಷ್ಕೃತ ಪಟ್ಟಿಯನ್ನು ಕೇಂದ್ರ ಆಯೋಗವೂ ಮಾನ್ಯ ಮಾಡಿದ್ದು, Gowda/Gouda ಎಂಬ ಹೆಸರನ್ನು ಒಕ್ಕಲಿಗರ ಪಟ್ಟಿಯಲ್ಲಿ ಸೇರಿಸಿ ಹಿಂದುಳಿದ ಕಾಗುಣಿತ ದೋಷವನ್ನು ಸರಿಪಡಿಸಿದೆ. ಕೇಂದ್ರದ ಸಚಿವರಾಗಲಿ, ರಾಜ್ಯದ ಮಾಜಿ ಮುಖ್ಯಮಂತ್ರಿಗಳಾಗಲಿ, ಇತರ ಯಾರೇ ಆಗಲಿ ಹೇಳಿಕೆಯ, ವೇದಿಕೆಯ ಮೂಲಕ ಈ ಬದಲಾವಣೆ ತರಲು ಸಾಧ್ಯವಾಗುವುದಿಲ್ಲವೆಂದು ತಿಳಿದಿರಬೇಕಾಗಿತ್ತು. ಎಂದು ವಿಷಾದಿಸುತ್ತೇವೆ. ಖಡ್ಗದಿಂದ ಕಡತಗಳು ಮುಖ್ಯವೆನಿಸುತ್ತವೆ ಎಂಬುದು ನಮ್ಮ ತಿಳುವಳಿಕೆ.

ಅರೆಭಾಷೆ ಮತ್ತು ತುಳು ಮಾತನಾಡುವ ಗೌಡರು ಒಕ್ಕಲಿಗರಲ್ಲವೆಂಬ ತರ್ಕವನ್ನು ಬಲವಾಗಿ ಪ್ರತಿಪಾದಿಸಿದಲ್ಲಿ ಗ್ರಾಮೀಣ ಕೃಪಾಂಕದಲ್ಲಿ ಆಯ್ಕೆಯಾದವರು ತಮ್ಮ ಹುದ್ದೆ ಕಳೆದುಕೊಂಡಿರುವಂತೆ ಹಲವಾರು ನೌಕರರು ಉದ್ಯೋಗ ವಿಹೀನರಾಗುವ ಅಪಾಯವನ್ನು ಮನಗಾಣಬೇಕು. ಮಾತ್ರವಲ್ಲ, ಮುಂದೆ ಕೇಂದ್ರ, ರಾಜ್ಯಗಳಲ್ಲಿ ಉದ್ಯೋಗವಾಗಲಿ ವೃತ್ತಿ ಶಿಕ್ಷಣಗಳಲ್ಲಿ ಪ್ರವೇಶಾವಕಾಶವೂ ಇಲ್ಲದಂತಾಗಬಹುದೆಂಬ ವಾಸ್ತವದ ಹಿನ್ನೆಲೆಯಲ್ಲಿ ಮಾಹಿತಿ ನೀಡಲು ಈ ಪ್ರಕಟಣೆ ನೀಡುವುದು ಅನಿವಾರ್ಯವಾಯಿತು.

-ಎಂ.ಬಿ. ಸದಾಶಿವ, ಸುಳ್ಯ.

ಕೋಳಿ ತಿಂದವ ದೋಸೆ ತಂದಾನೆ, ದೇಶ ತಿಂದವ ದೋಸೆ ತಿಂದಾನೆ

ಏಕೈಕ ಹಿಂದೂ ರಾಷ್ಟ್ರ ಅಳಿವಿನತ್ತ ಸಾಗುತ್ತಿದೆಯೇ ?

1962 ಚೀನಾ ನಮ್ಮ ಮೇಲೆರಗಿತ್ತು. ಅನಿರೀಕ್ಷಿತ ದಾಳಿಗೆ ಭಾರತ ನಿರುತ್ತರವಾಗಿತ್ತು. ಅಷ್ಟೇಕೆ, ಆ ಯುದ್ಧ ಭಾರತೀಯರ ಸ್ವಾಭಿಮಾನಕ್ಕೇ ಹೊಡೆತ ನೀಡಿತ್ತು. ಆತ್ಮಸ್ಥೈರ್ಯವನ್ನೇ ಕುಂದಿಸಿತ್ತು. ಕವಿ ಪ್ರದೀಪ್ ಅವರ ಅಂತರಾಳದ ದುಃಖ 'ಏ ಮೇರೆ ವತನ್ ಕೆ ಲೋಗೋ, ಜರಾ ಆಂಖ್ ಮೇ ಭರಲೋ ಪಾನಿ.......ಜೋ ಶಹೀದ್‌ಹುವೇ ಹೈ ಉನ್ ಕಿ ಝುರಾ ಯಾದ್ ಕರೋ ಕುರ್ಬಾನಿ........" ಹಾಡಿನಲ್ಲಿ ವ್ಯಕ್ತವಾಯಿತು. ಆದರೂ ಸ್ವಘೋಷಿತ ಬುದ್ಧಿ ಜೀವಿಗಳಾದ ಕಮ್ಯುನಿಷ್ಟರು ಕಣ್ಣು ಬಾಯಿ ಎರಡನ್ನೂ ಮುಚ್ಚಿಕೊಂಡು ಕುಳಿತಿದ್ದರು. ಏಕೆಂದರೆ ಸಿದ್ಧಾಂತಕ್ಕೆ ಕಟ್ಟು ಬಿದ್ದಿದ್ದ ಕಮ್ಯುನಿಷ್ಟರಿಗೆ ದೇಶದ ಹಿತಾಸಕ್ತಿ ನಗಣ್ಯವಾಗಿತ್ತು.

ಈಗ ವಿಷಯಕ್ಕೆ ಬರೋಣ, ಎಲ್ಲರೂ, ಎಲ್ಲ ಧರ್ಮಗಳೂ ಸಮಾನವೆನ್ನುವ ಸೆಕ್ಯೂಲರಿಸಂ ಅಂದರೆ ಜಾತ್ಯಾತೀತ ತತ್ವಕ್ಕೆ ಖಂಡಿತಾ ಮನ್ನಣೆಯಿದೆ. ಅಂತಹ ತತ್ವದಿಂದ ಅನುಕೂಲಗಳು ಇದ್ದೇ ಇವೆ. ವಿಶ್ವದ ಏಕೈಕ ಹಿಂದೂ ರಾಷ್ಟ್ರವಾದ ನೇಪಾಳದ ಸಂವಿಧಾನವನ್ನು ಬದಲಿಸಿ, ಜಾತ್ಯಾತೀತ ರಾಷ್ಟ್ರವೆಂದು ಘೋಷಿಸುವಂತೆ ಅಲ್ಲಿನ ಐದು ಪಕ್ಷಗಳು ತೀವ್ರ ಒತ್ತಡ ಹೇರುತ್ತಿವೆ. ಆದರೆ ಜಾತ್ಯಾತೀತ ತತ್ವದ ಬಗ್ಗೆ ಬೋಧನೆ ಮಾಡುತ್ತಿರುವವರು ಕಮ್ಯುನಿಸಂ ಬಗ್ಗೆ ಒಲವುಳ್ಳವರಾಗಿದ್ದಾರೆ. ಕಮ್ಯುನಿಸ್ಟರ ಕುಮ್ಮಕ್ಕಿನಿಂದಾಗಿಯೇ ಇಂತಹ ಒಂದು ಕೂಗೆದ್ದಿದೆ. 1962ರಲ್ಲಿ ಏನಾಯಿತು ಮತ್ತು ಭಾರತೀಯ ಕಮ್ಯೂನಿಷ್ಟರು ಯಾವ ರೀತಿ ಪ್ರತಿಕ್ರಿಯಿಸಿದರು ಎಂಬುದನ್ನು ನೆನಪಿಸಿಕೊಳ್ಳಿ. ಈಗ ಹೇಳಿ, ಶೇ. 90 ರಷ್ಟಕ್ಕೂ ಅಧಿಕ ಜನರು ಹಿಂದೂಗಳಾಗಿರುವ ನೇಪಾಳವನ್ನು ಜಾತ್ಯಾತೀತ ರಾಷ್ಟ್ರವೆಂದು ಘೋಷಿಸಬೇಕೇ? ಒಂದು ವೇಳೆ ನೇಪಾಳ ಜಾತ್ಯಾತೀತ ರಾಷ್ಟ್ರವಾಗಿ ಹೊರ ಹೊಮ್ಮಿದರೆ ಏನಾದೀತು?

ಕಳೆದ 56 ವರ್ಷಗಳ ಭಾರತದ ಚರಿತ್ರೆಯತ್ತ ದೃಷ್ಟಿಹಾಯಿಸಿದರೆ ಈ ಎಲ್ಲ ಪ್ರಶ್ನೆಗಳಿಗೂ ಉತ್ತರ ದೊರೆಯುತ್ತದೆ. ಬ್ರಿಟಿಷರ ಕುಮ್ಮಕ್ಕು ಮತ್ತು ಮೊಹಮದ್ ಆಲಿ ಜಿನ್ನಾ ಅವರ ಗೀಳಿನ ಫಲವೇ ದ್ವಿರಾಷ್ಟ್ರ ಸಿದ್ಧಾಂತ. ಅದರ ಫಲವೇ ದೇಶ ವಿಭಜನೆ. ಆ ವೇಳೆ ಭುಗಿಲೆದ್ದ ಕೋಮು ಹಿಂಸಾಚಾರದಲ್ಲಿ ರಕ್ತದ ಕೋಡಿಯೇ ಹರಿಯಿತು. ಒಂದೋ ಮತಾಂತರಗೊಳ್ಳಿ ಇಲ್ಲವೇ ದೇಶಬಿಟ್ಟು ತೊಲಗಿ ಎಂಬ ಮಾತು ಪಾಕ್‌ನಲ್ಲಿ ಪ್ರತಿಧ್ವನಿಸಿತು. ಮುಂದಿನ ಬೆಳವಣಿಗೆಗಳೂ ಅದಕ್ಕನುಗುಣವಾಗಿಯೇ ನಡೆದವು. ಕೆಲವರು ಕೊಲೆಯಾದರು. ಇನ್ನು ಕೆಲವರು ತಪ್ಪಿಸಿಕೊಂಡು ಭಾರತಕ್ಕೆ ಕಾಲಿಟ್ಟರು. ಉಳಿದವರು ಮತಾಂತರಗೊಂಡರು. ಇತ್ತ ಹಿಂದೂಗಳು ಶೇ. 87 ರಷ್ಟಿದ್ದರೂ ಭಾರತ ಜಾತ್ಯಾತೀತ ರಾಷ್ಟ್ರವಾಗಿ ಹೊರಹೊಮ್ಮಿತು. ಮುಸ್ಲಿಮರಿಗೇನೋ ಪಾಕಿಸ್ತಾನ ರಚನೆಯಾಯಿತು. ಹಿಂದೂಗಳಿಗೆ? ಅಷ್ಟೇಕೆ, ಬಹುಸಂಖ್ಯಾತರಿಗಿಂತ ಅಲ್ಪಸಂಖ್ಯಾತರಿಗೇ ಈ ರಾಷ್ಟ್ರದಲ್ಲಿ ಹೆಚ್ಚಿನ ಹಕ್ಕುಗಳನ್ನು ನೀಡಲಾಯಿತು. ಅದಕ್ಕೆ ಪ್ರತಿಯಾಗಿ ಹಿಂದೂಗಳಿಗೆ ದೊರೆತಿದ್ದಾದರೂ ಏನು?

'ನಾನು ಜಾತ್ಯಾತೀತ ತತ್ವದಲ್ಲಿ ನಂಬಿಕೆ ಇಟ್ಟಿರುವವನು; ಆತ ಕೋಮುವಾದಿ' ಎಂಬ ಭ್ರಮೆಗಳಿಂದ ಹೊರಬಂದು ಯೋಚಿಸಿ, ಅಧಿಕಾರದ ಗದ್ದುಗೆಯಲ್ಲಿ ಕುಳಿತಿದ್ದ ಕಾಂಗ್ರೆಸ್ ಕೈಯಲ್ಲಿ 'ಕ್ಲೀನ್ ಸ್ಲೇಟು' ಇತ್ತು. ಏನು ಬೇಕಾದರೂ ಬರೆಯಬಹುದಿತ್ತು. ಅದರ ಮೇಲೆ ಭಾರತ ಜಾತ್ಯಾತೀತ ರಾಷ್ಟ್ರವೆಂದು ಬರೆದದ್ದೂ ಆಯಿತು. ಸೆಕ್ಯೂಲರಿಸಂ ಮಂತ್ರ ಪಠಿಸಲಾರಂಭಿಸಿದ ಕಾಂಗ್ರೆಸ್, 'ನೀವು ಅಲ್ಪ ಸಂಖ್ಯಾತರು.......ಈ ದೇಶದಲ್ಲಿ ನಿಮಗೆ ಭದ್ರತೆ ನೀಡುವುದು ನಮ್ಮಿಂದ ಮಾತ್ರ ಸಾಧ್ಯ' ಎಂಬ ಭ್ರಮೆ ಸೃಷ್ಟಿಸಿತು. ಹೆಚ್ಚಿನ ಹಕ್ಕುಗಳನ್ನು ನೀಡಿ ಮುದ್ದು ಮಾಡುತ್ತಾ ಬಂತು. ಆದರೆ ನೆರೆಯ ಪೂರ್ವ ಪಾಕಿಸ್ತಾನ ಅಂದರೆ ಬಾಂಗ್ಲಾ ದೇಶದಲ್ಲಿ ದೇಶ ವಿಭಜನೆ ವೇಳೆ ಶೇ. 16 ರಷ್ಟು ಹಿಂದೂಗಳಿದ್ದರು. ಇಂದು ಆ ಪ್ರಮಾಣ ಈಗ ಶೇ. 9 ಕ್ಕೆ ಇಳಿದಿದೆ. ಇತ್ತ ಭಾರತದಲ್ಲೂ ಹಿಂದೂಗಳ ಸಂಖ್ಯೆ ಶೇ. 82 ಕ್ಕೆ ಇಳಿದಿದೆ. ಶತ ಶತಮಾನಗಳಿಂದಲೂ ಬೆಂಗಾಲಿಯರು ಅತ್ಯಂತ ಬುದ್ಧಿಶಾಲಿಗಳು, ಶಾಂತಿಪ್ರಿಯರು, ಧರ್ಮ ಸಹಿಷ್ಣುಗಳು ಎಂದು ಪ್ರತಿಬಿಂಬಿಸುತ್ತಾ ಬಂದಿದ್ದೇವೆ. ಕಾರ್ಗಿಲ್‌ನಲ್ಲಿ ಬೆನ್ನಿಗೆ ಚೂರಿ ಇರಿದ ಮತ್ತು ದೇಶದ ಗಡಿ ಕಾಯುತ್ತಿರುವ ಸೈನಿಕರ ಕುಟುಂಬಗಳ ಮೇಲೆರಗಿ ಅವರ ಹೆಂಡತಿ ಮಕ್ಕಳನ್ನು ಕೊಲ್ಲುತ್ತಿರುವ ರಾಷ್ಟ್ರಕ್ಕೆ ತೆರಳಿ ಶಾಂತಿ ಭಾವುಟ ತೋರಿಸುವ ಸೋಮನಾಥ್ ಚಟರ್ಜಿಯವರಂತಹ ಬುದ್ಧಿಜೀವಿಗಳಿಗೆ ಜನ್ಮ ನೀಡಿದ ನಾಡು ಬಂಗಾಳ, ಬಂಗಾಳದ ಇನ್ನೊಂದು ಭಾಗವಾದ ಬಾಂಗ್ಲಾ ಕೂಡಾ ಜಾತ್ಯಾತೀತ ರಾಷ್ಟ್ರ. ಆದರೆ ಅಲ್ಲಿ ನಡೆಯುತ್ತಿರುವುದೇನು? ಹಿಂದೂಗಳ ಮನೆ-ಮಠ ಲೂಟಿ, ಹೆಣ್ಣು ಮಕ್ಕಳ ಅತ್ಯಾಚಾರ, ಕೊಲೆ ಆದರೆ ನಮ್ಮ ಪಶ್ಚಿಮ ಬಂಗಾಳದ ಕಮ್ಯುನಿಷ್ಟರು ಮತ್ತು ಜಾತ್ಯಾತೀತ ವಾದಿಗಳು ಎಂದಾದರೂ ಧ್ವನಿಯೆತ್ತಿದ್ದಾರೆಯೇ? ಆದರೆ ದುರದೃಷ್ಟವಶಾತ್, ಇದೆ ಕಮ್ಯೂನಿಷ್ಟ್ ಸಿದ್ಧಾಂತದಿಂದ ಪ್ರಭಾವಿತರಾಗಿರುವವರು ನೇಪಾಳವನ್ನೂ ಜಾತ್ಯಾತೀತ ರಾಷ್ಟ್ರವೆಂದು ಘೋಷಿಸುವಂತೆ ಒತ್ತಾಯಿಸುತ್ತಿದ್ದಾರೆ. ಇಲ್ಲಿ ಕಮ್ಯೂನಿಷ್ಟ್ ಸಿದ್ಧಾಂತವನ್ನು ಖಂಡಿತಾ ತೆಗಳುತ್ತಿಲ್ಲ. ಏಕೆಂದರೆ ಕಾರ್ಲ್‌ಮಾರ್ಕ್ಸ್ ಬೋಧಿಸಿದ್ದು ಒಂದು ಉಪಖಂಡದ ಕಮ್ಯೂನಿಷ್ಟರು ಅರ್ಥ ಮಾಡಿಕೊಂಡಿರುವುದು ಇನ್ನೊಂದನ್ನು.

ಭಾರತ ಜಾತ್ಯಾತೀತ ತತ್ವವನ್ನು ಅಪ್ಪಿಕೊಂಡಿದ್ದರಲ್ಲಿ ತಪ್ಪೇನೂ ಇಲ್ಲ. ಆದರೆ ಈ ದೇಶದಲ್ಲಿ ಎಂತಹ ಸ್ಥಿತಿ ಸೃಷ್ಟಿಯಾಗಿದೆಯೆಂದರೆ ಮಹಾರಾಷ್ಟ್ರ ಸರಕಾರ ಎರಡಕ್ಕಿಂತ ಹೆಚ್ಚು ಮಕ್ಕಳಿದ್ದರೆ ಅಂತಹವರಿಗೆ ಸರಕಾರಿ ಉದ್ಯೋಗವಿಲ್ಲ ಎಂಬ ನಿಯಮ ಜಾರಿಗೆ ತರಲು ಮುಂದಾದಾಗ, ನಿರ್ದಿಷ್ಟ ಸಮುದಾಯವೊಂದು ತನಗೆ ಧರ್ಮವೇ ದೊಡ್ಡದೆಂದು ಬೊಬ್ಬೆ ಹಾಕಿತು. ಹಕ್ಕುಗಳ ವಿಷಯ ಬಂದಾಗ ಸಂವಿಧಾನ; ಪಾಲನೆಯ ವಿಷಯ ಬಂದಾಗ ಧರ್ಮವೇ ಮುಖ್ಯ ಎಂದರ್ಥವೇ?ಅಂದರೆ ಈ ದೇಶದಲ್ಲಿ 'ಜಾತ್ಯಾತೀತ' ಎಂಬುದು ಅನುಕೂಲಕ್ಕೆ ತಕ್ಕಂತೆ

ಸಾವುಕಾರನಾದ್ರೂ ಸಾವು ತಪ್ಪೀತೇ, ರಾಯನಾಗಿದ್ದಾರೂ ಜೈಲು ತಪ್ಪೀತೆ

ಬಳಸಿಕೊಳ್ಳಲು ಇರುವ ಪದವೇ? ಕೇರಳದ ಮಲ್ಲಪುರಂನಲ್ಲಿ ಜಾತ್ಯಾತೀತ ತತ್ವ ಅನ್ವಯವಾಗುತ್ತಿದೆಯೇ? ಮಲ್ಲಪುರಮ್‌ನ ಚುನಾವಣೆಯಲಲ್ಲಿ ಜಯಗಳಿಸುವುದು ಜಾತ್ಯಾತೀತ ತತ್ವದ ಬಗ್ಗೆ ಬೋಧನೆ ನೀಡುವ ಕಾಂಗ್ರೆಸ್ ಆಗಲಿ, ಎಡರಂಗಗಳಾಗಲಿ ಅಲ್ಲ, ಮುಸ್ಲಿ ಲೀಗ್! ನಾವೆಲ್ಲ ಬ್ರಿಟಿಷರನ್ನು ದೂರುತ್ತೇವೆ. ದೇಶವನ್ನು ಕೊಳ್ಳೆ ಹೊಡೆದರೆಂದು ಇಂದಿಗೂ ಕಿಡಿ ಕಾರುತ್ತೇವೆ. ದೇಶದ ವಿಭಜನೆ ಹಿಂದೆ ಬ್ರಿಟಿಷರ ಕೈವಾಡವೂ ಇತ್ತು. ಅದಕ್ಕಾಗಿ ಇಂದಿಗೂ ಶಪಿಸುತೇವೆ. ಕೊಹಿನೂರು ವಜ್ರವನ್ನು ಕದ್ದೊಯ್ದರು ಎದು ಜರಿಯುತ್ತೇವೆ. ಆದರೆ ಇದೇ ಬ್ರಿಟಿಷರು ಭಾರತಕ್ಕೆ ಬರದೇ ಇದ್ದಿದ್ದರೆ, ಮೊಗಲರು-ನವಾಬರು-ಸುಲ್ತಾನರುಗಳ ಹುಟ್ಟಡಗಿಸಿ ಅವರ ಆಳ್ವಿಕೆಗೆ ತೆರೆ ಎಳೆಯದೇ ಇರುತ್ತಿದ್ದರೆ, ಬೀದಿಗೊಂದು ಬಾಬರಿ ಮಸೀದಿ ತಲೆಯೆತ್ತಿರುತ್ತಿತ್ತು. ಈ ದೇಶ 1947 ರಲ್ಲಿ ಖಂಡಿತಾ ಜಾತ್ಯಾತೀತ ರಾಷ್ಟ್ರವಾಗಿ ಹೊರಹೊಮ್ಮುತ್ತಿರಲಿಲ್ಲ. ಇಷ್ಟಾಗಿಯೂ ಇಂದು ಎಂತಹ ಪರಿಸ್ಥಿತಿ ಇದೆ? ಹಿಂದೂ ಧರ್ಮದ ಮೇರು ಪುರುಷನ ಜನ್ಮ ಸ್ಥಳವನ್ನಾದರೂ ಬಿಟ್ಟುಕೊಡಿ ಎಂದು ಅಂಗಲಾಚುವಂತಹ ಕಾಲ ಬಂದಿದೆ. ಉದ್ದೇಶಪೂರ್ವಕವಾಗಿ ಮುಸ್ಲಿಂ ಆಡಳಿತಗಾರರು ಹಿಂದೂಗಳ ಆರಾಧ್ಯ ಸ್ಥಳಗಳನ್ನು ಆಯ್ದುಕೊಂಡು ಮಸೀದಿಗಳನ್ನು ನಿರ್ಮಿಸಿದ್ದಾರೆ. ಅಂದರೆ, ಶತಶತಮಾನಗಳುರುಳಿದರೂ ಈ ದೌರ್ಜನ್ಯದ ಸಂಕೇತಗಳು ಹಾಗೆಯೇ ಉಳಿಯಬೇಕು ಮತ್ತು ಹಿಂದೂಗಳ ಭಾವನೆಗೆ ನೋವುಂಟಾಗುತ್ತಿರಬೇಕು. ಇತಿಹಾಸದಲ್ಲಿ ದಾಖಲಾಗಿರುವ ತಪ್ಪುಗಳನ್ನು ಸರಿಪಡಿಸಬೇಕು ಎಂದು ಹೇಳುತ್ತಿಲ್ಲ. ಆದರೆ ಕನಿಷ್ಟ ಪಕ್ಷ *ರಾಮನ ಜನ್ಮ ಸ್ಥಳವನ್ನಾದರೂ ಬಿಟ್ಟುಕೊಡುವ ಉದಾರತೆಯನ್ನೇಕೆ ತೋರಬಾರದು?* ಶಾಹಿ ಇಮಾಮ್ ಅಬ್ದುಲ್ ಬುಖಾರಿ ಅವರಂತಹವರೂ ಜಾತ್ಯಾತೀತತೆಯ ಬಗ್ಗೆ ಮಾತನಾಡುತ್ತಾರೆ.

ಭಾರತ ಹಿಂದೂ ರಾಷ್ಟ್ರವಾಗಿ ಹೊರಹೊಮ್ಮಬೇಕಿತ್ತು ಎಂದು ಹೇಳುತ್ತಿಲ್ಲ. ಆದರೆ ಜಾತ್ಯಾತೀತತೆಯ ಎಲ್ಲ ಮಜಲುಗಳನ್ನು ಗಮನಿಸಿ ನೋಡಿ, ಇಂತಹ ಜಾತ್ಯಾತೀತ ತತ್ವದ ಅಗತ್ಯ ನೇಪಾಳಕ್ಕಿದೆಯೇ? ಐ. ಎಸ್.ಐ. ನೇಪಾಳಕ್ಕೆ ಕಾಲಿರಿಸಲು ನೇಪಾಳದಲ್ಲಿದ್ದದಿ. ಮಿರ್ಜಾದಿಲ್ವಾದ್ ಬೇಗ್ ಅವರೇ ಕಾರಣ ಎಂಬುದನ್ನು ಮರೆಯಬೇಡಿ.

ಇಂದು ನೇಪಾಳದ ಶೇ. 30 ಕ್ಕಿಂತ ಅಧಿಕ ಭೂಭಾಗ ಮಾವೋವಾದಿ ಬಂಡುಕೋರರ ವಶದಲ್ಲಿದೆ. ಬದಲಿ ಸರಕಾರವನ್ನೇ ನಡೆಸುತ್ತಿದ್ದಾರೆ. ಈ ಬಂಡುಕೋರರು ಒಮ್ಮೆಗೆ 150 ನೇ ಪಾಳಿ ಸೈನಿಕರನ್ನು ಕೊಲ್ಲುವ ಶಕ್ತಿಯನ್ನು ಹೊಂದಿದ್ದಾರೆ. ಅಂದರೆ ಅವರಿಗೆ ಮದ್ದು ಗುಂಡುಗಳು ಎಲ್ಲಿಂದ ಪೂರೈಕೆಯಾಗುತ್ತಿವೆ? ಉತ್ತರಕ್ಕಾಗಿ ಹುಡುಕಾಡಬೇಕಿಲ್ಲ. ಎ.ಕೆ.-47 ಬಂದೂಕನ್ನು ರೂಪಿಸಿದ್ದು ರಷ್ಯಾವಾಗಿದ್ದರೂ ಇಂದು ವಿಶ್ವದಲ್ಲಿಯೇ ಅತಿ ಹೆಚ್ಚು ಬಂದೂಕುಗಳನ್ನು ಉತ್ಪಾದಿಸುತ್ತಿರುವುದು ಚೀನಾ. ನಮ್ಮ ಈಶಾನ್ಯರಾಜ್ಯಗಳಲ್ಲಿರುವ ಪ್ರತ್ಯೇಕತಾವಾದಿಗಳು ಮತ್ತು ನೇಪಾಳದ ಮಾವೋವಾದಿಗಳ ಕೈಯಲ್ಲಿರುವುದು ಈ ಚೀನೀ ಬಂದೂಕುಗಳೇ. ಪ್ರಸ್ತುತ ನೇಪಾಳದಿಂದ ಬರುತ್ತಿರುವ ಅಪಾಯದ ಸಂಕೇತಗಳನ್ನು ಗಮನಿಸಿದರೆ ಮುಂದೊಂದು ದಿನ ಮಾವೋವಾದಿ ಬಂಡುಕೋರರು ದೇಶವನ್ನೇ ತಮ್ಮ ನಿಯಂತ್ರಣಕ್ಕೆ ತೆಗೆದುಕೊಂಡರೂ ಆಶ್ಚರ್ಯವಿಲ್ಲ. ಅಂತಹ ಪರಿಸ್ಥಿತಿ ಸೃಷ್ಟಿಯಾದರೆ ನೇಪಾಳ ಚೀನಾ ತೆಕ್ಕೆಗೂ ಸರಿಯಬಹುದು. *ಆಗ ಭಾರತ ಖಂಡಿತಾ ನಿದ್ದೆ ಕಳೆದುಕೊಳ್ಳಬೇಕಾಗುತ್ತದೆ.* ಸಾಲದೆಂಬಂತೆ ಇಲ್ಲಿನ ಕಮ್ಯೂನಿಷ್ಟರು ಜಾತ್ಯತೀತ ಮಂತ್ರವನ್ನು ಪಠಿಸಲಾರಂಭಿಸಿದ್ದಾರೆ.

ಎಲ್ಲರಿಗೂ ತಿಳಿದಿರುವಂತೆಯೇ ವಿಶ್ವದಲ್ಲಿರುವ ಏಕೈಕ ಹಿಂದೂ ರಾಷ್ಟ್ರ ನೇಪಾಳ. ನಾವು ಆ ರಾಷ್ಟ್ರದೊಂದಿಗೆ ಭಾವನಾತ್ಮಕ ಕೊಂಡಿ ಹೊಂದಿದ್ದೇವೆ. ಅಂತಹ ಒಂದು ಹಿಂದೂ ರಾಷ್ಟ್ರ ವಿಶ್ವದ ಭೂಪಟದಿಂದ ಅಳಿಸಿ ಹೋಗುವುದನ್ನು ಮನ ಒಪ್ಪುತ್ತದೆಯೇ?

-ಪ್ರತಾಪ್ ಸಿಂಗ್, ಪರ್ತಕರ್ತ, ಕೃಪೆ :ವಿಜಯ ಕರ್ನಾಟಕ

ವೈಟ್ ಹೌಸ್ ವೈಟ್ ಏಕೆ ?

ವೈಟ್ ಹೌಸ್, ಅಮೆರಿಕಾದ ಅಧ್ಯಕ್ಷರ ಅಧಿಕೃತ ನಿವಾಸ. ಇದು ವಾಷಿಂಗ್‌ಟನ್‌ನಲ್ಲಿದೆ. ಈ ಕಟ್ಟಡವನ್ನು ಕಟ್ಟಿದಾಗ ಇದು ಬಿಳಿಯಾಗಿರಲಿಲ್ಲ. ಇದನ್ನು ವೈಟ್ ಹೌಸ್ ಎಂದು ಕರೆಯುತ್ತಲೂ ಇರಲಿಲ್ಲ.

ಈ ಕಟ್ಟಡವನ್ನು ಐರ್ಲೆಂಡಿನಲ್ಲಿ ಹುಟ್ಟಿದ ಜೇಮ್ಸ್ ಹೋಬನ್ ಎಂಬ ಕಟ್ಟಡ ವಿನ್ಯಾಸಕಾರ ರಚಿಸಿದ. 1792 ರ ಅಕ್ಟೋಬರ್ ಈ ಕಟ್ಟಡವನ್ನು ನಿರ್ಮಾಣ ಮಾಡಲಾಯಿತು. ಈ ಕಟ್ಟಡವನ್ನು ಮೊದಲು ಬೂದು ಬಣ್ಣದ (Grey Stone) ಕಲ್ಲಿನಲ್ಲಿ ಕಟ್ಟಲಾಗಿತ್ತು. ಆಗಿನಿಂದಲೂ ಇದು ಅಮೆರಿಕಾದ ಅಧ್ಯಕ್ಷರ ಅಧಿಕೃತ ನಿವಾಸವಾಗಿದೆ. 1814 ರಲ್ಲಿ ಯುದ್ಧದಲ್ಲಿ ಬ್ರಿಟಿಷ್ ಸೈನಿಕರು ಈ ಕಟ್ಟಡವನ್ನು ಸುಟ್ಟು ಹಾಕಿದರು. ಈ ಕಟ್ಟಡದ ಸ್ವಲ್ಪ ಭಾಗ ಮಾತ್ರ ಹಾಗೆಯೇ ಉಳಿದಿತ್ತು. ನಂತರ ಹೋಬನ್‌ನ ನಿರ್ದೇಶನದಲ್ಲಿ ಈ ಕಟ್ಟಡವನ್ನು ಪುನಃ ನಿರ್ಮಿಸಲಾಯಿತು. ಪುನಃ ನಿರ್ಮಾಣ ಕಾರ್ಯ 1817ರಲ್ಲಿ ಪೂರ್ಣಗೊಂಡಿತು. ಬೆಂಕಿಯ ಹಾಗೂ ಮನೆಯ ಕಲೆಗಳನ್ನು ತೆಗೆದು ಹಾಕಲಾಯಿತು. ಈ ಕಟ್ಟಡದ ಗೋಡೆಗಳಿಗೆ ಬಿಳಿ ಬಣ್ಣವನ್ನು ಹಚ್ಚಲಾಯಿತು. ಆಗಿನಿಂದ ಈ ಕಟ್ಟಡಕ್ಕೆ 'ವೈಟ್ ಹೌಸ್' (White House)ಎಂಬ ಹೆಸರು ಬಂತು. ಅಧ್ಯಕ್ಷ ಥಿಯೋಡೋರ್ ರೊಸ್‌ವೆಲ್ಟ್, 'ವೈಟ್ ಹೌಸ್'ಎಂದು ಹೆಸರಿಟ್ಟರು.

White House ನಲ್ಲಿ 100 ಕೋಣೆಗಳಿವೆ. ಇದು ಮೂರು ಅಂತಸ್ತಿನ ಕಟ್ಟಡ. ಈ ಎಲ್ಲ ಕೊಠಡಿಗಳಿಗೂ ಬೇರೆ ಬೇರೆ ಬಣ್ಣಗಳಿವೆ. ಅಧ್ಯಕ್ಷರು ಮತ್ತು ಅವರ ಪತ್ನಿಗಾಗಿ ಸ್ವಾಗತ ಕೊಠಡಿಯಾಗಿದೆ. ಕೆಂಪು ಬಣ್ಣದ ಕೊಠಡಿಯನ್ನು ಅಮೆರಿಕಾ, ಬ್ರಿಟಿಷ್ ಸಾಮ್ರಾಜ್ಯದ ಅಧೀನದಲ್ಲಿದ್ದ ಕಾಲದ ವಸ್ತುಗಳಿಂದ ಶೃಂಗರಿಸಲಾಗಿದೆ. ಮಹಡಿಯ ಮೇಲಿರುವ ರೋಸ್ ಗೆಸ್ಟ್ ರೂಮ್ (Rose Guest Room) ನಲ್ಲಿ ಅಧ್ಯಕ್ಷರು ಮತ್ತು ಅದರ ಕುಟುಂಬದ ಸದಸ್ಯರಿರುತ್ತಾರೆ.

- ಪಾರೆಮಜಲು ವನಮಾಲ ಮಹೇಶ್, ಮುತ್ತಾರ್ಮುಡಿ.

ಗೌಡರ ಕುಲದೇವರಾದ ಶ್ರೀ ವೆಂಕಟರಮಣ ಸ್ವಾಮಿಯ ಲೀಲೆಯ ಶೋಭಾನೆ

1. ಶೋಭಾನೆ ಹೇಳಿ ಬನ್ನಿರೆ ನಮ್ಮ ವೆಂಕಟರಮಣ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ,
ಮಂದಾರಗಿರಿಯೊಡೆಯನಿಗೆ ಏಳುಬೆಟ್ಟದ ಮೇಲೆ ವಾಸಿಸುವ ನಮ್ಮ ವೆಂಕಟರಮಣ ಸ್ವಾಮಿಗೆ, ಶೋಭಾನೆ ಹೇಳಿ ಬನ್ನಿರೆ.
2. ತ್ರೀ ಮೂರ್ತಿಗಳೊಡೆಯಗೆ, ತ್ರೀ ಕಾಲ ಜ್ಞಾನೀಗೆ ಶೋಭಾನೆ ಹೇಳಿ ಬನ್ನಿರೆ, ನಮ್ಮ ವೆಂಕಟರಮಣ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ.
3. ಭೃಗು ಮುನಿಯ ಅಂಗಾಲಿದ್ದ ಜ್ಞಾನದ ಕಣ್ ಹಿಂದೆ ಅಹಂಕಾರದ ಸೊಕ್ಕಮುರ್ದ
ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ, ನಮ್ಮ ವೆಂಕಟರಮಣ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ.
4. ಭೈಗು ಮುನಿನ ಪರೀಕ್ಷೆಲಿ ಗೆದ್ದಂತ ಸ್ವಾಮಿಗೆ, ಲಕ್ಷ್ಮೀಯ ಹುಡ್ ಕಂಡ್ ಧರೆಗಿಳಿದ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೇ, ನಮ್ಮ ವೆಂಕಟರಮಣ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ.
5. ಲಕ್ಷ್ಮೀಯು ಸಿಕ್ಕದೆ, ಆದಿವರಹಾ ಕ್ಷೇತ್ರ ಸೇರಿ,ಹುಣಿಸೇಯ ಮರದಡಿಲಿ ಹಾವಿನ ಹುತ್ತದೊಳಗೆ ತಪಸ್ಸಿಗೆ ಕುದ್ದಂತ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ ನಮ್ಮ ವೆಂಕಟರಮಣ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ.
6. ಉಪವಾಸ ಮಾಡುತ್ತ, ನಿದ್ದೆಯ ಮಾಡದೆ ತಪಸ್ಸನ ಮಾಡುತ್ತಿದ್ದ ಶ್ರೀಮನ್ನಾರಾಯಣನೀಗೆ ಶೋಭಾನೆ ಹೇಳಿ ಬನ್ನಿರೆ ನಮ್ಮ ವೆಂಕಟರಮಣ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ.
7. ಬ್ರಹ್ಮನು ಹಸುವಾಗಿ, ಶಿವನು ಕರುವಾಗಿ, ಲಕ್ಷ್ಮೀಯು ಗೊಲ್ಲ ಭಾಮೆಯಾಗಿ
ಚಂದ್ರಗಿರಿ ಪಟ್ಟಣ ಸೇರಲು ಕಾರಣನಾದ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ, ನಮ್ಮ ವೆಂಕಟರಮಣ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ.
8. ಚೋಳ ರಾಜನ ಸೇವಕನಿಂದ ಕೊಡ್ಲಿಪೆಟ್ಟ್ ತಿಂದ್, ಚೋಳ ರಾಜಂಗೆ ಶಾಪಕೊಟ್ಟ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ, ನಮ್ಮ ವೆಂಕಟರಮಣ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ.
9. ಚೋಳ ರಾಜ ತಿಳಿಯದೆ ಮಾಡಿದ ಅಪರಾಧಕ್ಕೆ ಮರು ಶಾಪ ನೀಡಿ ಚೋಳ ವಂಶದಲ್ಲಿ ಹುಟ್ಟಿ ಆಕಾಶರಾಜನೆಂಬ ಹೆಸರನ್ನು ಹಾಕಿದ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ ನಮ್ಮ ವೆಂಕಟರಮಣ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ
10. ಭೂ ಲೋಕದಲ್ಲಿ ಅವತರಿಸಿದಾಗ ಮೊದಲು ಗೊಲ್ಲನ ದರ್ಶನ ಪಡೆದ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ ನಮ್ಮ ವೆಂಕಟರಮಣ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ.
11. ಗೊಲ್ಲರಿಂದ ತಿರುಪತಿಯಲ್ಲಿ ಬಾಗಿಲು ತೆಗೆಸಿ ಮೊದಲ ದರ್ಶನ ಇಂದಿಗೂ ಮಾಡುತ್ತಿರುವ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ
ನಮ್ಮ ವೆಂಕಟರಮಣ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ.
12. ವಿಷ್ಣು ಭಕ್ತರಿಗೆ ಅಭಯವಿತ್ತು ರಾಕ್ಷಸರನ್ನು ಸಂಹರಿಸಲು ಅವತಾರವೆತ್ತಿದ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ.
13. ಶ್ವೇತ ವರಾಹ ಅವತಾರ ತಾಳಿ ಭೂಮಿಯ ರಕ್ಷಿಸಿದ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ, ನಮ್ಮ ವೆಂಕಟರಮಣ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ.
14. ಭಕ್ತರ ರಕ್ಷಣೆಗಾಗಿ ಶೇಷಾಚಲದಲ್ಲಿ ನೆಲೆ ನಿಂತ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ, ನಮ್ಮ ವೆಂಕಟರಮಣ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ.
15. ತಲೆಗಾದ ಗಾಯಕ್ಕೆ ಅತ್ತಿ ಹಾಲು ಹುಡುಕುತ್ತಿರಲು, ಕೃಷ್ಣ ನಾಮ ಮಾಡುತ್ತಿದ್ದ ಬಕುಳಾ ಮಾತೆಯನ್ನು ಅಮ್ಮಾ ಎಂದು ಕರೆದ ಸ್ವಾಮಿಗೆಶೋಭಾನೆ ಹೇಳಿ ಬನ್ನಿರೆ ನಮ್ಮ ವೆಂಕಟರಮಣ ಸ್ವಾಮಿಗೆ ಶೋಭಾನೆಹೇಳಿ ಬನ್ನಿರೆ.
16. ತಿರುಪತಿ ವರಹಾ ಸ್ವಾಮಿಯಿಂದ ಜಾಗ ಪಡೆದು ನಿವಾಸ ಮಾಡಿಕೊಂಡ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ ನಮ್ಮ ವೆಂಕಟರಮಣ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ.
17. ದ್ವಾಪರದ ವಿಷ್ಣುಮೂರ್ತಿ ಹೆಸರನ್ನು ಕಲಿಯುಗದ ಶ್ರೀನಿವಾಸ ನೆಂದು ಮಾತೆ ಬಕುಳಾದೇವಿಯಿಂದ ಇರಿಸಿಕೊಂಡ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ, ನಮ್ಮ ವೆಂಕಟರಮಣ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ.
18. ಸ್ವಾಮಿ ಕೊಟ್ಟ ಮಾತಿನಂತೆ ವರಹಾ ಸ್ವಾಮಿಗೆ ಮೊದಲು ಪೂಜೆ ಮಾಡಿ ಆ ಮೇಲೆ ಭಕ್ತರ ಪೂಜೆಯನ್ನು ಸ್ವೀಕರಿಸುವ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ. ನಮ್ಮ ವೆಂಕಟರಮಣ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ.
19. ಆಕಾಶ ರಾಜನು ಚಿನ್ನದ ನೇಗಿಲಿನಿಂದ ಭೂಮಿಯನ್ನು ಉಳುತ್ತಿರಲು ಸಹಸ್ರದಳದ ಕಮಲ ಮಧ್ಯ ಪೆಟ್ಟಿಗೆಯಲ್ಲಿ ಜನಿಸಿದ ಪದ್ಮಾವತಿ ದೇವಿಗೆ ಶೋಭಾನೆ ಹೇಳಿ ಬನ್ನಿರೆ, ನಮ್ಮ ವೆಂಕಟರಮಣ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ.
20. ತ್ರೇತಾಯುಗದಲ್ಲಿ ಅಗ್ನಿದೇವನಿಗೆ ಕೊಟ್ಟ ಮಾತನ್ನು ಕಲಿಯುಗದಲ್ಲಿ ಪೂರೈಸಿದ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ, ನಮ್ಮ ವೆಂಕಟರಮಣ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ.
21. ಮಾಯಾ ಸೀತೆಯಾದ ವೇದಾವತಿಯು ಆಕಾಶರಾಜನ ಮಗಳಾಗಿ ಜನಿಸಿದ ಪದ್ಮಾವತಿಯನ್ನು ಮದುವೆಯಾಗಿ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ ನಮ್ಮ ವೆಂಕಟರಮಣ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ.
22. ಬೇಟೆಯನ್ನಾಡುತ್ತಾ ಬ್ರಹ್ಮದೇವನ ಸ್ಮರಿಸಲು ಬಿಳಿ ಕುದುರೆಯನ್ನು ಪಡೆದ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ, ನಮ್ಮ ವೆಂಕಟರಮಣ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ.
23. ಪದ್ಮಾವತಿ ದೇವಿಯು ಗಿಳಿಯೊಡನೆ ಹಾಡುತ್ತ ಆಟವಾಡುತ್ತಿರಲು ಬೇಟೆಗಾರನಾಗಿ ಎದುರುಗೊಂಡ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ.
ನಮ್ಮ ವೆಂಕಟರಮಣ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ.
24. ಪದ್ಮಾವತಿ ಮದುವೆಗಾಗಿ ಕುಬೇರನಿಂದ ಮೂರು ಸಾವಿರದ ಮುನ್ನೂರ ಅರುವತ್ತನಾಲ್ಕು ಕೋಟಿ ರಾಮ ಕಮಲ ನಾಣ್ಯಗಳನ್ನು ಸಾಲವಾಗಿ ಪಡೆದ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ.
25. ಸಾಲಕ್ಕಾಗಿ ಪತ್ರ ಬರೆದುಕೊಟ್ಟು ಬ್ರಹ್ಮ, ಈಶ್ವರ, ಅಶ್ವತ ಮರವನ್ನು ಸಾಕ್ಷಿ ಹಾಕಿಸಿದ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ ನಮ್ಮ ವೆಂಕಟರಮಣ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ.
26. ಕಲಿಯುಗದ ಅಂತ್ಯದಲ್ಲಿ ಅಸಲು ಬಡ್ಡಿ ಸೇರಿಸಿ ಮೊತ್ತವಾಗಿ ಕೊಡುವೆನೆಂದು ಮಾತುಕೊಟ್ಟ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ. ನಮ್ಮ ವೆಂಕಟರಮಣ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ.
27. ಶುಭ ಶುಕ್ರವಾರದಂದು ಪದ್ಮಾವತಿ ಕೊರಳಿಗೆ ಮಾಂಗಲ್ಯ ಕಟ್ಟಿದ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ ನಮ್ಮ ವೆಂಕಟರಮಣ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ.
28. ಅಗಸ್ತ್ಯ ಮುನಿ ಆಶ್ರಮದಲ್ಲಿ ಆರು ತಿಂಗಳು ಆಶ್ರಯ ಪಡೆದ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ.

ಬೀಸೋ ದೊಣ್ಣೆ ಹೊಡ್ಸಿಕೊಂಡ್ರೆ ನೂರು ಕೋರ್ಟು ನೋಟೀಸು

ನಮ್ಮ ವೆಂಕಟರಮಣ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ.

30. ಲಕ್ಷ್ಮೀಯ ರೇಖೆ ಹೊಂದಿದ್ದ ರಾಜನನ್ನು ಕರೆಸಿ ವಿಶ್ವಕರ್ಮ ನಿಂದ ದೇವಸ್ಥಾನ ಮಾಡಿಸಿದ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ ನಮ್ಮ ವೆಂಕಟರಮಣ ಸ್ವಾಮೀಗೆ ಶೋಭಾನೆ ಹೇಳಿ ಬನ್ನಿರೆ.

31. ಬ್ರಹ್ಮನಿಂದ ಜ್ಯೋತಿ ಬೆಳಗಿಸಿ ಬ್ರಹ್ಮೋತ್ಸವ ಮಾಡಿಸಿದ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ, ನಮ್ಮ ವೆಂಕಟರಮಣ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ.

32. ನಾರದ ಋಷಿಯ ಮಾತುಕೇಳಿ ಕೋಪಗೊಂಡ ಲಕ್ಷ್ಮೀದೇವಿ ಶೋಬಾನೆ ಹೇಳಿ ಬನ್ನಿರೆ, ನಮ್ಮ ವೆಂಕಟರಮಣ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ.

33. ಶ್ರೀನಿವಾಸ ಸ್ವಾಮಿಯು,ಪದ್ಮಾವತಿಯೊಂದಿಗೆ ಮೆರೆಯು ವುದನ್ನು ಸಹಿಸಲಾರದೆ ಕಲಹ ಮಾಡಿದ ಲಕ್ಷ್ಮೀದೇವಿಗೆ ಶೋಭಾನೆ ಹೇಳಿ ಬನ್ನಿರೆ.

34. ತಮ್ಮ ತಮ್ಮ ತಪ್ಪುಗಳನ್ನೊಪ್ಪಿಕೊಂಡು ಕ್ಷಮೆ ಯಾಚಿಸಿದ ಲಕ್ಷ್ಮೀದೇವಿಗೆ ಶೋಭಾನೆ ಹೇಳಿ ಬನ್ನಿರೆ, ನಮ್ಮ ವೆಂಕಟ ರಮಣ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ.

35. ತ್ರೇತಾಯುಗದ ಅವತಾರ ಅವರಿಗೆ ತಿಳಿಸಿ ಭೃಗುಮುನಿ ಒದ್ದಂತ ಎದೆಯನ್ನು ಪವಿತ್ರ ಮಾಡಿಕೊಂಡು ಲಕ್ಷ್ಮೀಯನ್ನು ಹೃದಯ ದಲ್ಲಿ ಸೇರಿಸಿಕೊಂಡ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ. ನಮ್ಮ ವೆಂಕಟರಮಣ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ.

36. ತ್ರೇತಾಯುಗದಲ್ಲಿ ವಿಷ್ಣು ಭಕ್ತಳಾಗಿ ಸಹಕರಿಸಿದ ಪದ್ಮಾವತಿ ಯನ್ನು ಎಡತೊಡೆಯ ಮೇಲೆ ಕೂರಿಸಿಕೊಂಡ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ

ನಮ್ಮ ವೆಂಕಟರಮಣ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ.

37. ತಾಯಿ ಬಕುಳಾಮಾತೆಯನ್ನು ತುಳಸಿ ಮಣಿಯಾಗಿ ಕೊರಳಲ್ಲಿ ಧರಿಸಿಕೊಂಡ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ, ನಮ್ಮ ವೆಂಕಟರಮಣ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ.

38. ಗೋವಿಂದ ರಾಜನಿಗೆ ಲಕ್ಷ್ಮೀ ರೇಖೆ ಇರಲು ಕುಬೇರನ ಸಾಲ ತೀರಿಸಲು ಅನುವಾದ ನೀಡಿದ್ದ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ, ನಮ್ಮ ವೆಂಕಟರಮಣ ಸ್ವಾಮಿಗೆಶೋಭಾನೆ ಹೇಳಿ ಬನ್ನಿರೆ.

39. ತಿರುಪತಿಗೆ ಬಂದೊಗುವ ಭಕ್ತರಿಗೆ ಅವರವರ ಬೇಡಿಕೆ ಪೂರೈಸಿ ಮುಡುಪೊತ್ತು ತಿರುಪತಿಗೆ ಮರಳಿ ಬರುವಂತೆ ಮಾಡಲು ಲಕ್ಷ್ಮೀಗೆ ಅನುವಾದ ನೀಡಿದ್ದ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ

ನಮ್ಮ ವೆಂಕಟರಮಣ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ.

40. ಲಕ್ಷ್ಮೀ ರೇಖೆ ಇದ್ದು ಹಣ ಅಳೆದು ಆಯಾಸವಾಗಿದ್ದ ಗೋವಿಂದ ಸ್ವಾಮಿಗೆ ವಿಶ್ರಾಂತಿಗಾಗಿ ಬೆಟ್ಟದಿಂದಿಳಿದು ಗೋವಿಂದ ಪಟ್ಟಣದಲ್ಲಿ ನಿದ್ದೆ ಮಾಡಲು ಅನುವಾದ ನೀಡಿದ್ದ ಸ್ವಾಮಿಗೆ ಶೋಭಾನೆ ಹೇಳಿ ಬನ್ನಿರೆ, ನಮ್ಮ ವೆಂಕಟರಮಣ ಸ್ವಾಮಿ ಶೋಭಾನೆ ಹೇಳಿ ಬನ್ನಿರೆ.

ಶೋಭಾನೆ ಹೇಳ ಬನ್ನಿರೆ, ನಮ್ಮ ವೆಂಕಟರಮಣ ಸ್ವಾಮಿಗೆ ಶೋಭಾನೆ ಹೇಳ ಬನ್ನಿರೆ, ನಮ್ಮ ಗೌಡರು, ಹರಿ ಸೇವೆ ನೋಡಿ ಬನ್ನಿರೆ ನಮ್ಮ ಗೌಡರ ಹರಿಸೇವೆ ನೋಡಿ ಬನ್ನಿರೆ.

ಪೂಜಾರೀರ ಗಣಪತಿ ಮಾದಪ್ಪ, ಅರ್ವತೋಕ್ಲು ಗ್ರಾಮ, ಮಡಿಕೇರಿ ತಾಲ್ಲೂಕು, ಕೊಡಗು ಜಿಲ್ಲೆ.

ಜೀನ್ಸ್ ಪ್ಯಾಂಟ್ ಹೇಗೆ ಹುಟ್ಟಿದ್ದು

ವಯಸ್ಸಿನ ವ್ಯತ್ಯಾಸವಿಲ್ಲದೆ ಸ್ತ್ರೀ ಪುರುಷರೆಲ್ಲರು ಧರಿಸುವ ಈ ಜೀನ್ಸ್ ಉಡುಗೆಯ ಹುಟ್ಟು ಹೇಗಾಯಿತು ಗೊತ್ತೆ?

1856 ರಲ್ಲಿ ತಿವಿ ಸ್ಟ್ರಾಸ್ ಎಂಬಾತ ಬವೇರಿಯಾದಿಂದ ನ್ಯೂಯಾರ್ಕ್‌ಗೆ ಪ್ರಯಾಣ ಮಾಡುತ್ತಿದ್ದರು. ಆಗ ಅವರಿಗೆ ಹಣದ ಅಡಚಣೆ ಆಯಿತು. ತಮ್ಮ ಬಳಿ ಇದ್ದ ಕ್ಯಾನ್‌ವಾಸ್ ಬಟ್ಟೆಯನ್ನು ಮಾರಾಟ ಮಾಡತೊಡಗಿದರು. ಆದರೆ ವ್ಯಾಪಾರ ನಡೆಯಲಿಲ್ಲ. ಎದೆಗುಂದಿದ ತಿವಿ ಕ್ಯಾಲಿಪೋರ್ನಿಯಾ ದಲ್ಲಿ ಚಿನ್ನದ ಗಣಿಯನ್ನು ತೊಡುವ ಕೆಲಸದಲ್ಲಿ ನಿರತರಾದರು. ಆಗ ಅವರ ಭಾಗ್ಯದ ಬಾಗಿಲು ತೆರೆಯಿತು. ಗಣಿ ಕೆಲಸದಲ್ಲಿ ತೊಡಗುವವರಿಗೆ ಬಹು ದಿನಗಳವರೆಗೆ ಬಾಳಿಕೆ ಬರುವ ಬಣ್ಣ ಮಾಸದ ಪ್ಯಾಂಟ್ ಅಗತ್ಯ. ಅದನ್ನು ಗ್ರಹಿಸಿದ ತಿವಿ ತಮ್ಮ ಹತ್ತಿರವಿದ್ದ ಕ್ಯಾನ್‌ವಾಸ್ ಬಟ್ಟೆಯಿಂದ ನಿಕ್ಕರ್ ಹೊಲಿಸಿ ಧರಿಸಿದರು. ಅವರು ಧರಿಸಿದ ನಿಕ್ಕರ್ ನೋಡಿ ಒಬ್ಬರನೊಬ್ಬರು ಹೊಲಿಸಿಕೊಂಡರು. ಈ ಕನಸನ್ನು ನನಸಾಗಿಸಿಕೊಳ್ಳಲು ತಿವಿ ಸಾನ್ ಫ್ರಾನ್ಸಿಸ್ಕೋ ಬಳಿ ಒಂದು ಜೀನ್ಸ್ ಮಾರಾಟ ಕೇಂದ್ರವನ್ನು ಸ್ಥಾಪಿಸಿದರು. ಈ ಬಟ್ಟೆಯಿಂದ ಹೊಲಿದ ಜೀನ್ಸ್‌ಗಳೇ ನಂತರ ಡೆನಿಮ್ ಎಂಬ ಹೆಸರಿನಲ್ಲಿ ಮಾರಾಟವಾದವು. 1872 ನಿವೇಡಾದ ಜೇಕಬ್ ಡೇವಿಸ್ ಎಂಬುವರು ಜೊತೆಗೂಡಿ ಪ್ಯಾಂಟಿಗೆ ತಾಮ್ರದ ಗುಂಡಿ ಹೊಲಿದು ಅಂದ ಹೆಚ್ಚಿಸಿದರು.

ಉರೋಳನ ಬೀನ, ಸುಬ್ಬಯ್ಯ. ಅವಂದೂರು.

ಮೂರು ಮಾತು

ಮೂರು ವಸ್ತು ಯಾರಿಗೂ ಕಾಯುವುದಿಲ್ಲ-

ಕಾಲ, ಸಾವು, ಗ್ರಾಹಕ

ಮೂರು ವಸ್ತು ಬದುಕಿನಲ್ಲಿ ಒಂದೇ ಬಾರಿ ಸಿಗುವುದು -

ಯೌವ್ವನ, ಮಾನವ ಜನ್ಮ, ತಾಯಿ ತಂದೆ

ಮೂರು ವಸ್ತು ಹೋದರೆ ಮತ್ತೆ ಬರುವುದಿಲ್ಲ-

ಮಾತು, ಪ್ರಾಣ, ಮಾನ

ಮೂರು ವಸ್ತುಗಳಿಂದ ದೂರವಿರಬೇಕು -

ಸ್ವಾರ್ಥ, ನಿಂದನೆ, ಕೆಟ್ಟ ಚಟಗಳು

ನಗೆಹನಿ

ಗುರುಗಳು : ಲೋ ಸುಬ್ಬ, ವಿಧಾನ ಸೌಧ ಎಲ್ಲಿದೆಯೋ

ಸುಬ್ಬ : ಅದು ಭೂಮಿ ಮೇಲೆ ಸಾರ್

ಗುರು (ಕೋಪದಿಂದ) : ನಿನ್ನ ತಲೆ

ಸುಬ್ಬ : ಕತ್ತಿನ ಮೇಲೆ ಸಾರ್

ಗುರು : ಅಯ್ಯೋ ರಾಮ

ಸುಬ್ಬ : ಅಯೋಧ್ಯೆಯಲ್ಲಿ ಸಾರ್

ಗುರು : ಏ ಮಂಗ

ಸುಬ್ಬ : ಮರದ ಮೇಲೆ ಸಾರ್

- ಕೆಟೋಳಿ ಡಚ್ಚನ ಬಾಬಿ, ಮೈಸೂರು.

ಊದುಕಡ್ಡಿ ಹತ್ತಿಸ್ಕೊಂಡು ಬಾ ಅಂದ್ರೆ ಊರೂರೇ ಹತ್ತಿಸಿದ್ನಂತೆ

ಪತ್ರ ವಿಭಾಗ -1

ಅಪ್ಪ ಅವ್ವನ ಗ್ಯಾನ ಬಾತ್

ಜಿ.ಪಿ. ಚಿನ್ನಯ್ಯಂದ ಕೊಡಗು ಸಂಗಾತಿಗೆ ನಮಸ್ಕಾರ:

ನಿಮ ಜ್ಞಾಪಕ ಪತ್ರ ಸಿಕ್ಕಿತ್. ಕಳ್ದ ತಿಂಗ ನೀವು ಬೆಂಗಳೂರಿಗೆ ಬನ್ನೇಂತಾ ಫೋನ್ ಮಾಡಿದೆರಿ. ಆದರೆ ಬಂದ ಹಾಗೆ ಕಾಂಬೊದಿಲ್ಲೆ. ಹಾಂಗಾಗಿ ಚಂದಾಹಣ ಕಳಿಸಿಕ್ಕೆ ನಿಧಾನ ಆತ್.

ನೀವು ಹುತಾತ್ಮ ಗುಡ್ಡೆಮನೆ ಅಪ್ಪಯ್ಯ ಗೌಡ ಮತ್ತೆ, ಮನೆಯವರ ವಿಚಾರ ಪುಸ್ತಕ ಬರ್ದೆನೆತ್ತೇಳಿರೀತ ಕೇಳಿ ಖುಷಿ ಆತ್. ನಿಮಗೆ ಬೇಕಾದ ಮಾಹಿತಿಗಳಿಗೆ ನಮ್ಮ ಮನೆ ರಮೇಶ ಸಹಾಯ ಮಾಡುತ್ತಾ ಉಟ್ಟುತ ಗೊತ್ತಾತ್. ನಂಗೆ ಗೊತ್ತಿರುವಂಗೆ ನಮ್ಮ ಮನೆಯವರೆಲ್ಲಾ ಬಡ ರೈತ ಕುಟುಂಬದವು. ಅಜ್ಜಜ್ಜನ ಕಾಲಲಿ ಕನ್ನಡ ಜಿಲ್ಲೆಂದ ಕೊಡಗಿಗೆ ಬಂದ್ ಅಲ್ಲಲ್ಲಿ ಗದ್ದೆ ತೋಟ ಮಾಡಿಕೊಂಡ್ ಇದ್ದೊ. ನಾನ್ ಸಣ್ಣವ, ಸ್ಕೂಲ್‌ಲಿ ಇರಕ್ಕನ ನಮ್ಮ ಹಿರಿಯವು ಅಪ್ಪಯ್ಯ ಗೌಡರ ವಿಚಾರ ಆಗಾಗ ಮಾತಾಡ್ತ ಇದ್ದೊ. ಹಂಗಾಗಿ ಕಂಡೆದೆ ನಮ್ಮ ಮನೇಲಿ ಹೆಚ್ಚಿನ ಜನ ಮಿಲಿಟರಿ, ಪೋಲಿಸ್ ಮತ್ತೆ ಅಲ್ಲಿ ಇಲ್ಲಿ ಸಿಕ್ಕಿದ ಚಾಕರಿ ಮಾಡುತ್ತಾವಳೊ. ಮಕ್ಕಳಿಗೆ ವಿದ್ಯೇಲ್ ಮೇಲಕ್ಕೆ ಬರಕೂತ ಪ್ರೋತ್ಸಾಹ ಕೊಡುತ್ತಾ ಬಂದಂಗೆ ಕಂಡದೆ. ಹಾಂಗೆ ವಿದ್ಯೆಯಲ್ಲಿ ಮುಂದುವರಿತ್ತಾ ಹೊರ ದೇಶಲಿ ಕೂಡ ನಮ್ಮ ಮನೆಯವು ವಾಸವಾಗಿವಳೊ. ಈಚೆಗೆ ನಾನ್ ಕೂಡ ಹೊರ ದೇಶಕ್ಕೆ ಹೋಗಿ ಬಾದು ಆತ್. ಕಳೆದ ಸಲ ಅಮೇರಿಕಾಕ್ಕೆ ಹೋಗಿರ್ಕನ ವರ್ಜೀನಿಯಲಿ ಒಕ್ಕಲಿಗರ ಪರಿಷತ್‌ಗೆ ಹೋಗಿ ಸುಮಾರ್ ನಮ್ಮ ಜನ ಅಲ್ಲಿರುದು ನೋಡಿ ತುಂಬಾ ಖುಷಿ ಆತ್. ಅಲ್ಲಿ ಕೂಡ್ದ ಒಕ್ಕಲಿಗರ ಪರಿಷತ್ ಸಭೆಲಿ ನಾನ್ ಮಾಡ್ದ ಭಾಷಣ, ಮತ್ತೆ ನಮ್ಮ ಮನೆ ರಾಘವ ಗೌಡ ಮಾಡ್ದ ಭಾಷಣ ಮತ್ತೆ ಓದಿದ ಪದ್ಯಗಳ ಕಳಿಸೋಳೆ. ಇದ್ ನಿಮಗೆ ಉಪಯೋಗ ಆದ್‌ತ್ತ ನನ್ನ ಭಾವನೆ.

ನನ್ನ ಅರೆಭಾಷೆ ಅಷ್ಟ್ ಸರಿ ಇಲ್ಲಂತ ಕಂಡದೆ. ಆದರೆ ಅವ್ವ ಹೇಳಿ ಕೊಟ್ಟ ಭಾಷೆ ಊರು ಬಿಟ್ಟಮೇಲೆ ನಮ್ಮವು ಸಿಕ್ಕಿ ಅವರ ಹತ್ರ ಮಾತಾಡ್ದು, ಅಥವಾ ಬರೆದು ಒಂದು ಖುಷಿ. ಹಂಗೆ ನೀವು ಕೊಡಗು ಸಂಗಾತಿ ಸಂಪುಟ 7 ಸಂಚಿಕೆ 6 ರಲ್ಲಿ 'ಓರ್ವ ಉತ್ತಮ ತಾಯಿ ಸಾವಿರ ಉಪಾಧ್ಯಾಯರುಗಳಿಗೆ ಸಮ' ಅಂತ ಓದ್ಕನ ಅಮ್ಮನ ನೆನಪಾತ್. ನನ್ನ ಅಮ್ಮ ಬೇಸಿಗೆಲಿ ಮಾಡುತ್ತಿದ್ದ ಕುಶಲಕ್ಕಿ ಗಂಜಿ, ಜೊತೆಗೆ ಉಪ್ಪು ಮೀನ್‌ಗ್ಯಾನ ಮಾಡಿರೆ ಈಗ್ಲೂ ನಂಗೆ ಬಾಯ್ಲಿ ನೀರ್ ಬಂದೆ. ಮತ್ತೆ ಹೇಳ್‌ತ್ತ್ ಹೆಚ್ಚ್ ಮಾತಾಡದೆ ಅಭ್ಯಾಸ ಮಾಡ್‌ತ. ಮಾತ್ ಉಟ್ಟಲೆ ಮುತ್ತಿನಂಗೆ ಇರೋಕು ತಾ ಗಾದೆ ಉಟ್ಟು, "ಮಾತ್ ಆಡಿದರೆ ಹೋತ್ ಮುತ್ತು ಒಡೆದರೆ ಹೋತ್. ಅವ್ವ ಅಪ್ಪನ ನೆನಪಿಗೆ ಅರೆ ಭಾಶೆಲಿ ಒಂದೆರಡ್ ಲೈನ್‌ಬರ್ದೆ. ನಿಮ್ಮ ಟೈಂ ನಾನ್ ಕಳ್ದೆಂತ ತಿಳ್‌ಕಬೇಡಿ. ನಿಮಗೆ ಒಳ್ಳೆದಾಗಲಿ.

-ಗುಡ್ಡೇರ ಚಿನ್ನಯ್ಯ, ಅಧ್ಯಕ್ಷರು, ಕೊ. ಎಜುಕೇಷನ್, ಬೆಂಗಳೂರು.

ಮೂಲ ಸಂಖ್ಯೆ ಎಂದರೇನು?

ಒಂದಕ್ಕಿಂತ ಹೆಚ್ಚಾಗಿರುವ ಮತ್ತು ಅದೇ ಸಂಖ್ಯೆಯಿಂದ ಮಾತ್ರ ಭಾಗಿಸಬಹುದಾದ ಸಂಖ್ಯೆಯನ್ನು ಮೂಲ ಸಂಖ್ಯೆ ಎನ್ನುತ್ತೇವೆ. ಇಂತಹ ಸಂಖ್ಯೆ ಅದೇ ಸಂಖ್ಯೆಯಿಂದ ಅಥವಾ ಒಂದರಿಂದ ಮಾತ್ರ ಭಾಗಿಸಲ್ಪಡುತ್ತದೆ. ಬೇರಾವ ಸಂಖ್ಯೆಯಿಂದಲೂ ಅದನ್ನು ಭಾಗಿಸಲು ಸಾಧ್ಯವಿಲ್ಲ. ಉದಾಹರಣೆಗೆ 2, 3, 5, 7, 11, 13, 17, 19, 23........ ಈ ಸಂಖ್ಯೆಗಳನ್ನು ಭಾಗಿಸಲು ಸಾಧ್ಯವಿಲ್ಲ.

ಈ ಮೂಲ ಅಂಕಗಳು, ಗಣಿತದಲ್ಲಿ ತುಂಬಾ ಸ್ವಾರಸ್ಯವನ್ನು ಹುಟ್ಟಿಸಿವೆ. ಇವು ಸಂಖ್ಯಾ ಶಾಸ್ತ್ರಜ್ಞರ ಕುತೂಹಲವನ್ನು ಕೆರಳಿಸಿವೆ. ಉದಾಹರಣೆಗೆ 17, 23, 29, 41 ಈ ಸಂಖ್ಯೆಗಳನ್ನು ತೆಗೆದುಕೊಳ್ಳಿ. ನೀವು ಇದೇ ಕ್ರಮದಲ್ಲಿ ನಿಮಗೆ ಇಷ್ಟ ಬಂದಷ್ಟು ಸಂಖ್ಯೆಯವರೆಗೆ ತೆಗೆದುಕೊಳ್ಳಬಹುದು. ಇವುಗಳಲ್ಲಿ ಯಾವುದೇ ಮೂಲ ಸಂಖ್ಯೆಯನ್ನಾಗಲಿ, ಇನ್ನೊಂದು ಸಂಖ್ಯೆಯಿಂದ ನೀವು ಭಾಗಿಸಲಾರಿರಿ. ಎಷ್ಟೋ ಶತಮಾನಗಳಿಂದ ವಿಶ್ವದ ಅತ್ಯಂತ ದೊಡ್ಡ ಗಣಿತ ಶಾಸ್ತ್ರಜ್ಞರು ಈ ಮೂಲ ಸಂಖ್ಯೆಗಳನ್ನು ಬೇರೆ ಸಂಖ್ಯೆಗಳಿಂದ ಭಾಗಿಸಲು ಪ್ರಯತ್ನ ಮಾಡಿದ್ದಾರೆ. ಆದರೆ ಅವರ ಪ್ರಯತ್ನ ಸಫಲವಾಗಿಲ್ಲ. ಇಂತಹುದೇ ಬೇರೆ ಸಂಖ್ಯೆಗಳಿವೆ ಎಂಬುದನ್ನು ಸಿದ್ಧಪಡಿಸಲು ಸಹ ಅವರು ಅಸಮರ್ಥರಾಗಿದ್ದಾರೆ.

ಒಂದಕ್ಕಿಂತ ಹೆಚ್ಚು ಪ್ರತಿಯೊಂದು ಪೂರ್ಣಾಂಕವನ್ನು ಮೂಲ ಸಂಖ್ಯೆಗಳ ಒಂದೇ ಒಂದು ಗುಂಪಿನ ಗುಣಲಬ್ಧವೆಂದು ಹೇಳಬಹುದು. ಕ್ರಿ. ಪೂ. 300ರಿಂದೀಚೆಗೆ ಈ ಮೂಲ ಸಂಖ್ಯೆಗಳನ್ನು ಗುರುತಿಸಲಾಗಿದ್ದರೂ,ಈ ಸಂಖ್ಯೆಗಳ ಬಗ್ಗೆ ಯಾಕ್ಲಿಡ್ ಮತ್ತು ಎರಾತೋಸ್ತನಾಸ್ ಎಂಬ ಗ್ರೀಕ್ ಗಣಿತ ಶಾಸ್ತ್ರಜ್ಞರು ಅಧ್ಯಯನ ನಡೆಸಿದರು. ಈ ಸಂಖ್ಯೆಗಳ ಬಗ್ಗೆ ಇನ್ನು ಕೆಲವು ಪ್ರಶ್ನೆಗಳು ಅಪರಿಹಾಸ್ಯವಾಗಿಯೇ ಉಳಿದಿದೆ.

ಮೂಲ ಸಂಖ್ಯೆಗಳಿಗೆ ಮಿತಿಯೇ ಇಲ್ಲ. ಈ ಮೂಲ ಸಂಖ್ಯೆಗಳ ನಡುವೆ ಇರುವ ಅಂತರಕ್ಕೆ ಸಂಬಂಧಿಸಿದ ಸಮರ್ಪಕ ನಿಯಮವೊಂದನ್ನು ರೂಪಿಸಲು ಸಿದ್ಧಾಂತಗಳಿಗೆ ಇನ್ನೂ ಸಾಧ್ಯವಾಗಿಲ್ಲ. ಅಂತೂ ಇದು ಇನ್ನೂ ನಿಗೂಢ ರಹಸ್ಯವಾಗಿಯೇ ಉಳಿದಿದೆ.

- ಕೂಡಕಂಡಿ ಅನಿತಾ ನಂಜುಂಡ, ಚೇರಂಬಾಣೆ.

ನಮ್ಮ ಭಾಷೆಯನ್ನು ರಕ್ಷಿಸುವವನು
- ಸುಸಂಸ್ಕೃತನು

ತನ್ನ ಸಂಸ್ಕೃತಿಯನ್ನು ಬಿಡದವನು
- ಉತ್ತಮನು

ತನ್ನ ಆಚಾರ ವಿಚಾರವನ್ನು ಪಾಲಿಸುವವನು
- ಸಾಮಾನ್ಯನು

ತನ್ನ ಪದ್ಧತಿ ಕಟ್ಟುಕಟ್ಟಲೆ ಮೀರುವವನು
- ಅಧಮನು

ಆದ್ದರಿಂದಲೇ ಇವುಗಳನ್ನು ಪಾಲಿಸುತ್ತಾ **- ಮುನ್ನಡೆಯಿರಿ.**

ದೇಶವನ್ನು ಆಳು ಅಂದ್ರೆ ದೇಶವನ್ನೇ ನುಂಗಿದ್ನಂತೆ

ಬಾಲ ಸಂಗಾತಿ ವಿಭಾಗ : ಕಥೆ -14

ದುರಾಸೆಯ ಫಲ

ಒಂದು ಊರ್‌ಲಿ ಮುತ್ತಪ್ಪಂತ್ತೇಳುವ ಒಬ್ಬ ರೈತ ಇತ್ತ್. ಅಂವ ತನಿಗೆ ಪಿತ್ರಾರ್ಜಿತ ಆಗಿ ಬಂದ ಗದ್ದೆ ತೋಟನ ಊರ್ಜಿತ ಮಾಡಿಕಂಡ್ ಜೀವನ ನಡ್‌ಸ್ತಿತ್. ಅವಂಗೆ ಇಬ್ಬರು ಗಂಡ್ ಮಕ್ಕ ಇದ್ದೊ. ಮಕ್ಕಳಿಗೆ ರಾಮ ಲಕ್ಷ್ಮಣತ ಹೆಸ್ರ್ ಮಡ್‌ಗಿತ್. ತನ್ನ ಮಕ್ಕ ರಾಮ ಲಕ್ಷ್ಮಣರಂಗೆ ಪ್ರೀತಿಲಿ ಒಟ್ಟಾಗಿ ಬಾಳಲಿತ ಅಪ್ಪನ ಆಶೆ. ಮಕ್ಕಳೂ ಅದೇ ರೀತಿ ಬೆಳ್ದ್ ದೊಡ್ಡವು ಆದೊ. ಮುತ್ತಪ್ಪ ಇಬ್ಬರಿಗೂ ಮದುವೆ ಮಾಡ್ಸಿತ್. ಮೊಮ್ಮಕ್ಕ ಸನ ಆದೊ.

ಒಂದು ದಿನ ಮುತ್ತಪ್ಪನ ಹೆಣ್ಣ್ ಯಾವುದೋ ಖಾಯಿಲೆ ಬಂದ್ ಸ್ವಲ್ಪ ದಿನ ಹಾಸಿಗೆ ಹಿಡ್ದ್ ಸತ್ತ್‌ಹೋತ್. ಅದೇ ಕೊರ್‌ಗ್‌ಲಿ ಮುತ್ತಪ್ಪನೂ ಹಾಸಿಗೆ ಹಿಡ್ತ್. ತನ್ನ ಮಕ್ಕ ಸಾಕ್ಷಾತ್ ರಾಮಲಕ್ಷ್ಮಣರಂಗೇ ಇರುದರ್ನ ನೋಡಿ ಮುತ್ತಪ್ಪಂಗೆ ಆಸ್ತಿನ ಪಾಲ್ ಮಾಡುವ ಚಿಂತೆನೇ ಬಾತ್‌ಲೆ. ಒಂದು ದಿನ ಬೆಳಿಗ್ಗೆ ಮಕ್ಕಳ ಕೈಲಿ ಸ್ವಲ್ಪ ನೀರ್ ಹನಿಸಿಕಂಡ್ ಪ್ರಾಣ ಬಿಟ್ಟಿತ್.

ಹುಟ್ಟುಕನ ಅಣ್ಣ ತಮ್ಮಂದಿರ ಬೆಳೆಕಾಕನ ದಾಯಾದಿಗತ ಗಾದೆ ಉಟ್ಟು. ಅಪ್ಪ ಸತ್ತ್ ತಿಥಿ ಕರ್ಮ ಮುಗ್‌ದಂಗೆ, ಹೆಣ್ಣ್‌ನ ಕೈಲಿ ಕಿವಿಗೆ ಊದಿಸಿಕಂಡ್ ತಮ್ಮ ಪಾಲ್ ವಿಷಯನ ಅಣ್ಣನ ಎದ್‌ರ್ ಎತ್ತಿತ್ ಲಕ್ಷ್ಮಣ. ರಾಮ ಒಂದು ಮಾತ್ ಆಡದೆ ಆಶ್ಚರ್ಯಲಿ ಕಣ್ಣ್ ಅಗಲ ಮಾಡ್ತ್. ತಮ್ಮನ ಖುಷಿಗೆ ಅಡ್ಡ ಬಾರದೆ ಪಾಲಿಗೆ ಒಪ್ಪಿತ್. ಅಣ್ಣ ಒಪ್ಪಿಗೆ ಕೊಟ್ಟ ತಕ್ಷಣ ತಮ್ಮನೂ ಅವನ ಹೆಣ್ಣ್‌ನೂ ಒಳ್ಳೊಳ್ಳೆ ದೊಡ್ಡ ದೊಡ್ಡ ಪಾತ್ರೆ ಪಗಡ ಸಾಮಾನ್‌ಗಳ್‌ನ್ನೆಲ್ಲಾ ತಾವು ತಕಂಡ್, ಹಾಳ್ ಮೂಳ್‌ನೆಲ್ಲಾ, ಅಣ್ಣಂಗೆ ಮಡ್ಗಿದೊ. ಅಪ್ಪ ಕಟ್ಟಿಸಿದ ಹೊಸ ಮನೆನ ತಾನ್ ಇಟ್ಟ್‌ಕಂಡ್, ಹಿರಿಯರ್ ಬಾಳ್ದ ಮನೆತೇಳಿ ಹಳೆ ಮನೆನ ರಾಮಂಗೆತ ಹೇಳ್ದೊ. ಗದ್ದೆ ತೋಟಲೂ ಇದೇ ತರ ಮಾಡ್ದೊ. ರಾಮನ ಪಾಲಿಗೆ ಬಂದ ಗದ್ದೆ ಮಧ್ಯಲಿ ಒಂದು ದೊಡ್ಡ ಹಾಸುಕಲ್ಲ್ ಇದ್ದ್ ಕಾಲ್‌ಭಾಗ ಜಮೀನ್‌ನ ನುಂಗಿ ಹಾಕಿತ್. ರಾಮಣ್ಣ ಹೆಂಗೋ ಕಷ್ಟ ಪಟ್ಟ್ ದುಡ್ದ್ ಜೀವನ ಬಹಳ ಕಷ್ಟಲಿ ನಡ್‌ಸ್ತಿತ್. ಒಂದು ದಿನ ದೊಡ್ಡ ಮಂಜ ಕಾಲೇಜ್ ಓದಕುತ್ತೇಳ್‌ಕನ, ಇವುಕೆ ಕಳ್ಸುವ ಶಕ್ತಿ ಇತ್ತ್‌ಲೆ. ರಾಮ ಹೊಲದತ್ರ ಹೋಗಿ ಒಂದು ಮರದ ನೆರಳ್‌ಲಿ ಕುದ್ದತ್. ಕಣ್ಣ್‌ಲಿ ನಾಲ್ಕ್ ಹನಿ ನೀರೂ ಬಾತ್. ಆಗ ಬೇಸಿಗೆ ಅದ್ದರಿಂದ್ ಬಿಸಿಲಿಗೆ ಕಾದ್ ಹಾಲುಗಲ್ಲ್ ಸಿಡ್ದ್ ಚೂರಾತ್. ಆಗ ಮರದಡಿಲಿ ಕುದ್ದಿದ್ದ ರಾಮಂಗೆ ಅಲ್ಲೆ ಎಂತದೂ ಥಳಪಳತ್ತ ಹೊಳ್‌ದದ್ ಕಂಡತ್. ಹತ್ರ ಹೋಗಿ ನೋಡ್ರೆ ಚಿನ್ನದ ನಾಣ್ಯ ತುಂಬಿದ ದೊಡ್ಡ ಮಡಿಕೆ ಕಂಡತ್. ರಾಮ ಅದನ್ನ ಮನೆಗೆ ತಕಂಡ್ ಹೋಗಿ ಆಮೇಲೆ ಸರಕಾರಕ್ಕೆ ಒಪ್ಪಿಸಿತ್. ಸರಕಾರ ರಾಮಂಗೆ ಅರ್ಧಬೆಲೆಯ ಹಣ ಕೊಟ್ಟೊ. ರಾಮ ತನ್ನ ಮಕ್ಕಳ ಚೆನ್ನಾಗಿ ಓದಿಸಿತ್. ಇನ್ನಷ್ಟ್ ಆಸ್ತಿ ತಕಂಡ್ ಲಕ್ಷ್ಮಣಂಗೂ ಕೊಡ್ಸಿತ್. ಹಳೆಮನೆನ ಕೆಡಿಸಿ ಹೊಸ ಮನೆ ಕಟ್ಟಿತ್. ತಮ್ಮ ನಾಚಿಕೆಲಿ ತಲೆ ತಗ್ಗಿಸಿತ್.

ಇದ್‌ಕ್ಕೆ ಹೇಳ್ದು ದೊಡ್ಡವರ ದೊಡ್ಡ ಗುಣತ.

ಮುಂದ್‌ವರ್ದದೆ.

ಬಾಲ ಸಂಗಾತಿ ವಿಭಾಗ : ಜ್ಞಾನ -14

ಶಾಲೆಲಿ ಹೇಳಿಕೊಟ್ಟದ್ದೆಲ್ಲಾ ನಿಜ ಅಲ್ಲ

ಭಾರತೀಯ ಕಾಲಗಣನೆ

ಭಾರತ ಅತ್ಯಂತ ಪ್ರಾಚೀನ ದೇಶ ಹೆಂಗೋ ಹಂಗೇ ಇದರ ಸಂಸ್ಕೃತಿ, ಶಾಸ್ತ್ರ ಪರಂಪರೆ, ವೈಜ್ಞಾನಿಕ ಪರಂಪರೆ ಮೊದಲಾದವು ಕೂಡ ಅತಿ ಪ್ರಾಚೀನವಾದವುಗಳೇ. ಭಾರತೀಯ ಕಾಲಗಣನೆನೂ ಇದಕ್ಕೆಹೊರತಾಗಿಲ್ಲೆ. ಇದ್ ಅತ್ಯಂತ ಪ್ರಾಚೀನ ಹಾಗೂ ಸೂಕ್ಷ್ಮ ರೀತಿಂದ ರೂಪಿಸಲ್ಪಟ್ಟದ್. ಇಂದ್ ಪಾಶ್ಚಾತ್ಯರ ಕಾಲಗಣನಾ ಪದ್ಧತಿಯೆ ಬಳಸಲ್ಪಟ್ಟಿದೆಯಾದರೂ ಶಾಸ್ತ್ರ ಶುದ್ಧತೆ, ಸೂಕ್ಷ್ಮತೆ ಹಾಗೂ ನಿಖರತೆಯ ದೃಷ್ಟಿಂದ ಭಾರತೀಯ ಕಾಲಗಣನಾ ಕ್ರಮ ತುಂಬಾ ವೈಜ್ಞಾನಿಕ ನಾವು ಧಾರಾಳವಾಗಿ ಹೇಳಕ್.

ಪೃಥ್ವಿ ಮುಂತಾದವು ಕಾರ್ಯ ರೂಪಗ. ಇವುಗಳ ಸೂಕ್ಷ್ಮ ರೂಪವೇ ಪರಮಾಣು. ಯಾವುದರ ವಿಭಾಗ ಸಾಧ್ಯನೇ ಇಲ್ಲೆಯೋ ಯಾವುದು ಬೇರೆ ಜಾತಿಯ ಪರಮಾಣುವಿನೊಟ್ಟಿಗೆ ಸೇರುದುಲೆಯೋ ಅದರ್ನ "ಪರಮಾಣು" ತೇಳ್ದು. ಇವೇ ಪರಮಾಣುಗ ಪೃಥ್ವ್ಯಾದಿ ಕಾರ್ಯ ರೂಪಲಿ ಕಂಡವೆ. ಈ ಸಮುದಾಯ ಪರಮ (ಮಹಾನ್) ಎನಿಸಿಕಂಡದೆ. ಇದೇ ರೀತಿ ಅವ್ಯಕ್ತಸ್ವರೂಪ ಇರುವ ಕಾಲಕ್ಕೂ ಸ್ಥೂಲತೆ ಸೂಕ್ಷ್ಮತೆ ಇರುದರ್ನ ಊಹಿಸಕ್. ಪರಮಾಣುನಂಗೆ ಸೂಕ್ಷ್ಮ ರೂಪಲಿ ಹರ್‌ಡಿರುವ ಭಾಗನ ಸೂಕ್ಷ್ಮ ಕಾಲತ್ತೇಳಕ್. ಸೃಷ್ಟಿಯಿಂದೊಡಗೂಡಿ ಪ್ರಳಯದವರೆಗೆ ಎಲ್ಲಾ ಅವಸ್ಥೆಗಳ್ಲಿ ತೋರಿ ಬರುದನ್ನ ಪರಮ (ಮಹಾನ್)ತ ಹೇಳಕ್.

ಎರಡ್ ಪರಮಾಣ್‌ಗಳಿಂದ ಒಂದು ಅಣು. ಮೂರು ಅಣುಗಳಿಗೆ ಒಂದು ತ್ರಸರೇಣು. ಈ ತ್ರಸರೇಣುನ ಕಿಡ್‌ಕಿಲಿ ಹಾದ್ ಬರ್ವ ಸೂರ್ಯ ಕಿರಣಗಳ ಮಧ್ಯೆ ಓಡಾಡುತ್ತಿರ್ವ ಕಣಗಳ ರೂಪಲಿ ನೋಡಕ್. ಇಂತ ಮೂರ್ ತ್ರಸರೇಣುಗಳ್ನ ದಾಟಿಕೆ ಸೂರ್ಯ ತಕಣುವ ಕಾಲವೇ "ತ್ರುಟಿ". ನೂರು ತ್ರುಟಿಗಳಿಗೆ ಒಂದು "ವೇಧ' ಮೂರು ವೇಧಗಳಿಗೆ ಒಂದು "ಲವ" ಮೂರು ಲವಗಳಿಗೆ ಒಂದು "ನಿಮೇಷ", ಮೂರು ನಿಮೇಷಗಳಿಗೆ ಒಂದು "ಕ್ಷಣ". ಐದು ಕ್ಷಣಗಳಿಗೆ ಒಂದು "ಕಾಷ್ಠಾ". ಹದಿನೈದು ಕಾಷ್ಠಗಳಿಗೆ ಒಂದು "ಲಘು". ಹದಿನೈದು ಲಘುಗಳಿಗೆ ಒಂದು ನಾಡಿಕಾ" ಎರಡು ನಾಡಿಕೆಗಳಿಗೆ ಒಂದು "ಮೂಹೂರ್ತ". ದಿನದ ವೃದ್ಧಿ-ಕ್ಷಯಗಳ್ನ ಆದರಿಸಿ (ದಿನ-ರಾತ್ರಿಗಳ ಎರಡ್ ಸಂಧಿಕಾಲಗಳಿಗೆ ಸಂಬಂಧಿಸಿದ ಎರಡ್ ಮುಹೂರ್ತ ಬಿಟ್ಟ್) ಆರ್ ಅಥವಾ ಏಳ್ ನಾಡಿಕಾಗಳಿಗೆ ಒಂದು "ಪ್ರಹರ".

- ಬಿಟ್ಟೀರ ಚೊದಮ್ಮ ಶಂಭು.

ಸುಂದರಿ ಆಂಟಿ

ಇನ್‌ಸ್ಪೆಕ್ಟರ್ ದಾಸ್ ಬಾರೀ ಲಂಚಕೋರ. ಯಾರಾರ್ ಪಾಪದವು ಸಿಕ್ಕಿರೆ ಸಾಕ್‌ತೇಳಿ ಕಾಯ್ತಾ ಇದ್ದದೆ ದುಡ್ಡ್ ಕೇಳಿಕೆ. ಇಂತವನ ಕೈಗೆ ಒಂದ್ ಸಲ ನಮ್ಮ ಸುಂದರಿ ಆಂಟಿ ಸಿಕ್ಕಿ ಹಾಕಿಕಂಡ ಘಟನೆ ಹೇಳ್‌ನೆ ಕೇಳಿ.

ಅಂದ್ ಸುಂದರಿ ಆಂಟಿದ್ ಅದೃಷ್ಟ ಸರಿ ಇತ್ತ್‌ಲೇತ ಕಂಡದೆ. ಆಂಟಿ ಪಾಸ್ಟ್ ಆಗಿ ಕಾರ್ ಓಡಿಸಿಕಂಡ್ ಬಾಕಾಕನ ಸಿಕ್ಕಿ ಹಾಕಿಕಂಡರೆ ಈ ದಾಸ್‌ನ ಹತ್ರ ಕಾರ್‌ನ ತಡ್ದ್ ನಿಲ್ಲಿಸಿ ದಾಸ್ ಹತ್ರ ಬಂದ್ ಇಣುಕಿ ನೋಡ್ತ್. ಆಂಟಿ ಸಣ್ಣದಕ್ಕೆಲ್ಲಾ ಹೆದ್‌ರವಳಲ್ಲ. " ಎಂತಕೆ ನಿಲ್ಲಿಸಿದ್ರಿ?" ತೇಳಿ ದಾಸ್‌ನ ಕೇಳ್ತ್.

ದಾಸ್ : ಎಂತಕೆನಾ? ಇಷ್ಟ್ ಸ್ಪೀಡ್‌ಲಿ ಗಾಡಿ ಓಡಿಸ್ತಾ ಒಳರಿ. ಕಣಿ ಬೇರೆ ಕೇಳ್ತಾ ಒಳ್ರಿಯಾ? ಎಲ್ಲಿ ನಿಮ್ಮ ಡ್ರೈವಿಂಗ್ ಲೈಸೆನ್ಸ್ ಕೊಡಿ.

ಆಂಟಿ : ಓಹೋ, ಡ್ರೈವಿಂಗ್ ಲೈಸೆನ್ಸ್ ನನ್ನತ್ರ ಇಲ್ಲೆ ಅಲಾ.

ದಾಸ್ : (ಮನಸ್‌ಲೇ ಖುಷಿ ಪಟ್ಟ್‌ಕಂಡ್) ಓ..ಡ್ರೈವಿಂಗ್ ಲೈಸೆನ್ಸ್ ಇಲ್ಲದೆ ಗಾಡಿ ಹಿಂಗೆ ಸ್ಪೀಡ್‌ಲಿ ಓಡಿಸ್ತಾ ಒಳೀ?

ಆಂಟಿ : ನಾಲ್ಕನೇ ಸರ್ತಿ ಕಳ್ಳ್ ಕುಡ್ದ್‌ಗಾಡಿ ಓಡಿಸಿ ಸಿಕ್ಕಿ ಹಾಕಿ ಕಂಡ್ ಬುಟ್ಟೆ. ನನ್ನ ಲೈಸೇನ್ಸ್ ನಿಮ್ಮ ಡಿಪಾರ್ಟ್ ಮೆಂಟ್‌ನವರ ಹತ್ರಾನೇ ಉಟ್ಟು.

ದಾಸ್ : I See ನಿಮ್ಮ ಗಾಡಿದ್ Registration ಪೇಪರ್ಸ್ ತೋರ್ಸಿ.

ಆಂಟಿ : ಅದ್ನ ತೋರ್ಸಿಕೆ ಆದುಲೆ.

ದಾಸ್ : ಯಾಕೆ?

ಆಂಟಿ : ಇದ್ ಕದ್ದ ಕಾರ್, Registration Papers ಎಲ್ಲಿಂದ ತರ್ಲಿ?

ದಾಸ್ : (ಆಶ್ಚರ್ಯ) ಕದ್ದ ಕಾರ?!

ಆಂಟಿ : ಹೌದು, ನಾನ್ ಕತ್ತಿ ತಕಂಡ್ ಈ ಕಾರ್‌ದ್ Ownerನ ತಲೆ ಕಡ್ದ್ ಹಾಕಿದೆ.

ದಾಸ್ ಮನ್‌ಸ್‌ಲೇ ಇವಳೆಲ್ಲೋ ಕುಡ್ದ್ ಹಿಂಗೆ ಮಾತಾಡ್‌ತಾ ಉಟ್ಟುತ ಗ್ಯಾನ ಮಾಡ್ತ್. ಅಂವ ಅವಳ ಮುಖನೇ ದಿಟ್ಟಿಸಿ ನೋಡಿಕಂಡ್ "ನೀವ್ ಎಂತ ಹೇಳ್ತಾವಳರಿತ ಗೊತ್ತುಟ್ಟಾ ನಿಮಿಗೆ? ತೇಳಿ ಕೇಳ್ತ್.

ಆಂಟಿ ಕೈ ಕಟ್ಟಿ ಕುದ್ದ್‌ಕಂಡ್ "ಹೆಣ ಡಿಕ್ಕಿಲಿ ಉಟ್ಟು. ಬೇಕರೆ ನೋಡಿಕಣಿ" ತೇಳ್ತ್. ಯಾಕೋ ದಾಸ್‌ಗೆ ಬೆವರ್ ಇಳಿಯಕೆ ಶುರು ಆತ್. ಇಷ್ಟ್ ಹೊತ್ತ್ ಯಾವುದೋ ಒಳ್ಳೇ ಬಕರಾ ಸಿಕ್ಕಿತ್‌ತೇಳಿ ಹಿಗ್ಗಿ ಹೀರೇಕಾಯಿ ಆಗಿದ್ದ ದಾಸ್‌ನ ಮುಖಲಿ ಈಗ ಗಾಭರಿ ಮೂಡ್ತ್. ಕಾರ್‌ದ ಕಿಡಕೆಲಿ ಮುಖ ತೂರ್ಸಿಕಂಡಿದ್ದಂವ ಮೂರು ಹೆಜ್ಜೆ ಹಿಂದೆಹೋಗಿ ನಿತ್ತ್‌ಕಂಡ್ Walkie-Talkie ಲಿ ಸಹಯಕ್ಕೆ ಕರ್ತ್. ಐದ್ ನಿಮಿಷದೊಳಗೆ, 5-6 ಜನ ಪೋಲೀಸ್ ಜೀಪ್‌ಲಿ ಬಂದ್ ಇಳ್ದೊ. ಒಬ್ಬ ಸೀನಿಯರ್ ಆಫೀಸರ್ ಆಂಟಿದ್ ಕಾರ್ ಹತ್ರ ಬಂದ್ "ಮೇಡಮ್ ದಯವಿಟ್ಟು ಕಾರಿಂದ ಕೆಳಗಿಳಿಯನಿ." ತೇಳಿ ಹೇಳ್ತ್. ಪೋಲೀಸ್‌ಗೆ ಕಾರ್‌ನ ಸುತ್ತ Rifle ಗಳ್ನ ಹಿಡ್ಕಂಡ್ ರೆಡಿಯಾಗಿ ನಿತ್ತಿದ್ದೊ. ಆಗ ಆಂಟಿ ಕಾರ್‌ದ ಕೆಳಗಿಳ್ದ್- "ಎಂತ ಇದೆಲ್ಲಾ? What is your problem Officer?"ತ್ತೇಳಿ ಎಂತ ಗೊತ್ತಿಲದವಳಂಗೆ ಕೇಳ್ತ್.

ಆಫೀಸರ್ : ನಮ್ಮ ಇನ್ಸೆಕ್ಟರ್ ದಾಸ್ ಹೇಳ್ತಾ ಉಟ್ಟು, ನೀವು ಈ ಕಾರ್‌ನ ಕದ್ದ್,ಅದ್ರ Ownerನ Murder ಮಾಡಿಯೊಳರಿ ಗಡ.

ಆಂಟಿ : ಕದ್ದ ಕಾರ? Murder ಲಿ? ಎಂತ ಹೇಳ್ತಾವಳ್ರಿ ನೀವು?

ಆಫೀಸರ್ : ಹೌದು ನಿಮ್ಮ ಕಾರ್‌ನ ಡಿಕ್ಕಿ Open ಮಾಡಿ ನೋಡ್‌ನೊ.

ಆಂಟಿ ವ್ಯಯ್ಯಾರಂದ ನಡಕಂಡ್ ಹೋಗಿ ಡಿಕ್ಕಿ ತೆಗ್ದ್ ತೋರ್ಸಿತ್. ಒಳಗೆ ಎಂತನೂ ಇತ್ತ್‌ಲೆ.

ಆಫೀಸರ್ : ಇದ್ ನಿಮ್ಮ ಸ್ವಂತ ಕಾರೇನಾ?

ಆಂಟಿ : ಹೌದು ಯಾಕೆ?

ಆಫೀಸರ್ : ಎಲ್ಲಿ, ನಿಮ್ಮ ಗಾಡಿದ್ Registration Papers ತೋರಿಸಿ.

ಆಂಟಿ : ಮತ್ತೆ ಕಾರ್‌ನೊಳಕ್ಕೆ ಕೈ ಹಾಕಿ Vanity Bag ಒಳಗೆಂದ Registration Papers ತೆಗ್ದ್ ತೋರ್ಸಿತ್. ಅಷ್ಟೊತ್ತಿಗೆ ದಾಸ್ ಗಾಭರಿಯಾಗಿ ಕಣ್ಣರಳಿಸಿಕಂಡ್ ನಿತ್ತ್‌ಕಂಡತ್.

ಆಫೀಸರ್ : (ದಾಸ್‌ನ ಸಿಟ್ಟ್‌ಲಿ ಒಂದ್ಸಲ ಮಲ್ತ್‌ಕಂಡ್ ನೋಡಿ) ಮೇಡಮ್ ನಮ್ಮ ಇನ್ಸೆಕ್ಟರ್ ದಾಸ್ ಹೇಳ್ತ್, ನಿಮ್ಮ ಹತ್ರ Driving Licence ಇಲ್ಲೆಂತಾ?

ಆಂಟಿ : Nonsence.....ಇಲ್ಲಿ ನೋಡಿ ನನ್ನ ಡ್ರೈವಿಂಗ್ ಲೆಸೆನ್ಸ್.

ಆಫೀಸರ್ ಆಂಟಿದ್ Driving Licence ಪರೀಕ್ಷೆ ಮಾಡ್ತ್. ಆಗ ಆಂಟಿ ಹೇಳ್ತ್.

"ಇನ್ನ್ ಎಂತೆಂತ ಹೇಳುಟ್ಟು ನಿಮ್ಮ ದಾಸ್? ನಾನ್ Rash ಆಗಿ Speed ಆಗಿ ಓಡಿಸ್ತಾ ಇದ್ದೆ ತಾನೂ ಹೇಳಿರ್ದು?!"

ಆಫೀಸರ್: ಹೌದು........ ಹೇಳಿತ್ತ್, ಸಾರಿ ಮೇಡಮ್ ಅಂವಂಗೆ ಯಾಕೋ ತಲೆ ಕೆಟ್ಟುಟುತಾ ಕಂಡದೆ. ನೀವು ಹೊರಡಿ ಮೇಡಮ್.

ಪಾಪ...ಇನ್ಸೆಕ್ಟರ್ ದಾಸ್‌ನ ಮುಖ ಕಮಂಟೆಕಾಯಿ ತಿಂದಂಗೆ ಆಗಿಹೋತ್.

-ಎಡಿಕೇರಿ ಸುದರ್ಶನ್, ಬೆಂಗಳೂರು.

ದೇಶ ಆಳುವ ಜನಕ್ಕೆ ಮೋಸತನ ನ್ಯಾಯವೇ

ಪುಟಾಣಿ ವಿಭಾಗ: ಪರಿವರ್ತನೆ ಮಾಡ್ದು ಸುಲಭ ಅಲ್ಲ

ಒಂದ್ ಊರಿಲಿ ಒಬ್ಬ ರಾಜ ಇತ್. ಅವಂಗೆ ಯಾವ್ದಕ್ಕೆ ಕೊರ್ತೆ ಇತ್ತ್ಲ್ಲೆ. ಸುಕ ಸಂತೋಸಂದ ಮನೇಲಿ ಕಾಲ ಕಳೆತಿತ್. ಅಂವ. ಮೈಗೆ ತುಂಬಾ ದುಡ್ಡು ಕೊಟ್ಟ ವಸ್ತ್‌ಗಳ್ನ ಹಾಕ್ತಿತ್. ಒಳ್ಳೆ ರುಚಿ ರುಚಿ ಊಟನೆ ಮಾಡ್‌ತಿತ್. ಅವಂಗೆ ಪ್ರಜೆಗಳ ಕಡೆ ಗಮನನೆ ಇತ್ತ್ಲ್ಲೆ. ಅಷ್ಟ್ ಸ್ವಾರ್ಥಿ ಆಗಿತ್ತ್ ಅಂವ. ಇದ್ರಂದ ಪ್ರಜೆಗ ಬಾಳ ಕಂಗಾಲಾಗಿದ್ದೊ.

ರಾಜದಾನಿಂದ ದೂರದ ಕಾಡ್ ಒಂದ್‌ಲಿ ಒಬ್ಬ ಸಾದ್ ಇತ್. ಅಂವ ಆಗಾಗ ಬಂದ್ ಪ್ರಜೆಗಳ ಕಂಡ್ ಕಷ್ಟ ಸುಖ ಮಾತಾಡಿಕಂಡ್ ಹೋತಿತ್. ಯಾರಿಂದನು ಏನ್ ಬಯಸ್‌ತ್ತಿತ್‌ಲ್ಲೆ. ವಳ್ಳ ಬುದ್ಧಿ ಮಾತ್‌ನ ಸಲಹೆ ಕೊಟ್ಟ್ ಹೊತಿತ್. ಅಂವನ ಹೆಚ್ಚಿನ ಕಾಲನ ಏಕಾಂತಲಿ ಕುಲದೇವ್ರು ವೆಂಕಟರಮಣನ ಗ್ಯಾನಲಿ ಇರ್ತಿತ್. ಇತ್ತ ಅಂವ ತುಂಬಾ ದಿನಂದ ಅತ್ತ ರಾಜದಾನಿ ಕಡೆಗೆ ಹೋಕೆ ಆತ್‌ಲ್ಲೆ.

ಕುಲದೇವ್ರು ವೆಂಕಟರಮಣನ ಗ್ಯಾನಲಿ ಮಗ್ನ ಆಗಿದ್ದ ಸಾಧುನ ಯಾರೋ ಕರ್ದಂಗೆ ಆತ್. ಸಾಧು ಕಂಣ್‌ತೆರ್. ಅಂವನ ಮುಂದೆ ರಾಜಧಾನಿ ಪ್ರಜೆಗ ಎಲ್ಲವುಸ ಕೈ ಜೋಡಿಸಿಕಂಡ್ ನಿಂತದ್ದ್ ಕಂಡತ್. ಅವು ಎಲ್ಲವೂ ಒಂದೆ ಸಮನೆ ಬೇಡಿಕಣ್‌ತ್ತಿದ್ದೊ. ಮಹಾತ್ಮರೇ ನಮ್ಮನ್ನಕಾಪಾಡಿ, ನಮ್ಮನ್ನು ಕಾಪಾಡಿ. ಮಹರಾಜ ಪ್ರಜೆಗಳ ಕಡೆ ಗಮನ ಹರ್‌ಸದೆ ನಮ್ಮ ಸ್ಥಿತಿಯೆಲ್ಲಾ ಅತಂತ್ರ ಆಗಿಟ್ಟು. ದಿಕ್ಕಿಲ್ಲದೆ ನಾವೆಲ್ಲ ಬಾಳ ಕಂಗಾಲಾಗ್ಯೊಲೊ. ನಮ್ಮನ್ನ ಕಾಪಾಡಿ.

ಸಾದ್ ಕುದ್ದಲ್ಲೆ ಕುದ್ದ್‌ಕಂಡ್ ಒಮ್ಮೆ ಕಣ್ಣ್ ಮುಚ್ಚಿ ತೆರ್. ಅವಂಗೆ ಬಾಳ ದುಃಖ ಆದೆ. ಪಾಪ, ರಾಜನ ಸ್ವಾರ್ಥ ಜೀವನಂದ ಇವುಕ್ಕೆ ಎಂತ ಕಷ್ಟ ಬಾತ್, ನಾಯಿಪಾಡ್ ಆತಲ್ಲತ ಮನ್‌ಸ್ಸಿಲಿ ಗ್ಯಾನ ಮಾಡಿ "ಹೆದ್ರ್‌ಬೇಡಿ" ನಾನೇ ಖುದ್ದ್ ಹೋಗಿ ರಾಜನೊಟ್ಟಿಗೆ ಈ ವಿಚಾರಿಲಿ ಮಾತಾಡ್ನೆ. ಅಂವನ ಮನಸ್ಸ್‌ನ ರಾಜ್ಯದ ಹಿತರಕ್ಷಣೆ ಕಡೆ ತಿರ್‌ಗಿಸಿಕೆ ಪ್ರಯತ್ನಿಸಿನೆತ ಸಾದ್ ಪ್ರಜೆಗಳಿಗೆ ಸಮಾಧಾನ ಹೇಳ್.

ಸಧ್ಯ ನೀವ್ ಅಷ್ಟ್ ಮಾಡಿರೆ ನವ್ಗ್‌ಳಿಗೆ ದೊಡ್ಡ ಉಪಕಾರ ಆದೆತ ಹೇಳ್ಯೊ. ಹಂಗನೆ ಮತ್ತೊಮ್ಮೆ ಕೈ ಜೋಡಿಸಿ, ಅಡ್ಡ ಬಿದ್ದ್ ಬೇಡಿಕಂಡೊ.

ಸಾದ್ ಜನಕ್ಕೆ ಧೈರ್ಯ ಹೇಳಿ ಬ್ಯಾಗ ಬ್ಯಾಗ ಅರಮನೆ ಕಡೆ ಹೋತ್. ದ್ವಾರಪಾಲಕ ಸಾದ್‌ಗೆ ಕೈ ಮುಗ್ದ್ ಒಳಗೆ ಹೋಕೆ ದಾರಿ ಬುಟ್ಟತ್. ಬಂದ ಕಾರಣನ ಹೇಳಿ ರಾಜನ ಕಾಂಬಕೆ ನಾನ್ ಬಂದ್ವಳೊ ಮತ್ತೆ ಬಂದ ವಿಷಯನ ತಿಳ್‌ಸ್‌ತ ಅವಂಗೆ ಹೇಳ್.

ಸಾದ್ ಬಂದ ವಿಷಯನ ತಿಳ್‌ದ್ ರಾಜನೆ ಸ್ವತಃ ಅರಮನೆ ಬಾಗಿಲಿಗೆ ಬಾತ್. ಅಂವನ್ನ ಆದರಂದ ಒಳಗೆ ಬಾಕೆ ಮಾಡಿ ಕುರ್ಚಿಲಿ ಕುದ್ದ್‌ರಿಸಿ ಬಂದ ಕಾರಣನ ವಿಚಾರಿಸಿತ್.

ಸಾದ್ ವಿನಯಂದ ಹೇಳ್-ರಾಜನೇ ನಾನ್ ತುಂಬಾ ದಿನಂದ ಇತ್ತ ಕಡೆ ಬಾಕೆ ಆತ್‌ಲ್ಲೆ. ಪುರುಸೊತ್ತು ಸಿಕ್ಕಿತ್ತ್ಲ್ಲೆ. ನಿನ್ನ ತಾತ್ಸಾರಂದ ನಿನ್ನ ಪ್ರಜೆಗಳಿಗೆಲ್ಲವುಕು ಬಾಳ ಬೇಜಾರ್ ಆಗುಟ್ಟು. ಅವರ ಸಂಕಷ್ಟಗಳ ಕಡೆಗೆ ನೀನ್ ಸ್ವಲ್ಪನೂ ಗಮನ ಹರಿಸುದಿಲ್ಲೆ. ಹಂಗಾಗಿ ನಾನ್ ನಿನ್ನ ಗಮನಕ್ಕೆ ತಾಕೆ ಇಲ್ಲಿಗೆ ಮುಟ್ಟ ಬಂದ್ವಳೆ.

ಆಗ ರಾಜ ಹೇಳ್- ಇಲ್ಲಿ ನನ್ನ ತಪ್ಪು ಎಂತದ್ ಉಟ್ಟು. ನಾನ್ ರಾಜನ ಕೆಲ್ಸ ಮಾಡ್ತವಳೆ. ಪ್ರಜೆಗ ಸಹ ಅವರವರ ಕೆಲಸ ಕಾರ್ಯಗಳನ್ನ ಅವು ಮಾಡಕ್ಕು. ಜನಂಗ ಸೋಮಾರಿಗ ಆಗಿ ಕೆಲಸ ಮಾಡದೆ ಕುದ್ದುಕಂಡ್ ತಿಂದರೆ ಜನಕ್ಕೆ ಖಜಾನೆಯ ಹಣವನ್ನೆ ಖಾಲಿ ಮಾಡಿಕೆ ಆದ್ಯೊಯಾ?

ಆಗ ಸಾದ್ ಹೇಳ್-ರಾಜನೇ, ಪ್ರಜೆಗ ಎಲ್ಲವು ಸೋಮಾರಿಗ ಅಲ್ಲ. ಸೋಮಾರಿಗ ಅಲ್ಲದವು ಸಹ ಕೆಲವು ಚಟಗಳಿಗೆ, ಸಂಕಷ್ಟಗಳಿಗೆ ವಿನಾ ಕಾರಣ ಗುರಿ ಆದವೆ. ಅವರೆಲ್ಲರ ಸಂಕಟ ನಿವಾರಣೆ ಬಗ್ಗೆ ಗಮನ ಹರ್‌ಸುದು ರಾಜನಾದ ನಿನ್ನ ಕರ್ತವ್ಯ ತಾನೇ?

ರಾಜಂಗೆ ತನ್ನ ಸ್ವಾರ್ಥತೆಂದ ಸಾದ್‌ನ ಮಾತ್ ಹಿಡಿಸ್‌ತ್ಲೆ. ಇದೆಂತಹ ಅರ್ಥವಿಲ್ಲದ ಮಾತ್, ನೀನ್ ಎಂತ ಮಾತಾಡ್ದು, ನಂಗೆ ಸ್ವಲ್ಪ ಸಹ ನಿನ್ನ ಮಾತ್ ಸರಿಕಾಂಬಲೆ. ನಿನ್ನ ಇಂತಹ ಮಾತ್ ಕೇಳಿಕ್ಕೆ ನಂಗೆ ಆದುಲ್ಲೆ.

ಹಂಗೆ ಹೇಳಿ ತಾತ್ಸಾರಂದ ಎದ್ದ್ ಹೊರ್ಟ್ ಹೋತು. ಸಾದ್‌ಗೆ ಬಾಳ ಬ್ಯಾಜಾರ ಆತ್. ಹಂಗಿದ್ದು ದುಃಖನ ತೋರಿಲಿಕಣದೆ ಅಲ್ಲಿಂದ ಎದ್ದ್ ಬಾತ್. ಬಾಕಾಕನ ಗ್ಯಾನ ಮಾಡ್. ಈ ರಾಜ ಸ್ವಾರ್ಥಿ ಮಾತ್ರ ಅಲ್ಲ ದುರಂಕಾರಿ ಸಹ ಆಗಿಟ್ಟು. ಇವಂಗೆ ಹಿಂಗೆಲ್ಲಾ ಬುದ್ಧಿ ಕಲ್ಸಿಕೆ ಆದುಲ್ಲೆ.

ಮಾರ್ನೆ ದಿನ ರಾಜ ಹಾಸಿಗೆಂದ ಎಳಿಕ್ಕೆ ಮೊದ್ಲೆ ರಾಜ ಭಟರ್ ಒಂದ್ ಕಾಗದನ ತಂದ್ ರಾಜಂಗೆ ತೋರ್ಸುವೆ. ತೋರ್ಸುತ್ತಿದ್ದಂಗೆ ಭಟರ ಕೈಗ ನಡ್‌ಗ್‌ತ್ತಿತ್. ಏಳ್‌ತ್ತ್‌ರ್‌ಕನೆ ಇದೆಂತಾ ಅಪಶಕುನತ ಗ್ಯಾನ ಮಾಡಿಕಂಡ್ ಅವರ ಮ್ಯಾಲೆ ಕೆಂಗೆಣ್ ಬುಟ್ಟತ್. ಅದರ್ಲಿ ಹಿಂದೆ ಬರೆದಿತ್. ಈ ದೇಶಲಿ ಇರ್‍ವ ರಾಜ ಸ್ವಾರ್ಥಿ ಅಲ್ಲ. ದುರಹಂಕಾರಿ ಸಹ ಹೌದು? ರಾಜ ಸ್ವಾರ್ಥಕ್ಕಾಗಿ ಸಿಂಹಾಸನ ಮ್ಯಾಲೆ ಕುದ್ದುಟ್ಟು, ಹೊರ್ತು ಜನ ರಕ್ಷಣೆಗಾಗಿ ಅಲ್ಲತ.

ಒಕ್ಕಸೆನ ಓದಿ ರಾಜ ಹಸಿದ ಹೆಬ್ಬುಲಿನಂಗೆ ಆತ್. ಇದನ್ನ ಯಾರ್ ಬರ್ದೊಳೊ ಅಂವನ್ನ ಸಾಯಂಕಾಲದ ಒಳಗೆ ತಂದ್ ನನ್ನ ಮುಂದೆ ನಿಲ್ಲಿಸಿ, ಇಲ್ಲೆದಿದ್ದರೆ ನಿಮ್ಮನ್ನ ಮೊದ್ಲು ಗಲ್ಲಿಗೇರಿಸಿ ಮತ್ತೆ ಅಂವನ ನಾನ್ ನೋಡಿಕಂಡನೆತಾ ಬಾಯಿ ಬುಡ್‌ದ್ ಕಂಡ್ ಅರಮನೆಲಿ ಅತ್ತಿತ್ತ ಓಡಾಡ್‌ತ್ತಿತ್.

ರಾಜ ಭಟರಿಗೆ ಒಂದ್ ಸಹ ಅರ್ಥ ಆತ್‌ಲ್ಲೆ. ಎಂತ ಮಾಡುಕ್ಕುತ ಗೊತ್ತಾಗದೆ ಇದ್ದೊ, ಈ ವಿಚಾರ ಎಲ್ಲಾವುಕು ಸಹ ಗೊತ್ತಾತ್. ಅವು ಎಲ್ಲವು ಕುದ್ದುಕಂಡ್ ಹೊತ್ತಾರೆ ಮುಟ್ಟ ಗ್ಯಾನ ಮಾಡಿ ಇದ್ ಬೇರ್ಯಾರ ಕೆಲ್ಸ ಅಲ್ಲಾ. ಇದೆಲ್ಲಾ ಆ ಸಾದ್‌ನ

ಕೆಲ್ಸತ ತೀರ್ಮಾನಕ್ಕೆ ಬಂದೋ.

ವಡನೆ ರಾಜ, ಆ ಪೊರ್ಕಿ ಸನ್ಯಾಸಿಗೆ ಇಷ್ಟೊಂದ್ ಸೊಕ್ಕಾ? ಅಂವನ ಈಗಲೇ ಹಿಡ್ದ್ ತನ್ನಿತ ಕಿರಿಚಿಕಂಡ್ ಹೇಳ್ತ್.ಸಾದ್‌ನಹಿಡ್ದ್ ತಂದೊ. ರಾಜನ ಮುಂದೆ ನಿಲ್ಲಿಸಿದೊ. ಸಾದ್‌ನ ಶಾಂತ ಮೊಕನ ನೋಡ್‌ಕನ ರಾಜನ ಸಿಟ್ಟ್ ಇನ್ನೂ ಜ್ಯಾಸ್ತಿ ಆತ್.

ಈ ಕಾಗದನ ಬರೆದಂವ ನೀನಾ? ಹೌದುತ್ತ ತಲೆ ಆಡಿಸಿತ್ ಸಾದ್. ರಾಜನ ವಿರುದ್ಧ ಆಗಿ ಹಿಂಗೆ ಬರ್ದ್ ಆರೋಪ ಮಾಡಿಕ್ಕೆ ನಿಂಗೆ ಎಸ್ಟ್ ಧೈರ್ಯತ ಕೇಳ್ತ್.

ಸಾದ್ ತಾಳ್ಮೆನ ಕಳ್‌ಕಣ್ತ್‌ಲೆ. ನಿಧಾನ ಆಗಿ ಉತ್ತರಿಸಿತ್. ರಾಜ ನಾನ್ ಕಾಗದಲಿ ಏನ್ ತಪ್ಪ್ ಬರ್‌ತ್ತ್ಲೆ. ನಾನ್ ನಿಂಗೆ ನಿನ್ನೆಅಷ್ಟೆಲ್ಲಾ ಗಿಣಿಂಗೆ ಹೇಳ್ದಂಗೆ ಹೇಳ್ದೆ. ನೀನ್ ಕೇಳ್ತ್‌ಲ್ಲೆ. ಈಗ ಓದಿ ಅರ್ಥಆದುತ್ತ ಗ್ಯಾನ ಮಾಡಿ ಹಿಂಗೆ ಕಾಗದ ಬರ್ದೆತ ಹೇಳಿ, ನೀನ್ ಸ್ವಲ್ಪ ಈ ಬಗ್ಗೆ ಯೋಚಿಸಿ ನೋಡ್‌ತ ಹೇಳ್ತ್.

ಈಗ ರಾಜಂಗೆ ಪಿತ್ತ ನೆತ್ತಿಗೇರ್ತ್. ಮೈಕೈ ಎಲ್ಲಾ ಉರ್ದು ಹೋತು. ನಿಂಗೆ ಸಾವ್‌ನ ಹೆದ್ರಿಕೆ ಇಲ್ಲೇಕಂಡದೆತ ಕೇಳ್ತ್. ರಾಜ ನೀನ್ ಏನ್ ಬೇಕಾರೂ ಮಾಡ್. ಆದ್ರೆ ನನ್ನ ಬರವಣಿಗೆಲಿ ಪ್ರಜೆಗಳ ಹಿತರಕ್ಷಣೆ ಉಟ್ಟು. ಅವರ ಹಿತಕ್ಕಾಗಿ ಪ್ರಾಣ ಕೊಡಕ್ಕುತ್ತಾದರೆ ಅದನ್ನ ನನ್ನ ಸೌಭಾಗ್ಯತ ಗ್ಯಾನ ಮಾಡ್ನೆತ ಹೇಳ್ತ್.

ಈಗ ರಾಜಂಗೆ ಅಚ್ಚರಿ ಆತ್. ಇಲ್ಲೀತನಕ ಇಂವ ತನ್ನ ಬಗ್ಗೆ ಚಿಂತಿಸದೆ ಪರರ ಬಗ್ಗೆಯೆ ಚಿಂತಿಸ್‌ತುಟ್ಟು. ಇಂತವನ ನಾನ್‌ಕಂಡೆ ಇತ್ತ್‌ಲ್ಲೆ. ಮಹಾತ್ಮ ಆದವುಕ್ಕೆ ಯಾವ ಹೆದ್ರಿಕೆ ಇರ್ರುಲ್ಲೆ. ರಾಜಂಗೂ ಸಹ ಅವು ಹೆದ್ರುದಿಲ್ಲೆ. ಅವು ನ್ಯಾಯ ಧರ್ಮಕ್ಕೆ ಮಾತ್ರ ಹೆದ್ರೊವುತ ಗ್ಯಾನ ಮಾಡಿ ಕಂಡ್ತ್.

ಈಗ ರಾಜಂಗೆ ಅರಿಯು ತಿಳಿಯು ಆತ್‌ತ ಗ್ಯಾನ ಮಾಡಿಕಂಡ್ ಸಾದ್ ಅಲ್ಲಿಂದ ಹೋರ್ಟು ಹೋತು. ರಾಜ ತನ್ನ ತಪ್ಪಿಗಾಗಿ ಪರಿತಪಿಸ್‌ತಿತ್. ಅಂವನ ಹಿಂದೆನೇ ರಾಜ ಓಡಿಬಂದ್ ಅಂವನ ಪಾದಕ್ಕೆರಗಿ ಕೇಳಿಕಣ್ತ್. ನಂಗೆ ಜ್ಞಾನೋದಯ ಮಾಡಿಸಿದಿರಿ. ರಾಜನ ಕರ್ತವ್ಯ ಏನ್‌ತ್ತೇಳಿ ನಂಗೆ ಈಗ ಗೊತ್ತಾತ್. ನಿನ್ನನ್ನ ಸುಖಾ ಸುಮ್ಮನೆ ನಿಂದಿಸಿದೆ. ದಯಮಾಡಿ ನನ್ನ ಕ್ಷಮಿಸ್, ಪ್ರಜೆಗಳ ಕುಷಿಯೇ ನನ್ನ ಕುಷಿತ ಹೇಳಿ ಬ್ಯಾಜಾರ್ ಮಾಡ್ತ್.

ರಾಜನ ಪರಿವರ್ತಿತ ಮನ್ಸ್‌ನ ಕಂಡ್ ಸೇರಿದ್ದವುಕ್ಕೆ ಕುಷಿ ಆತ್. ಎಲ್ಲವು ರಾಜಂಗೆ ಜಯಕಾರ ಹೇಳ್ದೊ. ಮಹಾತ್ಮರೆನಿಸಿದ ಸಾದ್‌ನ ಕೊಂಡಾಡ್ದೊ. ಆದರೆ ಅವರ ಕೊಂಡಾಡುವಿಕೆನ ಕೇಳಿಕೆ ಅಲ್ಲಿತ್ತ್‌ಲೆ. ತನ್ನ ಕೆಲ್ಸ ಮುಗಿ ಕಾಡ್ ದಾರಿನ ಹಿಡಿದಿತ್ತ್. ಹಂಗಾಗಿ ಜನಾಂಗ ಸ್ವಾರ್ಥಿಗ ಆದರೂ ಪರವಾಗಿಲ್ಲೆ. ಆದರೆ ದುರಂಕಾರಿಗ ಆಗಿ ಮೆರಿಕ್ಕಾಗದ್‌ತ ನನ್ನ ಅಭಿಪ್ರಾಯ.

ವಿ. ಸೂ. : ನನ್ನ ಅಪ್ಪನು ಅವ್ವನು ಹೇಳ್ದಂಗೆ ನಾನ್ ಬರ್ದ್ ತಿದ್ದಿ ಕಳ್ಸಿಸಿದ್. ಪ್ರಕಟ ಮಾಡೆ ಮಾಡಕ್ಕು, ಪ್ರಕಟಿಸಿದರೆ ನಿಮ್ಗೆ ತುಂಬಾ ಥ್ಯಾಂಕ್ಸ್.

-ಪ್ರೀನ್‌ಸೀ ವಸಂತಕುಮಾರ್, ಕತ್ರಿಕೊಲ್ಲಿ ಮನೆ, ಮೈಸೂರು.

"ಹಿತ್ತಲ ಗಿಡ ಮದ್ದಲ್ಲ"

ಜೇನು ತುಪ್ಪದ ಉಪಯೋಗ

1. ಜೇನು ತುಪ್ಪ ಸೇವನೆಯಿಂದ ಕಣ್ಣಿಗೆ ಹಿತವಾಗುತ್ತದೆ. ಮತ್ತು ಬುದ್ಧಿ ಶಕ್ತಿಯ ವೃದ್ಧಿ ಆಗುತ್ತದೆ.
2. ಜೇನು ತುಪ್ಪವನ್ನು ನಿಯಮಿತವಾಗಿ ಪ್ರತಿನಿತ್ಯವೂ ಬಳಸುವು ದರಿಂದ ಕಫ ನಿವಾರಣೆ ಆಗುತ್ತದೆ.
3. ದಿನ ನಿತ್ಯ ಎರಡು ಚಮಚ ಜೇನು ತುಪ್ಪವನ್ನು ಸೇವಿಸಿದರೆ ಮಲ ಬದ್ಧತೆಯ ನಿವಾರಣೆಯಾಗುವದು, ಮತ್ತು ಶರೀರ ದಲ್ಲಿನ ನರಗಳಿಗೆ ಹೆಚ್ಚು ಬಲ ಬರುವದು.
4. ದಢೂತಿ ಶರೀರದವರು ಪ್ರತಿದಿನ ನಾಲ್ಕು ಟೀ ಚಮಚ ಹಳೆಯದಾದ ಜೇನುತುಪ್ಪವನ್ನು ಸೇವಿಸುತ್ತಿದ್ದರೆ ಶರೀರದ ತೂಕ ಇಳಿಯುವುದು, ದೈಹಿಕ ಶಕ್ತಿ ಹೆಚ್ಚಾಗುವುದು. ಮತ್ತು ನರಗಳಲ್ಲಿ ಹೊಸ ಚೈತನ್ಯ ತುಂಬಿಕೊಳ್ಳುವುದು.
5. ಹಾಲಿನೊಂದಿಗೆ ಜೇನುತುಪ್ಪವನ್ನು ಬೆರೆಸಿ ಸೇವಿಸುವುದರಿಂದ ಆಯುಷ್ಯ ಪ್ರಮಾಣ ಹೆಚ್ಚಾಗುತ್ತದೆ.
6. ತುಳಸಿ ರಸಕ್ಕೆ ಸ್ವಲ್ಪ ಜೇನುತುಪ್ಪವನ್ನು ಬೆರೆಸಿ ಮೂರು ದಿನಗಳ ಕಾಲ ಮಕ್ಕಳಿಗೆ ಕುಡಿಸುವುದರಿಂದ ಕೆಮ್ಮು ಮತ್ತು ಜ್ವರದ ನಿವಾರಣೆಯಾಗುತ್ತದೆ.
7. ಜೇನುತುಪ್ಪವನ್ನು ಕ್ರಮವಾಗಿ ಸೇವಿಸಿದರೆ ಕ್ಷಯ ರೋಗಿಗಳ ಮತ್ತು ಮಧುಮೇಹ ರೋಗಿಗಳ ಶಾರೀರಿಕ ಕ್ರಿಯೆ ಸಲೀಸಾಗಿ ಆಗಿ ರೋಗ ಉಲ್ಬಣವಾಗುವುದಿಲ್ಲ.
8. ರಾತ್ರಿಯ ವೇಳೆ ಮಲಗುವ ಸಮಯದಲ್ಲಿ ಮೂರು ಟೀ ಚಮಚದಷ್ಟು ಜೇನುತುಪ್ಪವನ್ನು ಪ್ರತಿದಿನ ಸೇವಿಸುತ್ತಿದ್ದರೆ ಬಹುಮೂತ್ರ ರೋಗ ಗುಣವಾಗುವುದು.
9. ಮಕ್ಕಳಿಗೆ ಹಾಲಿನ ಜೊತೆ ಜೇನುತುಪ್ಪ ಬೆರೆಸಿ ಕೊಟ್ಟರೆ ರೋಗ ನಿರೋಧಕ ಶಕ್ತಿಬಂದು ಬೆಳವಣಿಗೆ ಚೆನ್ನಾಗಿ ಆಗುವದು.
10. ಜೇನು ತುಪ್ಪವನ್ನು ಸುಟ್ಟಗಾಯಕ್ಕೆ ಹಚ್ಚುತ್ತಿದ್ದರೆ ಉರಿ ನಿವಾರಣೆಯಾಗಿ ಗಾಯ ಬೇಗ ಮಾಯುತ್ತದೆ.
11. ಹುಣ್ಣಿಗೆ ಜೇನುತುಪ್ಪವನ್ನು ಹಚ್ಚುತ್ತಿದ್ದರೆ ಬೇಗನೆ ವಾಸಿ ಯಾಗುತ್ತದೆ. ಹುಲುಕಡ್ಡಿ ಇಸುಬು ಮುಂತಾದ ಚರ್ಮ ರೋಗ ಗಳು ಗುಣ ಹೊಂದುವವು.
12. ಸಣ್ಣ ಮತ್ತು ಜೇನು ತುಪ್ಪವನ್ನು ಕಲಸಿ ಉಳುಕಿದ ಭಾಗಕ್ಕೆ ಊತದಿಂದ ನೋಯುತ್ತಿರುವ ಭಾಗಕ್ಕೆ ಹಚ್ಚಿದರೆ ನೋವು ಕಡಿಮೆಯಾಗಿ ಊತ ಇಳಿಯುವುದು.
13. ಬಾಯಿ ಹುಣ್ಣಿಗೆ ಜೇನು ತುಪ್ಪವನ್ನು ಎರಡು ದಿನಗಳವರೆಗೆ ಹಚ್ಚುವುದರಿಂದ ಬೇಗನೆ ಗುಣವಾಗುವುದು.
14. ಕೀವು ತುಂಬಿಕೊಂಡಿರುವ ವಸಡುಗಳಿಗೆ ಜೇನುತುಪ್ಪವನ್ನು ಹಚ್ಚಿದರೆ ಹಲ್ಲು ನೋವು ಮತ್ತು ವಸಡುಗಳ ನೋವಿನ ಬಾಧೆ ಇಲ್ಲವಾಗುವುದು.
15. ಜೇನು ತುಪ್ಪವನ್ನುಪ್ರತಿನಿತ್ಯ ಸೇವಿಸುವುದರಿಂದ ಅನಿರೀಕ್ಷಿತ ವೀರ್ಯ ಸ್ಖಲನವಾಗುವುದಿಲ್ಲ. ತೃಪ್ತಿಯಿಂದ ಸಂಭೋಗ ಸುಖ ಪಡೆಯಬಹುದು.



ದಿ|| ಕೊಡಗನ ಚಂದ್ರಮ್ಮ
ಜನನ : 13-4-1943
ಮರಣ : 25-9-1997

6 ನೇ ವರ್ಷದ ಪುಣ್ಯಸ್ಮರಣೆ

ನೀನು ನನ್ನನ್ನಗಲಿ 6 ಸಂವತ್ಸರಗಳು ಗತಿಸಿದರೂ ಸದಾ ನಿನ್ನ ಒಡನಾಟದ ಆ ದಿನಗಳು ನನ್ನ ಸ್ಮೃತಿ ಪಟಲದಲ್ಲಿ ಅಚ್ಚಳಿಯದೆ ಉಳಿದಿದೆ. ನಿನ್ನ ಆತ್ಮಕ್ಕೆ ಸದಾ ಚಿರಶಾಂತಿಯನ್ನು ಬಯಸುವ.

ನಿನ್ನ ಪತಿ: ಎಂ. ರಾಮೇಗೌಡ, ಮುಖ್ಯೋಪಾಧ್ಯಾಯರು, ವಿಶ್ವೇಶ್ವರಯ್ಯ ಪ್ರೌಢಶಾಲೆ,
ಕ್ಯಾತನಹಳ್ಳಿ, ಪಾಂಡವಪುರ ತಾಲ್ಲೂಕು, ಮಂಡ್ಯ ಜಿಲ್ಲೆ.
ವಿಳಾಸ : ನಂ. 251, ಹೆಬ್ಬಾಳ್, 1 ನೇ ಫೇಸ್, ಲೋಕನಾಯಕ ನಗರ, ಮೈಸೂರು - 570 016
ಫೋನ್ : 2512049

ಮೈಸೂರಿನ ಗೌಡ ಬಾಂದವರಿಂದ ಸ್ವಾತಂತ್ರ್ಯೋತ್ಸವ ಆಚರಣೆ

ಆಗಸ್ಟ್ 15 ರಂದು ಇಲ್ಲಿನ ಕೊಡಗು ಗೌಡ ವಿದ್ಯಾರ್ಥಿ ನಿಲಯದಲ್ಲಿ 57 ನೇ ಸ್ವಾತಂತ್ರ್ಯೋತ್ಸವವನ್ನು ಸರಳವಾಗಿ ಆಚರಿಸಲಾಯಿತು. ಕೊಡಗು ಮತ್ತು ದ. ಕ. ಜಿಲ್ಲಾ ಮಹಿಳಾ ಸಂಘದ ಅಧ್ಯಕ್ಷೆ ಕೂಡಕಂಡಿ ಲಲಿತಾ ಸೋಮಣ್ಣ ಧ್ವಜಾರೋಹಣ ಮಾಡಿ ಮಾತನಾಡಿದರು.

ಕೊಡಗು ಮತ್ತು ದ. ಕ. ಜಿಲ್ಲಾ ಮಹಿಳಾ ಸಂಘ, ಮಾಜಿ ಸೈನಿಕರ ಕ್ಷೇಮಾಭಿವೃದ್ಧಿ ಸಂಘ ಹಾಗೂ ಕೊಡಗು ಗೌಡ ಸಂಘದ ಪದಾಧಿಕಾರಿಗಳ ಸಮ್ಮುಖದಲ್ಲಿ ಕಾರ್ಯಕ್ರಮವು ನಡೆಯಿತು. ಕೊನೆಯಲ್ಲಿ ಸಿಹಿ ಹಂಚಲಾಯಿತು. *- ನಿಶಾ, ಪಟ್ಟಡ*





Reg. No. KA/SK/MYS-88/2003 Registered : 10-01-96 TCI Kar. 09592

ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜ (ರಿ.)

1 ನೇ "ಸಿ" ಮುಖ್ಯ ರಸ್ತೆ, ಗಂಗಾನಗರ ಬಡಾವಣೆ, ಬೆಂಗಳೂರು - 560 032, Phone : 3433014

ಇವರ ಆಶ್ರಯದಲ್ಲಿ ದಿನಾಂಕ 14-9-2003 ರಂದು ನಡೆಯಲಿರುವ ಕಾರ್ಯಕ್ರಮಗಳ ವಿವರ

ಸಾಂಸ್ಕೃತಿಕ ಸ್ಪರ್ಧೆಗಳು - ಸಮಯ : ಅಪರಾಹ್ನ 1-00 ಘಂಟೆಗೆ

ಸ್ಥಳ: ಎ.ಡಿ.ಎ. ಕಲಾ ಮಂದಿರ,

" ಸರ್ವರಿಗೂ ಸುಸ್ವಾಗತ "

ರವೀಂದ್ರ ಕಲಾಕ್ಷೇತ್ರದ ಎದುರು, ಜೆ.ಸಿ. ರಸ್ತೆ, ಬೆಂಗಳೂರು -1 ಫೋನ್ : 2237445

(ಎ) ಸ್ಥಳದಲ್ಲಿ ಚಿತ್ರ ಬರೆಯುವುದು (ವಿಷಯ : ಪರಿಸರ/ ಯುದ್ಧ) (ಬಿ) ಛದ್ಮವೇಶ, ಏಕಪಾತ್ರಾಭಿನಯ, ಯಕ್ಷಗಾನ, ಭೂತಕೋಲ, ಸೋಬಾನೆ, ಭಾವಗೀತೆ, ಚಿತ್ರಗೀತೆ, ಭಕ್ತಿಗೀತೆ, ಜಾನಪದ ಗೀತೆ, ನಾಟಕ, ಭಾರತೀಯ ಮತ್ತು ಪಾಶ್ಚಿಮಾತ್ಯ ನೃತ್ಯಗಳು(ಇದರಲ್ಲಿ ಒಬ್ಬರು, ಎರಡು ವಿಭಾಗಗಳಲ್ಲಿ ಮಾತ್ರ ಭಾಗವಹಿಸಬಹುದು.) (ಸಿ) ರಸಪ್ರಶ್ನೆ

ವಿ. ಸೂ. :

1. ಪ್ರತಿಯೊಂದು ವಿಭಾಗದಲ್ಲೂ ಕನಿಷ್ಟ 5 ಮಂದಿ ಸ್ಪರ್ಧಿಗಳಿದ್ದಲ್ಲಿ ಮಾತ್ರ ಸ್ಪರ್ಧೆ ನಡೆಸಲಾಗುವುದು.
2. ಚಿತ್ರ ಬರೆಯಲು ಸಲಕರಣೆಗಳನ್ನು ಸ್ಪರ್ಧಿಗಳೇ ಒದಗಿಸಿಕೊಳ್ಳುವುದು. (ಅಪರಾಹ್ನ 1-00 ಘಂಟೆಗೆ ಹಾಜರಿರುವುದು)
3. 12-10-2003 ರ ಸಮಾರಂಭದ ವೆಚ್ಚಕ್ಕಾಗಿ ಸದಸ್ಯರು ಪ್ರತಿಯೊಬ್ಬರಿಗೆ (10 ವರ್ಷ ಮೇಲ್ಪಟ್ಟು) ರೂ. 50 ಚಂದಾ ಕೊಟ್ಟು ಸಹಕರಿಸಬೇಕಾಗಿ ವಿನಂತಿ.
4. 2002-2003 ರ ಲೆಕ್ಕ ಪತ್ರದ ವರದಿಯನ್ನು ಸಮಾಜದ ಕಛೇರಿಯಲ್ಲಿ ಪಡೆದುಕೊಳ್ಳಲು ವಿನಂತಿ.
   (ಸಂಜೆ : 5-00 ರಿಂದ 7-00 ಗಂಟೆ) ದೂರವಾಣಿ : 3433014
5. ಕ್ರೀಡೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರಯೋಜಕರಿದ್ದರೆ ಕೂಡಲೇ ಸಮಾಜದ ಕಛೇರಿಯನ್ನು ಸಂಪರ್ಕಿಸಬೇಕಾಗಿ ಕೋರಿಕೆ.
6. ಎಸ್. ಎಸ್. ಎಲ್.ಸಿ. ಹಾಗೂ ದ್ವಿತೀಯ ಪಿ.ಯು.ಸಿ.ಯಲ್ಲಿ ಅತ್ಯಧಿಕ ಅಂಕಗಳನ್ನು ಗಳಿಸಿದವರಿಗೆ ಬಹುಮಾನವನ್ನು ಕೊಡಲಾಗುವುದು. ವಿದ್ಯಾರ್ಥಿಗಳು ಅಂಕಪಟ್ಟಿಯ ನಕಲನ್ನು 15-9-2003 ನೇ ತಾರೀಖಿನೊಳಗೆ ಸಂಘದ ಕಛೇರಿಗೆ ಕಳುಹಿಸಿಕೊಡಬೇಕು.
7. ಕಾರ್ಯಕಾರಿ ಮಂಡಳಿ ಚುನಾವಣೆಯಲ್ಲಿ ಸ್ಪರ್ಧಿಸಲಿಚ್ಛಿಸುವ ಬಂಧುಗಳು 25-9-2003 ರೊಳಗೆ ತಮ್ಮ ನಾಮಪತ್ರವನ್ನು ಗೌಡ ಸಮಾಜದ ಕಛೇರಿಗೆ ಸಲ್ಲಿಸತಕ್ಕದ್ದು.
   ವಾರ್ಷಿಕ ಕ್ರೀಡಾ ಕೂಟ : ದಿನಾಂಕ 28-9-2003 ರಂದು, ಸಂತೋಷ ಕೂಟ : ದಿನಾಂಕ 12-10-2003 ರಂದು

ಅಧ್ಯಕ್ಷರು	ಆಡಳಿತ ಮಂಡಳಿ	ಕಾರ್ಯದರ್ಶಿ
ದಂಬೆಕೋಡಿ ಆನಂದ	ಸದಸ್ಯರುಗಳು	ನಂಗಾರು ನಿಂಗರಾಜು

"ಕೊಡಗು ಸಂಗಾತಿ" ಪಾಕ್ಷಿಕ ಪತ್ರಿಕೆ - ಮಡಿಕೇರಿ ಶಾಖೆ

ವಿಳಾಸ : ಪಾಂಡನ ಕಾಂಪೌಂಡು, 21/4, (1) ಸುಭೇದಾರ್ ಗುಡ್ಡೆಮನೆ ಅಪ್ಪಯ್ಯಗೌಡ ರಸ್ತೆ, ಮಡಿಕೇರಿ - 571 201
ದೂರವಾಣಿ ಸಂಖ್ಯೆ : 228047, 228380

1. ಸಂಗಾತಿ ಚಂದದಾರರ ವಿನಂತಿ ಮೇಲೆ ಅವರ ಅನುಕೂಲಕ್ಕಾಗಿ ಮಡಿಕೇರಿಯಲ್ಲಿ ಶಾಖೆಯನ್ನು ತೆರೆಯಲಾಗಿದೆ.
2. ಗೌಡ ಬಂಧುಗಳ ಅಪೇಕ್ಷೆ ಮೇರೆ ಇನ್ನುಂದೆ "ಸಂಗಾತಿ ವಧು/ವರರ ಅನ್ವೇಷಣಾ ಕೇಂದ್ರವಾಗಿ ಕಾರ್ಯ ನಿರ್ವಹಿಸಲಿದೆ. ಆಸಕ್ತ ಗೌಡರು ಇತರ ಬಂಧುಗಳು ಸಹ ಸಂಪರ್ಕಿಸಬಹುದು.
3. ಪತ್ರಿಕೆಯ ವಾಯಿದೆ ಮೀರಿದ ಸದಸ್ಯರು ಖಂಡಿತ ಇದರ ಸದುಪಯೋಗ ಪಡೆದುಕೊಳ್ಳುವಂತೆ ವಿಜ್ಞಾಪನೆ.
4. ಪತ್ರಿಕೆಯ ಬಿಡಿ ಪ್ರತಿಗಳು, ಗೌಡರ ಚಿಹ್ನೆ, ಹಸೆಮಣೆ ಪುಸ್ತಕ, ಶುಭಾಶಯ ಕವರ್, ಕ್ಯಾಸೆಟ್ಸ್, ಗೌಡ ಲೇಖಕರು ಬರೆದ ಪುಸ್ತಕಗಳು ಇತ್ಯಾದಿ ಇನ್ನುಂದೆ ಇಲ್ಲಿ ಲಭ್ಯವಾಗಲಿದೆ.
5. ವಾರದ ಸೋಮವಾರ ಮತ್ತು ಶುಕ್ರವಾರಗಳಂದು ಸಧ್ಯಕ್ಕೆ ಕಾರ್ಯ ನಿರ್ವಹಿಸಲಾಗುವುದು. ನಂತರ ಅನಿವಾರ್ಯವಾದರೆ ಸಮಯವನ್ನು ವಿಸ್ತರಿಸಲಾಗುವುದು. ಸಮಯ ಬೆಳಿಗ್ಗೆ 10-00 ರಿಂದ ಮಧ್ಯಾಹ್ನ 1 ಗಂಟೆ ತನಕ.
6. ಸಂಗಾತಿ ಚಂದಾ ವಸೂಲಾತಿಗಾಗಿ "ಕಮಿಷನ್ಸ್" ಮೇಲೆ ಕೆಲಸ ಮಾಡುವ ಆಸಕ್ತರನ್ನು ಈ ಮೂಲಕ ಆಹ್ವಾನಿಸಲಾಗಿದೆ.
7. ಮಡಿಕೇರಿ ಶಾಖೆಯಲ್ಲಿ ನಗದು ಮಾತ್ರ ಸ್ವೀಕರಿಸಲಾಗುವುದು
8. ಎಲ್ಲಾ ವ್ಯವಹಾರಗಳು ಮೈಸೂರಿನ ಕೇಂದ್ರ ಕಛೇರಿಯಲ್ಲಿ ಈ ಹಿಂದಿನಂತೆ ನಡೆಯುತ್ತದೆ. ಮೈಸೂರಿನ ಸ್ಥಳೀಯ ಚೆಕ್‌ಗಳನ್ನು ಮಾತ್ರ ಸ್ವೀಕರಿಸಲಾಗುವುದು.
9. ಮಡಿಕೇರಿ ಶಾಖೆಯಲ್ಲಿ DD/Cheque ಇತ್ಯಾದಿಗಳ ಬದಲು ನಗದಿನಲ್ಲಿ ವ್ಯವಹರಿಸಿ.
10. ಸಾಹಿತ್ಯಾಭಿಮಾನಿಗಳು ತಮ್ಮ ಲೇಖನವನ್ನು ಈ ಶಾಖೆಯಲ್ಲಿ ತಿಂಗಳ 20 ರ ಒಳಗೆ ನೀಡಬೇಕು.
11. ಮಡಿಕೇರಿ ಶಾಖೆಯ ಉಸ್ತುವಾರಿಯನ್ನು ನೋಡಿಕೊಳ್ಳುತ್ತಾರೆ ಶ್ರೀಮತಿ ಬೈತಡ್ಕ ಜಾನಕ್ಕಿ ಬೆಳ್ಯಪ್ಪನವರು.
12. *ಅನುಮಾನಗಳಿದ್ದಲ್ಲಿ ಸಂಪರ್ಕಿಸಿ : ಮೈಸೂರು : 2404290 ಮಡಿಕೇರಿ : 228047, 228380*
13. ಗೌಡ ಬಂಧುಗಳು ಕನಿಷ್ಟ ವರ್ಷಕ್ಕೊಮ್ಮೆಯಾದರು ಸಂಗಾತಿಯನ್ನು ಸಂಪರ್ಕಿಸಲು ಮರೆಯದಿರಿ.

ಒಲೆಗೊಂದರಂತೆ ಸದಸ್ಯರಾಗಿ ಪತ್ರಿಕೆಯನ್ನು ಬೆಳೆಸಿ ಪೋಷಿಸಿ.

-ಸಂಪಾದಕಿ

Kodagu Sangathi Kannada Fortnightly Edited, Published, Printed by **Pattada Sheelamani, # 12058**
"Sangathi Nilaya", Vijayanagar IV Stage, II Phase, Hinkal Post, Mysore - 570017. ☎ : 0821/2404290.
And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ☎ : 0821/2431792.